ಸಂಪುಟ: 04 ಸಂಚಿಕೆ: 226 ಪುಟಗಳು: 08 ಮಂಗಳವಾರ 29 ಅಕ್ಟೋಬರ್ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮತ್ತೊಬ್ಬರನ್ನು ಸೋಲಿಸುವುದು ಬಲು ಸುಲಭ. ಆದರೆ, ಮತ್ತೊಬ್ಬರನ್ನು ಗೆಲ್ಲುವುದು ಬಲು ಕಷ್ಟ.

## ಹುಚ್ಚುಚ್ಚಾಗಿ ಮಾತನಾಡುವುದನ್ನು ಸೋಮಶೇಖರ್ ನಿಲ್ಲಿಸಲಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿಯ 8 ಶಾಸಕರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಶಾಸಕ ಎಸ್.ಟಿ.ಸೋಮಶೇಖರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಮಾಜಿ ಸಚಿವ, ಶಾಸಕ ಭೈರತಿ ಬಸವರಾಜ್, ಸೋಮಶೇಖರ್ ಹುಚ್ಚುಚ್ಚಾಗಿ ಮಾತನಾಡುವುದನ್ನು ಮೊದಲು ನಿಲ್ಲಿಸಲಿ ಎಂದಿದ್ದಾರೆ. ತಮ್ಮ ವೈಯಕ್ತಿಕ ಲಾಭಕ್ಕಾಗಿ ಸೋಮಶೇಖರ್ ಹೀಗೆಲ್ಲ ಮಾತನಾಡುತ್ತಿದ್ದಾರೆ. ಹುಚ್ಚುಚ್ಚಾಗಿ ಮಾತನಾಡಿ ಬೇರೆಯವರ ತೇಜೋವಧೆ ಮಾಡಬಾರದು ಎಂದು ಕಿಡಿಕಾರಿದರು. ಬಿಜೆಪಿಯ ಯಾವ ಶಾಸಕರೂ ಕಾಂಗ್ರೆಸ್ ಗೆ ಹೋಗುತ್ತಿಲ್ಲ. ಸುಮ್ಮನೇ ಊಹಿಸಿಕೊಂಡು ಹೇಳಿಕೆಗಳನ್ನು ನೀಡಬಾರದು. ಯಾವ 8 ಶಾಸಕರು ಹೋಗುತ್ತಿದ್ದಾರೆ? ಅವರಿಗೆ ಗೊತ್ತಿದ್ದರೆ ಹೆಸರು ಹೇಳಲಿ. ಅದನ್ನು ಬಿಟ್ಟು ಸುಮ್ಮನೇ ಹೇಳಿಕೆ ನೀಡುವುದಲ್ಲ ಎಂದರು. ನಾವೆಲ್ಲರೂ ಕಾಂಗ್ರೆಸ್ ತೊರೆದು ಬಿಜೆಪಿಗೆ ಬಂದವರು. ಈಗ ಬಿಜೆಪಿಯ ಕಟ್ಟಾಳುಗಳಾಗಿ ದುಡಿಯುತ್ತಿದ್ದೇವೆ. ಯಾರು ಕೂಡ ಕಾಂಗ್ರೆಸ್ ಗೆ ಹೋಗುತ್ತಿಲ್ಲ ಎಂದು ತಿಳಿಸಿದರು.

## ಹೆಣ್ಣು ಮಕ್ಕಳು ಮಾತಾಡೋ ಭಾಷೆನಾ ಅದು?: ಸುರೇಶ್ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತಾಕತ್ತು ದಮ್ಮು ಅಂತ ಮಾತನಾಡಿದ್ದಾರೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳು ಮಾತನಾಡೋ ಭಾಷೆನಾ ಅದು? ಸುಸಂಸ್ಕೃತ ಭಾಷೆಯಲ್ಲಿ ಮಾತನಾಡೋರಿಗೆ ಮಾತ್ರ ನಾನು ಉತ್ತರಿಸುತ್ತೇನೆ ಎಂದು ಕರ್ನಾಟಕ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವಾಗ್ದಾಳಿ ನಡೆಸಿದ್ದಾರೆ. ನಾನು ಯಾವುದೇ ಅಕ್ರಮ ನಡೆಸಿಲ್ಲ, ತಾಕತ್ತಿದ್ದರೆ ಸುರೇಶ್ ಅವರು ದಾಖಲೆ ಬಿಡುಗಡೆ ಮಾಡಲಿ ಎಂದ ಅವರು, ನಮ್ಮ ದೇಶ, ರಾಜ್ಯದಲ್ಲಿ ಇರುವ ಮಹಿಳೆಯರು ಅತ್ಯಂತ ಸುಸಂಸ್ಕೃತರು ಎಂದು ನಂಬಿದ್ದೇನೆ. ಅದಕ್ಕೆಯೇ ಭಾರತಾಂಬೆ, ಕರ್ನಾಟಕ ಮಾತೆ ಎಂದು ತುಂಬಾ ರೆಸ್ಪೆಕ್ಟ್ ಕೊಟ್ಟು ಮಾತನಾಡುತ್ತೇವೆ. ಆದರೆ ಶೋಭಾ ಅವರ ಬಾಯಲ್ಲಿ ಬರೋವಂತದ್ದು ಮಹಿಳೆಯರ ಬಾಯಲ್ಲಿ ಬರೋವಂತಹ ಒಳ್ಳೆಯ ಮಾತಾ? ತಾಕತ್ತು, ದಮ್ಮು ಅಂದರೆ ಏನು? ಎಂದು ಪ್ರಶ್ನಿಸಿದರು.

## ವಕ್ಫ್ ಬೋರ್ಡ್‌ನಿಂದ ಯಾವುದೇ ರೈತರಿಗೆ ನೋಟಿಸ್ ನೀಡಿಲ್ಲ: ಸಚಿವ

• ಉದಯವಾಹಿನಿ, ಬೆಂಗಳೂರು

ವಕ್ಫ್ ಬೋರ್ಡ್‌ನಿಂದ ಯಾವುದೇ ರೈತರಿಗೂ ನೋಟಿಸ್ ನೀಡಿಲ್ಲ ಎಂಬುದಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದಂತ ಅವರು, ವಕ್ಫ್ ಬೋರ್ಡ್ ನಿಂದ ಯಾರಿಗೂ ನೋಟಿಸ್ ನೀಡಿಲ್ಲ. ರೈತರಿಗೆ ಮಂಜೂರಾದ ಜಮೀನಿಗೆ ನೋಟಿಸ್ ನೀಡಿಲ್ಲ. 121 ರೈತರಿಗೆ ನೋಟಿಸ್ ನೀಡಲಾಗಿದೆ. ಈ ನೋಟಿಸ್ ವಾಪಾಸ್ಸು ನಾವು ಪಡೆಯುತ್ತೇವೆ ಎಂದರು. ವಕ್ಫ್ ಬೋರ್ಡ್ ನಿಂದ ರೈತರಿಗೆ ನೋಟಿಸ್ ನೀಡಿದ್ದಾರೆ ಎಂಬುದಾಗಿ ಬಿಜೆಪಿಯವರು ಉದ್ದೇಶಪೂರ್ವಕವಾಗಿ ಗಲಭೆ ಏಳಿಸುತ್ತಿದ್ದಾರೆ ಎಂಬುದಾಗಿ ವಾಗ್ದಾಳಿ ನಡೆಸಿದರು.

## ಬಿವೈವಿ ನಾಯಕತ್ವದಲ್ಲಿ ನಡೆಯೋ ಬೈ ಎಲೆಕ್ಷನ್‌ನಲ್ಲಿ ಭಾಗವಹಿಸಲ್ಲ

• ಉದಯವಾಹಿನಿ, ಬೆಳಗಾವಿ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ನಾಯಕತ್ವದಲ್ಲಿ ನಡೆಯುವ ಉಪಚುನಾವಣೆಯಲ್ಲಿ ನಾನು ಭಾಗವಹಿಸುವುದಿಲ್ಲ ಎಂದು ಶಾಸಕ ರಮೇಶ್ ಜಾರಕಿಹೊಳಿ ಹೇಳಿದ್ದಾರೆ. ವಿಜಯೇಂದ್ರ ನಾಯಕತ್ವವನ್ನು ನಾನು ಒಪ್ಪಲ್ಲ ಎಂದು ಪುನರುಚ್ಚರಿಸಿದ್ದಾರೆ. ಅವರ ನಾಯಕತ್ವದಲ್ಲಿ ನಡೆಯುವ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಭಾಗವಹಿಸಲ್ಲ. ಆದರೆ ನಮ್ಮ ಎನ್‌ಡಿಎ ಅಭ್ಯರ್ಥಿಗಳಿಗೆ ಒಳ್ಳೆಯದಾಗಲಿ ಎಂದರು. ಸಿ.ಪಿ ಯೋಗೇಶ್ವರ್ ಒಳ್ಳೆಯ ಮನುಷ್ಯ. ಇಲ್ಲಿ ಅವರಿಗೆ ಟಿಕೆಟ್ ಸಿಗದ ಕಾರಣ ಕಾಂಗ್ರೆಸ್‌ಗೆ ಹೋಗಿದ್ದಾರೆ. ಸೋಲುತ್ತಾರೋ ಅಥವಾ ಗೆಲ್ಲುತ್ತಾರೋ ಗೊತ್ತಿಲ್ಲ ಎಂದು ಹೇಳಿದರು. ಮಹಾರಾಷ್ಟ್ರ ಚುನಾವಣೆಯಲ್ಲಿ ಪ್ರಚಾರದ ನೇತೃತ್ವ ವಹಿಸುವಂತೆ ಕೇಳಿದ್ದಾರೆ. ಆದರೆ ನನ್ನ ಬದಲಿಗೆ ಅಣ್ಣಾಸಾಹೇಬ ಜೊಲ್ಲೆ ಅವರಿಗೆ ಕೊಡುವಂತೆ ಕೇಳಿದ್ದೇನೆ ಎಂದು ತಿಳಿಸಿದರು.

## ಬೆಂಗಳೂರಿನಲ್ಲಿ ಇದುವರೆಗೆ 14 ಸಾವಿರ ರಸ್ತೆ ಗುಂಡಿಗಳ ದುರಸ್ಥಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಇದುವರೆಗೆ 14 ಸಾವಿರ ರಸ್ತೆ ಗುಂಡಿಗಳ ದುರಸ್ಥಿ ಮಾಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.ಬೆಂಗಳೂರಿನಲ್ಲಿ ಇದುವರೆಗೆ 14 ಸಾವಿರ ರಸ್ತೆ ಗುಂಡಿಗಳ ದುರಸ್ಥಿ ಮಾಡಲಾಗಿದೆ ಮಳೆಯಿಂದ ಹಾನಿಗೀಡಾಗಿರುವ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ 14 ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಿದ್ದೇವೆ.ಮತ್ತೆಯೂ ಮಳೆ ಬಂದಿದ್ದರಿಂದ ಮತ್ತಷ್ಟು ಗುಂಡಿಗಳು ಆಗಿದ್ದು, ಅವನ್ನೂ ಮುಚ್ಚಲು ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

# ಭಾರತ–ಚೀನಾ ಗಡಿ ಶಾಂತಿ ಸ್ಥಾಪನೆಗೆ ಮುನ್ನುಡಿ

● ವಿವಾದಿತ ಗಡಿ ಬಿಂದುಗಳು ಯಾವುವು..? ● ಗಡಿಯಲ್ಲಿ ಶಾಂತಿ ಸ್ಥಾಪನೆಗೆ ಭಾರತ-ಚೀನಾ ಹ್ಯಾಂಡ್‌ಶೇಕ್ ● ಫಲ ನೀಡುತ್ತಾ ಒಪ್ಪಂದ..? ● ಗಡಿ ವಿವಾದ ಹುಟ್ಟಿಕೊಂಡಿದ್ದೇಗೆ..?





1. ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಪರಸ್ಪರ ಹ್ಯಾಂಡ್ ಶೇಕ್ ಮಾಡಿ ಶಾಂತಿ ಮಾತುಕತೆಗೆ ಮುನ್ನುಡಿ
2. ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಘರ್ಷಕ್ಕೆ ಏಳು ದಶಕಗಳ ಇತಿಹಾಸವಿದೆ.
3. ಚೀನಾದ 4 ಸೈನಿಕರು ಮೃತಪಟ್ಟರು. ಸೈನಿಕರ ಬಲಿದಾನವು ಭಾರತದಲ್ಲಿ ಆಕ್ರೋಶಕ್ಕೆ ಕಾರಣ

**2021ರ ಜನವರಿ**

ಭಾರತೀಯ ಮತ್ತು ಚೀನೀ ಸೈನಿಕರು ಈಶಾನ್ಯ ಭಾರತದ ಸಿಕ್ಕಿಂನಲ್ಲಿ ಮತ್ತೆ ಮುಖಾಮುಖಿಯಾದರು.

**2022ರ ಡಿಸೆಂಬರ್**

ಭಾರತದ ಈಶಾನ್ಯ ರಾಜ್ಯವಾದ ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ಸಣ್ಣ ಗಡಿ ಘರ್ಷಣೆಗಳು ನಡೆದವು. ಅದರ ಕೆಲವು ಭಾಗಗಳು ಚೀನಾದಿಂದಲೂ ಹಕ್ಕು ಪಡೆದಿವೆ. ಭಾರತೀಯ ಪಡೆಗಳು ದಿನನಿತ್ಯದ ಗಸ್ತು ತಿರುಗಲು ಅಡ್ಡಿಪಡಿಸುತ್ತಿವೆ ಎಂದು ಬೀಜಿಂಗ್ ಆರೋಪಿಸಿತು. ಇತ್ತ ನವದೆಹಲಿಯು, ಚೀನಾ ಸೈನಿಕರು ಭಾರತೀಯ ಭೂಪ್ರದೇಶವನ್ನು ಅತಿಕ್ರಮಿಸಿದ್ದಾರೆ. ಈಗಿರುವ ಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸಿದ್ದಾರೆಂದು ಆರೋಪಿಸಿತು. ಹೀಗೆ ಪರಸ್ಪರರಲ್ಲಿ ಆರೋಪ-ಪ್ರತ್ಯಾರೋಪದ ಮಾತು ಕೇಳಿಬಂತು.

• ಉದಯವಾಹಿನಿ, ದೆಹಲಿ

ಭಾರತ ಮತ್ತು ಚೀನಾ ತಮ್ಮ ವಿವಾದಿತ ಗಡಿಯಲ್ಲಿ ಮಿಲಿಟರಿ ಬಿಕ್ಕಟ್ಟನ್ನು ಕೊನೆಗೊಳಿಸಲು ಮಹತ್ವದ ಒಪ್ಪಂದ ಮಾಡಿಕೊಂಡಿವೆ. ಉಭಯ ದೇಶಗಳ ದಶಕಗಳ ರಾಜತಾಂತ್ರಿಕ ಬಿಕ್ಕಟ್ಟು, ಘರ್ಷಣೆಗಳಿಗೆ ಇತಿಶ್ರೀ ಹಾಡಲು ಮುಂದಡಿ ಇಟ್ಟಿವೆ. ರಷ್ಯಾದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಪರಸ್ಪರ ಹ್ಯಾಂಡ್ ಶೇಕ್ ಮಾಡಿ ಶಾಂತಿ ಮಾತುಕತೆಗೆ ಮುನ್ನುಡಿ ಬರೆದರು. ವಿಶ್ವದ ದೊಡ್ಡ ಆರ್ಥಿಕತೆಗಳು ಸ್ನೇಹ-ಸೌಹಾರ್ದದ ಉದ್ದೇಶ, ಭವಿಷ್ಯದ ಹಿತದೃಷ್ಟಿಯಿಂದ ಶಾಂತಿ ಒಪ್ಪಂದ ಮಾಡಿಕೊಂಡವು. ಒಪ್ಪಂದದ ಬೆನ್ನಲ್ಲೇ ಪೂರ್ವ ಲಡಾಖ್‌ನಲ್ಲಿ ಭಾರತ , ಚೀನಾ ನಿಯೋಜಿಸಿರುವ ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ಶುರು ಮಾಡಿವೆ. ಏಷ್ಯಾದ ದೈತರ ನಡುವಿನ ಒಪ್ಪಂದದಿಂದ ದೊಡ್ಡ ಗಡಿ ವಿವಾದವೇನು ಬಗೆಹರಿದಿಲ್ಲ. ಆದರೆ ಒಪ್ಪಂದವು ಲಡಾಖ್ ಪ್ರದೇಶದ ಗಡಿಯುದ್ದಕ್ಕೂ ಎರಡೂ ದೇಶಗಳ ಗಸ್ತು ಪುನಾರಂಭಕ್ಕೆ ಅವಕಾಶ ಕಲ್ಪಿಸಿದೆ. ಜೊತೆಗೆ ತಮ್ಮ ಪ್ರಾದೇಶಿಕ ಹಕ್ಕುಗಳನ್ನು ಪ್ರತಿಪಾದಿಸಲು ಅನುವು ಮಾಡಿಕೊಟ್ಟಿದೆ. ಅಷ್ಟಕ್ಕೂ ಏನಿದು ಭಾರತ-ಚೀನಾ ಗಡಿ ಒಪ್ಪಂದ..? ಗಡಿ ವಿವಾದ ಏನು..? ಗಡಿ ಸಂಘರ್ಷ ತಲೆದೋರಿದ್ದೇಗೆ..? ಈಗ ಎರಡೂ ದೇಶಗಳು ಮಾಡಿಕೊಂಡ ಒಪ್ಪಂದ ಏನು ಮತ್ತು ಉದ್ದೇಶವೇನು..? ಒಪ್ಪಂದದಿಂದ ಇಬ್ಬರಿಗೂ ಆಗುವ ಪ್ರಯೋಜನಗಳೇನು..?



**ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆ**

**2020ರಿಂದ ಭಾರತ-ಚೀನಾ ಸಂಬಂಧದಲ್ಲಾದ ಬದಲಾವಣೆ**

ಈ ವರ್ಷದ ಮೇ ತಿಂಗಳಲ್ಲಿ ಚೀನಾ ಒಪ್ಪಂದ ಮುರಿದು ರೇಖೆ ಬದಲಿಸಲು ಯತ್ನಿಸಿತು. ಇದು ಉಭಯ ದೇಶಗಳ ನಡುವೆ ಘರ್ಷಣೆಗೆ ಕಾರಣವಾಯಿತು. ಜೂನ್ ತಿಂಗಳಲ್ಲಿ ಗಲ್ವಾನ್‌ನಲ್ಲಿ ಎರಡೂ ದೇಶಗಳ ಸೈನಿಕರು ಮುಖಾಮುಖಿಯಾದರು. ಸಂಘರ್ಷದಲ್ಲಿ ಭಾರತದ 20 ಸೈನಿಕರು ಹುತಾತ್ಮರಾದರು. ಚೀನಾದ 4 ಸೈನಿಕರು ಮೃತಪಟ್ಟರು. ಸೈನಿಕರ ಬಲಿದಾನವು ಭಾರತದಲ್ಲಿ ಆಕ್ರೋಶಕ್ಕೆ ಕಾರಣವಾಯಿತು. ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಎರಡು ಪರಮಾಣು ಶಸ್ತ್ರಸಜ್ಜಿತ ದೇಶಗಳ ನಡುವಿನ ಉದ್ವಿಗ್ನತೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಳವಳ ಉಂಟು ಮಾಡಿತು. ಘರ್ಷಣೆ ಪರಿಣಾಮವಾಗಿ, ಭಾರತವು ಚೀನಾದಿಂದ ಹೂಡಿಕೆಗಳನ್ನು ನಿರ್ಬಂಧಿಸಿತು. ಟಿಕ್ ಟಾಕ್ ಸೇರಿದಂತೆ ಡಜನ್‌ಗಟ್ಟಲೆ ಜನಪ್ರಿಯ ಚೀನೀ ಮೊಬೈಲ್ ಅಪ್ಲಿಕೇಷನ್‌ಗಳನ್ನು ನಿಷೇಧಿಸಿತು. ನೇರ ವಿಮಾನಯಾನ ಕಡಿತಗೊಳಿಸಿತು. ಇದುವರೆಗೆ ನಿಷೇಧಿತ ಚೀನೀ ಅಪ್ಲಿಕೇಷನ್‌ಗಳ ಸಂಖ್ಯೆ 321ಕ್ಕೆ ಏರಿದೆ.



**ಭಾರತದ ವಿಚಾರದಲ್ಲಿ ಚೀನಾ ಮೆತ್ತಗಾಗಿದ್ದೇಕೆ..?**

ಭಾರತದ ವಿಚಾರದಲ್ಲಿ ಚೀನಾ ತಣ್ಣಗಾಗಲು ಹಲವು ಕಾರಣಗಳಿವೆ. ಎರಡು ದೇಶಗಳ ವ್ಯಾಪಾರ ಸಂಬಂಧಗಳು ಪ್ರಮುಖ ಪ್ರೋತ್ಸಾಹಕವಾಗಿದ್ದವು. ಚೀನಾ ಬಹಳ ಹಿಂದಿನಿಂದಲೂ ಯುನೈಟೆಡ್ ಸ್ಟೇಟ್ಸ್ ಜೊತೆಗೆ ಭಾರತದ ಅಗ್ರ ಎರಡು ವ್ಯಾಪಾರ ಪಾಲುದಾರರಲ್ಲಿ ಒಂದಾಗಿದೆ. 2023 ಮತ್ತು 2024 ರಲ್ಲಿ, ಇದು ದ್ವಿಪಕ್ಷೀಯ ವಾಣಿಜ್ಯದಲ್ಲಿ 118.4 ಬಿಲಿಯನ್ ಡಾಲರ್ ಜೊತೆಗೆ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ಆಗಿತ್ತು. ಬೀಜಿಂಗ್ ಭಾರತದ ಅತಿದೊಡ್ಡ ಸರಕುಗಳ ಮೂಲವಾಗಿದೆ. ಜೊತೆಗೆ ದೂರಸಂಪರ್ಕ ಯಂತ್ರಾಂಶದಿಂದ ಹಿಡಿದು ಭಾರತೀಯ ಔಷಧೀಯ ಉದ್ಯಮಕ್ಕೆ ಕಚ್ಚಾ ವಸ್ತುಗಳ ವರೆಗೆ ಕೈಗಾರಿಕಾ ಉತ್ಪನ್ನಗಳ ಅತಿದೊಡ್ಡ ಪೂರೈಕೆದಾರನಾಗಿ ಉಳಿದಿದೆ.

**ಏನು ಒಪ್ಪಂದ...?**

ರಷ್ಯಾದ ಕಜಾನ್‌ನಲ್ಲಿ ಈಚೆಗೆ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಪಾಲ್ಗೊಂಡಿದ್ದರು. ಇಬ್ಬರೂ ನಾಯಕರ ಜೊತೆಗೆ ದ್ವಿಪಕ್ಷೀಯ ಮಾತುಕತೆಯಾಯಿತು. ಈ ವೇಳೆ ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಸೇನೆಯ ಮತ್ತು ಗಸ್ತು ತಿರುಗುವಿಕೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಂಡರು. ಎಲ್‌ಎಸಿ ಪಶ್ಚಿಮದಲ್ಲಿ ಲಡಾಖ್‌ನಿಂದ ಭಾರತದ ಪೂರ್ವ ರಾಜ್ಯವಾದ ಅರುಣಾಚಲ ಪ್ರದೇಶದವರೆಗೆ (3,488 ಕಿಮೀ) ವ್ಯಾಪಿಸಿದೆ.

**ಗಡಿ ವಿವಾದ ಹುಟ್ಟಿಕೊಂಡಿದ್ದೇಗೆ?**

ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಘರ್ಷಕ್ಕೆ ಏಳು ದಶಕಗಳ ಇತಿಹಾಸವಿದೆ. ಗಡಿಯ ಗಡಿರೇಖೆಯ ವಿಚಾರವಾಗಿ 1962ರಲ್ಲಿ ಎರಡೂ ರಾಷ್ಟ್ರಗಳ ನಡುವೆ ರಕ್ತಸಿಕ್ತ ಯುದ್ಧ ನಡೆಯಿತು. ಯುದ್ಧದಲ್ಲಿ ಭಾರತವು ಅವಮಾನಕರ ಸೋಲನ್ನು ಅನುಭವಿಸಿತು. ಲಡಾಖ್‌ನ ಈಶಾನ್ಯದಲ್ಲಿರುವ ಅಕ್ಸಾಯ್ ಚಿನ್‌ನಲ್ಲಿ ಒಂದು ಭಾಗವನ್ನು ಭಾರತ ಕಳೆದುಕೊಂಡಿತು. ಇದು ಇಬ್ಬರ ನಡುವಿನ ವಿವಾದದ ಕೇಂದ್ರಬಿಂದುವಾಗಿ ಉಳಿಯಿತು.

ಎಲ್‌ಎಸಿ ರೂಪಿಸಿಕೊಂಡ ಭಾರತ-ಚೀನಾ: 1962ರ ಯುದ್ಧದ ನಂತರ ಎರಡೂ ದೇಶಗಳು ಪರಸ್ಪರ ಮಾತುಕತೆಯೊಂದಿಗೆ ಎಲ್ ಎಸಿ ರೂಪಿಸಿಕೊಂಡವು. 1990ರ ದಶಕದಲ್ಲಿ ಗಡಿ ಒಪ್ಪಂದದ ನಂತರ ರಾಜತಾಂತ್ರಿಕ ಸಂಬಂಧ ಚೇತರಿಸಿಕೊಂಡಿತು. 1993 ಮತ್ತು 1996ರ ಒಪ್ಪಂದಗಳು ಇಬ್ಬರ ನಡುವಿನ ಶಾಂತಿ-ಸೌಹಾರ್ದತೆಗೆ ಮೈಲುಗಲ್ಲಾಗಿತ್ತು. 1962ರ ನಂತರ ಅರ್ಧಶತಮಾನಕ್ಕೂ ಹೆಚ್ಚು ಕಾಲ ಗಡಿಯಲ್ಲಿ ಯಾವುದೇ ಸಂಘರ್ಷ ನಡೆಯಲಿಲ್ಲ. ಆದರೆ, ಕಾಲಾನಂತರದಲ್ಲಿ ಗಡಿಯಲ್ಲಿ ಸಮಸ್ಯೆ ತಲೆದೋರಿತು. 2020ರಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ಆದ ಘರ್ಷಣೆಯಿಂದ ಎರಡೂ ದೇಶಗಳ ಸಂಬಂಧ ಮುರಿಯುವ ಹಂತಕ್ಕೆ ಹೋಯಿತು.

# ರೈತರು ದಂಗೆ ಎದ್ದರೆ ಕಾಂಗ್ರೆಸ್ ಸರ್ವನಾಶ ಆಗಲಿದೆ

• ಉದಯವಾಹಿನಿ, ಬೆಂಗಳೂರು

ವಿಜಯಪುರ ರೈತರಿಗೆ ವಕ್ಫ್ ಬೋರ್ಡ್‌ನಿಂದ ನೋಟಿಸ್ ನೀಡಿದ ವಿಚಾರವಾಗಿ ಕಾಂಗ್ರೆಸ್ ಸರ್ಕಾರ ಬಂದರೆ ವಿಶೇಷವಾಗಿ ಮುಸ್ಲಿಮರನ್ನು ಓಲೈಕೆ ಮಾಡುತ್ತಾರೆ. ಟಿಪ್ಪು ಸುಲ್ತಾನ್ ಜಯಂತಿಗೆ ಆದೇಶ ಹೊರಡಿಸಿದ್ದರು.ಅವರೇನು ಕೇಳಿದ್ರಾ ಜಯಂತಿ ಮಾಡಿ ಅಂತ ಎಂದು ವಿಧಾನಸೌಧದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಕಿಡಿ ಕಾರಿದರು.

ಕಾಂಗ್ರೆಸಿಗರು ಎಲ್ಲಾ ಆಸ್ತಿಯನ್ನ ವಕ್ಫ್ ಬೋರ್ಡ್‌ಗೆ ಬರೆಯುತ್ತಾರೆ. ಅವನ್ಯಾರೋ ಪಾರ್ಲಿಮೆಂಟ್ ನಮ್ಮದೇ ಅಂತ ಹೇಳಿದ್ದಾನೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ವಿಧಾನಸೌಧ, ಲೋಕಸಭೆ ಅವರದ್ದೇ. ಎಲ್ಲಾ ಆಸ್ತಿಗಳು ಮುಸ್ಲಿಮರದಂತೆ ಏನು ಅರಬ್ ನವರು ಕೊಟ್ರಾ? ಕಾಂಗ್ರೆಸ್ ಪಕ್ಷಕ್ಕೆ ಎಂತಹ ಹೀನಾಯ ಪರಿಸ್ಥಿತಿ ಬಂದಿದೆ ಅಂದರೆ ಮಾತು ಎತ್ತಿದರೆ ಎಲ್ಲಾವನ್ನೂ ಎಸ್‌ಐಟಿ ಎಸ್‌ಐಟಿ ಎನ್ನುತ್ತಾರೆ. ಈಗ ತಹಶೀಲ್ದಾರ್ ತಪ್ಪು ಆಗಿದ್ದು ಬಿಜೆಪಿ ಕಾಲದಲ್ಲಿ ಅಂತ ಹೇಳುತ್ತಿದ್ದಾರೆ. ಕಾಲ ಯಾವುದು ಅನ್ನೋದಲ್ಲ ತಪ್ಪು ಏನಾಗಿದೆ ಅನ್ನೋದು ಮುಖ್ಯ.ಯಾರ ಕಾಲದಲ್ಲಿ ಆಗಲಿ ತಪ್ಪು ಸರಿಪಡಿಸಬೇಕು. ಕಾಂಗ್ರೆಸ್‌ನವರು ಎಲ್ಲಾವನ್ನು ಅಲ್ಪಸಂಖ್ಯಾತರಿಗೆ ಬರೆದು ಕೊಡುತ್ತಾರೆ. ಕಾಂಗ್ರೆಸ್ ಅಲ್ಪಸಂಖ್ಯಾತರ ಓಲೈಕೆಯ ಪ್ರವೃತ್ತಿ ಬಿಡಬೇಕು. ಈ ಒಂದು ಘಟನೆಯಿಂದ ಮುಂದೆ ಆಗುವ ಅನಾಹುತಕ್ಕೆ ಕಾಂಗ್ರೆಸ್ ನೇರ ಕಾರಣವಾಗಲಿದೆ. ರೈತರು ದಂಗೆ ಎದ್ದರೆ ಕಾಂಗ್ರೆಸ್ ಸರ್ವನಾಶ ಆಗಲಿದೆ. ತಹಶೀಲ್ದಾರ್ ತಪ್ಪು ಮಾಡಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಿ ಎಂದು ಆರ್ ಅಶೋಕ್ ಆಗ್ರಹಿಸಿದರು.



**ವಕ್ಫ್ ಬೋರ್ಡ್ ನೋಟಿಸ್ ನೀಡಿದ ವಿಚಾರ**

**ಜಮೀರ್ ಅಹ್ಮದ್ ಒಬ್ಬ ಆಧುನಿಕ ಟಿಪ್ಪು ಸುಲ್ತಾನ್**

ವಕ್ಫ್ ಬೋರ್ಡ್ ನಿಂದ ಲ್ಯಾಂಡ್ ಜಿಹಾದ್ ಆರಂಭವಾಗಿದೆ. ಸಚಿವ ಜಮೀರ್ ಅಹ್ಮದ್ ಒಬ್ಬ ಆಧುನಿಕ ಟಿಪ್ಪು ಸುಲ್ತಾನ್. ಬಡ ರೈತರ ಜಮೀನನ್ನು ಕಬಳಿಸಲು ಯತ್ನ ನಡೆದಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕರ್ನಾಟಕ ಒಂದೇ ಸಮುದಾಯಕ್ಕೆ ಸೇರಿದ್ದು ಎಂಬಂತೆ ಆಡುತ್ತಿದೆ. ಅಲ್ಪಸಂಖ್ಯಾತರ ಓಲೈಕೆಗಾಗಿ ಈಗ ರೈತರ ಭೂಮಿಯನ್ನೇ ವಕ್ಫ್ ವಶಕ್ಕೆ ನೀಡಲಾಗಿದೆ. ವಿಜಯಪುರ ಜಿಲ್ಲೆಯ ಹೊನವಾಡ ಗ್ರಾಮದಲ್ಲಿ 12 ಸಾವಿರ ಎಕರೆ ಹಾಗೂ ಇಡೀ ಜಿಲ್ಲೆಯಲ್ಲಿ 15 ಸಾವಿರ ಎಕರೆ ಭೂಮಿಯನ್ನು ಕಬಳಿಸಲು ವಕ್ಫ್ ಬೋರ್ಡ್ ಯೋಜನೆ ರೂಪಿಸಿದೆ. ಇದಕ್ಕಾಗಿ ಕಂದಾಯ ಇಲಾಖೆಯಿಂದ ರೈತರಿಗೆ ತಿಳುವಳಿಕೆ ನೋಟಿಸ್ ನೀಡಲಾಗಿದೆ. ಇದು ಸರ್ಕಾರದಿಂದಲೇ ನಡೆಯುತ್ತಿರುವ ಲ್ಯಾಂಡ್ ಜಿಹಾದ್ ಎಂದು ಆರ್. ಅಶೋಕ್ ಕಿಡಿಕಾರಿದರು.

# ಜೆಡಿಎಸ್ ಸಮೀಕ್ಷೆಯಲ್ಲಿ ನಿಖಿಲ್ ಕುಮಾರಸ್ವಾಮಿಗೆ ಜಯ; ಆದರೆ ಭಾರೀ ಪೈಪೋಟಿ

## ನಿಖಿಲ್ ಕುಮಾರಸ್ವಾಮಿ ಕುರಿತು ಚನ್ನಪಟ್ಟಣ ಜನತೆಯ ನಾಡಿಮಿಡಿತ ಹೇಗಿದೆ ಎಂಬ ಬಗ್ಗೆ ಜೆಡಿಎಸ್ ರಾಜ್ಯ ಘಟಕ ಸಮೀಕ್ಷೆ

• ಉದಯವಾಹಿನಿ, ಬೆಂಗಳೂರು

ಲೋಕಸಭಾ ಚುನಾವಣೆಯ ಬಳಿಯ ರಾಜ್ಯದಲ್ಲಿ ಬೈ ಎಲೆಕ್ಷನ್ ಭರಾಟೆ ಜೋತಾಗಿ ಸದ್ದು ಮಾಡುತ್ತಿದೆ. ಮೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪೈಕಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ತೀವ್ರ ರಂಗೇರುತ್ತಿದ್ದು, ನಿಖಿಲ್ ಕುಮಾರಸ್ವಾಮಿ ವಿರುದ್ಧ ಸಿ ಪಿ ಯೋಗೇಶ್ವರ್ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ದಳಪತಿಗಳಿ ಪ್ರತಿಷ್ಠೆಯಾಗಿದ್ದು, ಶತಾಯುಗತಾಯ ಚನ್ನಪಟ್ಟಣವನ್ನ ಗೆಲ್ಲುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ನಡೆಸಿದ್ದು, ನಿಖಿಲ್ ಕುಮಾರಸ್ವಾಮಿ ಗೆಲುವಿಗೆ ದಳಪತಿಗಳು ಅಬ್ಬರದ ಪ್ರಚಾರವನ್ನ ನಡೆಸುತ್ತಿದ್ದಾರೆ. ಇತ್ತ ನಿಖಿಲ್ ಕುಮಾರಸ್ವಾಮಿ ಕುರಿತು ಚನ್ನಪಟ್ಟಣ ಜನತೆಯ ನಾಡಿಮಿಡಿತ ಹೇಗಿದೆ ಎಂಬ ಬಗ್ಗೆ ಜೆಡಿಎಸ್ ರಾಜ್ಯ ಘಟಕ ಸಮೀಕ್ಷೆಯನ್ನ ನಡೆಸಿದ್ದು, ಈ ಸಮೀಕ್ಷೆಯಲ್ಲಿ ಗೆಲುವು ಯಾರಿಗೆ ಎಂದು ತಿಳಿದು ಬಂದಿದೆ.



**ದಳಪತಿಗಳು ಅಬ್ಬರದ ಪ್ರಚಾರ**

ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರು ಮೊದಲ ಬಾರಿಗೆ 2019 ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಂಡ್ಯದಿಂದ ಸ್ಪರ್ಧೆ ನಡೆಸಿದ್ದರು. 2019ರ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಸುಮಲತಾ ಅವರನ್ನು ಬಿಜೆಪಿ ಬೆಂಬಲಿಸಿತ್ತು, ನಿಖಿಲ್ ಕುಮಾರಸ್ವಾಮಿ ಅವರನ್ನ ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದರು. 2019 ಲೋಕಸಭಾ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಗೆಲುವು ಸಾಧಿಸುವುದು ಖಚಿತ ಎಂದು ಹೆಚ್ಚು ನಿರೀಕ್ಷೆಯನ್ನ ಇಟ್ಟುಕೊಳ್ಳಲಾಗಿತ್ತು. ಆದರೆ, ರು. 2019 ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಲ್ಲಿ ಸುಮಲತಾ 7,03,660 ಮತಗಳನ್ನು ಪಡೆದರೆ, ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ನಿಖಿಲ್ ಕುಮಾರಸ್ವಾಮಿ 5,77,784 ಮತಗಳನ್ನು ಪಡೆದಿದ್ದು, ಸೋಲು ಅನುಭವಿಸಿದ್ದರು.

ಇನ್ನೂ 2023 ರ ವಿಧಾನಸಭಾ ಚುನಾವಣೆಯಲ್ಲಿಯ ಸಂದರ್ಭದಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ರಾಮನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ನಡೆಸಿದ್ದರು. ಆದರೆ, ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ನಿಖಿಲ್ ಕುಮಾರಸ್ವಾಮಿ ಸೋಲು ಅನುಭವಿಸಿದ್ದರು. ಇದೀಗ ಚನ್ನಪಟ್ಟಣ ಉಪಚುನಾವಣೆಯಲ್ಲಿ ಅಳೆದು ತೂಗಿ ಎನ್ ಡಿ ಎ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಅವರು ಕಣಕ್ಕಿಳಿದಿದ್ದು, ನಿಖಿಲ್ ಕುಮಾರಸ್ವಾಮಿ ಪರವಾಗಿ ಚನ್ನಪಟ್ಟಣ ಜನತೆಗೆ ನಾಡಿಮಿಡಿತ ಹೇಗಿದೆ ಎಂದು ಜೆಡಿಎಸ್ ರಾಜ್ಯ ಘಟನ ಸಮೀಕ್ಷೆ ನಡೆಸಿದ್ದು, ಚನ್ನಪಟ್ಟಣ ಕ್ಷೇತ್ರದಲ್ಲಿ ತೀವ್ರ ಪೈಪೋಟಿ ನಡೆಯಲಿದೆ ಎಂದು ಸಮೀಕ್ಷೆ ತಿಳಿಸಿದೆ.

**ಎರಡು ಚುನಾವಣೆಯಲ್ಲಿ ನಿಖಿಲ್ ಅವರ ಸೋಲು**

ಚನ್ನಪಟ್ಟಣ ಉಪಚುನಾವಣೆಯಲ್ಲಿ ಎನ್ ಡಿ ಎ ಅಭ್ಯರ್ಥಿಯಾಗಿ ಕಣಳಿದ ನಿಖಿಲ್ ಕುಮಾರಸ್ವಾಮಿ ಅವರಿಗೆ ದೊಡ್ಡ ಅಭಿಮಾನಿ ಬಳಗವಿದೆ. ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ್ರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ ಅವರಿಗೆ ಹಳೆ ಮೈಸೂರು ಭಾಗದಲ್ಲಿ ಒಳ್ಳೆಯ ಹಿಡಿತ ಇರುವುದರಿಂದ ಒಕ್ಕಲಿಗರ ದೊಡ್ಡ ಲೀಡರ್‌ಗಳಾಗಿದ್ದಾರೆ. ಇನ್ನೂ ಬಿಜೆಪಿ ಸ್ಥಳೀಯ ನಾಯಕರು ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ಪ್ರಚಾರ ಕಾರ್ಯವನ್ನ ನಡೆಸುತ್ತಿದ್ದಾರೆ. ಅಲ್ಲದೇ ಎರಡು ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಸೋಲು ಅನುಭವಿಸಿದ್ದು, ಈ ಬಾರಿ ಚನ್ನಪಟ್ಟಣದಲ್ಲಿ ಅಗ್ನಿ ಪರೀಕ್ಷೆಯನ್ನ ಎದುರಿಸುತ್ತಿರುವ ನಿಖಿಲ್ ಕುಮಾರಸ್ವಾಮಿ ಅವರಿಗೆ ಈ ಬಾರಿ ಚನ್ನಪಟ್ಟಣ ಜನತೆ ಕೈ ಹಿಡಿಯುತ್ತಾರೆ ಎಂದು ಜೆಡಿಎಸ್ ಸಮೀಕ್ಷೆ ತಿಳಿಸಿದೆ ಎಂದು ಹೇಳಲಾಗಿದೆ. ಕಳೆದ ಎರಡು ಚುನಾವಣೆಯಲ್ಲಿ ಸೋಲು ಕಂಡ ನಿಖಿಲ್ ಕುಮಾರಸ್ವಾಮಿ ಅವರಿಗೆ ಈ ಬಾರಿ ಅನುಕಂಪದ ಆಧಾರದ ಮೇಲೆ ಹಾಗೂ ಕುಮಾರಸ್ವಾಮಿ ಅವರ ಹಿಡಿತದ ಆಧಾರದ ಮೇಲೆ ನಿಖಿಲ್ ಕುಮಾರಸ್ವಾಮಿ ಅವರು ಗೆಲುವು ಸಾಧಿಸಲಿದ್ದಾರೆ ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ.

**ಈ ದಿನದ ದರ** ಪೆಟ್ರೋಲ್: 103.44 ₹/L ಡೀಸೆಲ್ : 89.97 ₹/L ಬಂಗಾರ: ₹7,980/Gram24ct ₹7,315/Gram22ct ಬೆಳ್ಳಿ: ₹97.00/Gram



**ಸಿದ್ಧಸೂಕ್ತಿ**

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ತಪೋವಿದ್ಯಾ ವಿಶೇಷೇಣ ಪೂಜಯಂತಿ ಪರಸ್ಪರಂ

ಬ್ರಹ್ಮವಿದ್ಭ್ಯಃ ಪರಂ ಭೂತಂ ನ ಕಿಂಚಿದಿಹ ವಿದ್ಯತೇ. ಮನುಸ್ಮೃತಿಯ ಪ್ರಥಮಾಧ್ಯಾಯದ ಶ್ಲೋಕ. ತಪಸ್ಸು ಶ್ರೇಷ್ಠವಾದ ವಿದ್ಯೆಯಿಂದ ಪರಸ್ಪರರು ಪೂಜಿಸುತ್ತಾರೆ. ಬ್ರಹ್ಮಜ್ಞಾನಿಗಳಿಗಿಂತ ಶ್ರೇಷ್ಠ ವ್ಯಕ್ತಿ ಯಾರೂ ಇಲ್ಲ. ತಪಸ್ಸು ಕಷ್ಟಪಡುವುದು ಪರಿಶ್ರಮದ ಪ್ರಾಮಾಣಿಕ ದುಡಿಮೆಯ ಜೀವನ ಇಂದ್ರಿಯ ನಿಗ್ರಹ ಧ್ಯಾನ ಜಪ ಪೂಜೆ ಪುನಸ್ಕಾರ ದಾನ ಧರ್ಮ. ವಿದ್ಯಾ ವಿಶೇಷ ಮಾನಸಿಕ ಸಂತೋಷ ನೀಡುವ ದೈಹಿಕ ಆರೋಗ್ಯ ವರ್ಧಿಸುವ ಸಂಸ್ಕೃತಿ ಸದಾಚಾರ ನೈತಿಕ ಮೌಲ್ಯ ಆಧ್ಯಾತ್ಮಿಕ ಜ್ಞಾನ ಹೊರಸೂಸುವ ವೇದಾಂತ ಯೋಗ ಸಂಗೀತ ಸ್ತೋತ್ರಪಠಣ ಮುಂತಾದ ವಿದ್ಯೆಯಿಂದ ವ್ಯಕ್ತಿಯು ಸಮಾಜದಲ್ಲಿ ಗೌರವವನ್ನು ಹೊಂದುತ್ತಾನೆ. ಇಂಥ ಗೌರವಾನ್ವಿತ ವ್ಯಕ್ತಿಗಳು ಯಾವುದೇ ಅಹಮಿಕೆಯಿಲ್ಲದೇ ಪರಸ್ಪರರು ಪರಸ್ಪರರನ್ನು ಗೌರವಿಸುತ್ತಾರೆ. ಸಿದ್ಧೇಶ್ವರ ಸ್ವಾಮಿಗಳಂತೆ. ಲೋಕದಲ್ಲಿ ಜಾತಿ ಅಧಿಕಾರ ರೂಪ ಸಿರಿತನದಿಂದ ವ್ಯಕ್ತಿ ಗೌರವವನ್ನು ಪಡೆಯುತ್ತಾನೆ. ಆದರೆ ಪಾರಮಾರ್ಥಿಕ ತನ್ನ ಸ್ವಸ್ವರೂಪ ಬ್ರಹ್ಮಜ್ಞಾನ ತಿಳಿದವರಿಗಿಂತ ಹೆಚ್ಚಿನ ಗೌರವಾನ್ವಿತರು ಬೇರೆ ಯಾರೂ ಆಗಲಾರರು.

# ಜಮೀರ್ ಆಧುನಿಕ ಟಿಪ್ಪು ಸುಲ್ತಾನ್: ಆರ್.ಅಶೋಕ

## ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ, ಲ್ಯಾಂಡ್ ಜಿಹಾದ್ ಎಂದು ಆರೋಪ

• ಉದಯವಾಹಿನಿ, ಬೆಂಗಳೂರು

ವಕ್ಫ್ ಭೂ ವಿವಾದಕ್ಕೆ ಸಂಬಂಧಿಸಿದಂತೆ ರೈತರಿಗೆ ನೋಟಿಸ್ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ್, ಇದು ರಾಜ್ಯ ಸರ್ಕಾರದ 'ಲ್ಯಾಂಡ್ ಜಿಹಾದ್' ಎಂದು ಆರೋಪಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಆರ್ ಅಶೋಕ್,ಕಾಂಗ್ರೆಸ್ ಸರ್ಕಾರ ಹಾಗೂ ವಕ್ಫ್ ಬೋರ್ಡ್‌ನಿಂದ ಲ್ಯಾಂಡ್ ಜಿಹಾದ್ ಆರಂಭವಾಗಿದ್ದು, ಬಡ ರೈತರ ಜಮೀನನ್ನು ಕಬಳಿಸಲು ಎಲ್ಲಾ ಬಗೆಯ ಪ್ರಯತ್ನ ಮಾಡಲಾಗಿದೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಕೂಡಲೇ ಸ್ಪಷ್ಟೀಕರಣ ನೀಡಬೇಕು ಎಂದರು. ಕಾಂಗ್ರೆಸ್ ಸರ್ಕಾರ ಬಂದ ನಂತರ ಇಡೀ ಕರ್ನಾಟಕ ಒಂದೇ ಸಮುದಾಯಕ್ಕೆ ಸೇರಿದ್ದು ಎಂಬಂತೆ ಆಡುತ್ತಿದೆ.ಕಾಂಗ್ರೆಸ್‌ನ ತುಷ್ಟೀಕರಣದಿಂದಾಗಿ ಹಿಂದೂಗಳ ಮೇಲೆ ಹಲ್ಲೆಯಾಗಿದೆ. ಗಣೇಶ ವಿಸರ್ಜನೆ ಮಾಡಲು ಅವಕಾಶವಿಲ್ಲ. ಹಿಂದೂಗಳು ಜೈ ಶ್ರೀರಾಮ್ ಎನ್ನುವಂತಿಲ್ಲ. ಹಿಂದೂಗಳಿಗೆ ಭದ್ರತೆ ಇಲ್ಲ. ಈಗ ವಿಜಯಪುರ ಜಿಲ್ಲೆಯ ಹೊನವಾಡ ಗ್ರಾಮದಲ್ಲಿ ಸುಮಾರು 12 ಸಾವಿರ ಎಕರೆ ಹಾಗೂ ಇಡೀ ಜಿಲ್ಲೆಯಲ್ಲಿ ಒಟ್ಟಾರೆಯಾಗಿ 15 ಸಾವಿರ ಎಕರೆ ಭೂಮಿ ಕಬಳಿಸಲು ವಕ್ಫ್ ಬೋರ್ಡ್ ಯೋಜನೆ ರೂಪಿಸಿದೆ. ಇದಕ್ಕಾಗಿ ಕಂದಾಯ ಇಲಾಖೆಯಿಂದ 139 ರೈತರಿಗೆ ತಿಳಿವಳಿಕೆ ನೋಟಿಸ್ ನೀಡಲಾಗಿದೆ. ಇದು ಸ್ಪಷ್ಟವಾಗಿ ಸರ್ಕಾರದಿಂದಲೇ ನಡೆಯುತ್ತಿರುವ ಲ್ಯಾಂಡ್ ಜಿಹಾದ್' ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಬಾಂಬ್ ಸ್ಫೋಟವಾಗಿದೆ. ಪಾಕಿಸ್ತಾನಕ್ಕೆ ಜೈಕಾರ ಹಾಕಲಾಗಿದೆ. ಲವ್ ಜಿಹಾದ್‌ನಿಂದ ಹಿಂದೂ ಯುವತಿಯರು ಸಾಯುತ್ತಿದ್ದಾರೆ.

ಈಗ ಲ್ಯಾಂಡ್ ಜಿಹಾದ್ ಆರಂಭವಾಗಿದೆ. ಕಳೆದ ತಿಂಗಳು ಜಿಲ್ಲೆಗೆ ಬಂದಿದ್ದ ಸಚಿವ ಜಮೀರ್ ಅಹ್ಮದ್, ಗೆಜೆಟ್ ಆಗಿರುವ ಆಸ್ತಿಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲು ಮೌಖಿಕ ಆದೇಶ ಮಾಡಿದ್ದಾರೆ. ಈ ಮೂಲಕ ಸರ್ಕಾರದಿಂದಲೇ ಅಧಿಕೃತವಾಗಿ ಒತ್ತುವರಿ ನಡೆಯುತ್ತಿದೆ. ಈ ಹಿಂದೆ ಟಿಪ್ಪು ಸುಲ್ತಾನ್, ಔರಂಗಜೇಬನಂತಹ ಕೋಮು ಮತಾಂಧರು ಹಿಂದೂಗಳ ಭೂಮಿ, ಉದ್ಯೋಗ, ಬದುಕು ಕಿತ್ತುಕೊಂಡು ಮತಾಂತರ ಮಾಡಿದ್ದರು. ಈಗ ರೈತರ ಭೂಮಿ ಕಿತ್ತುಕೊಳ್ಳಲಾಗುತ್ತಿದೆ ಎಂದು ಅಶೋಕ್ ಕಿಡಿಕಾರಿದ್ದಾರೆ.



☛ ಉದಯವಾಹಿನಿ ಚಿತ್ರ

**ಆರ್ ಅಶೋಕ್, ವಾಗ್ದಾಳಿ**

> **ಲ್ಯಾಂಡ್ ಜಿಹಾದ್ ಮೂಲಕ ಸಚಿವ ಜಮೀರ್ ಅಹ್ಮದ್, ಆಧುನಿಕ ಟಿಪ್ಪು ಸುಲ್ತಾನ್ ಆಗಲು ಹೊರಟಿದ್ದಾರೆ. ಈ ರೀತಿಯಾದರೂ ಭೂಮಿ ಕಸಿದು, ಸಿಎಂ ಆಗುವ ಯೋಜನೆ ರೂಪಿಸಲಾಗಿದೆ. ಒಂದು ಕಡೆ ಸಿಎಂ ಸಿದ್ದರಾಮಯ್ಯ ಮುಡಾ ನಿವೇಶನ ಲೂಟಿ ಮಾಡುತ್ತಾರೆ. ಮತ್ತೊಂದು ಕಡೆ ಮಲ್ಲಿಕಾರ್ಜುನ ಖರ್ಗೆ ಕುಟುಂಬ ಸಿಎ ನಿವೇಶನ ಲೂಟಿ ಮಾಡುತ್ತದೆ. ಈಗ ಜಮೀರ್ ಅಹಮದ್ ಕೂಡ ಈ ಪಟ್ಟಿಗೆ ಸೇರಿ ಭೂಮಿ ಕೊಳ್ಳೆ ಹೊಡೆದು ವಕ್ಫ್‌ಗೆ ಸೇರಿಸಲು ತಂತ್ರ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.**

> **ಅಲ್ಲದೆ ವಕ್ಫ್ ಆಸ್ತಿ ಹೆಸರಿನಲ್ಲಿ ಲ್ಯಾಂಡ್ ಜಿಹಾದ್ ಮಾಡಲು ಹೊರಟಿರುವ ಕಾಂಗ್ರೆಸ್ ಸರ್ಕಾರದ ದೌರ್ಜನ್ಯ ವಿರೋಧಿಸಿ ವಿಜಯಪುರದ ರೈತರು ಈ ವರ್ಷ ದೀಪಾವಳಿ ಆಚರಿಸದಿರಲು ನಿರ್ಧರಿಸಿದ್ದಾರೆ. ಅನ್ನ ನೀಡುವ ರೈತರ ಭೂಮಿಗೆ ಕನ್ನ ಹಾಕಿ, ರೈತರ ಮನೆ ದೀಪ ಕಸಿದುಕೊಂಡ ಕಾಂಗ್ರೆಸ್ ಸರ್ಕಾರಕ್ಕೆ ಅನ್ನದಾತರ ಶಾಪ ತಟ್ಟದೇ ಇರದು ಎಂದು ಅಶೋಕ್ ಕಿಡಿಕಾರಿದರು.**

## ವೀಣಾ ವಾದನ

• ಉದಯವಾಹಿನಿ, ಬೆಂಗಳೂರು




ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಅಕ್ಟೋಬರ್ 31, ಗುರುವಾರ ಸಂಜೆ 7–30ಕ್ಕೆ ವೀಣಾ ವಾದನ ಕು|| ಅಹಿಕಾ ನಾಗದೀಪ್. ಶ್ರೀ ಪ್ರಣವ್ ರಾವ್ (ಮೃದಂಗ), ಕು|| ರಾಹಿಣಿ ಜಯರಾಮ್ (ಕೊಳಲು) ಕಾರ್ಯಕ್ರಮ ನೀಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು–41

## ಆಚಾರ್ಯ ಶ್ರೀ ರಾಕುಂ ಶಾಲೆಯಲ್ಲಿ ಸಂಸ್ಥಾಪನಾ ದಿನಾಚರಣೆ

• ಉದಯವಾಹಿನಿ, ಬೆಂಗಳೂರು

ಆಚಾರ್ಯ ಶ್ರೀರಾಕುಂ ಅಂಧರ ಶಾಲೆ , ಆಚಾರ್ಯ ಶ್ರೀರಾಕುಂ ಶಾಲೆಯ ಸಂಸ್ಥಾಪಕ ದಿನಾಚರಣೆ. ಸ್ವಾಮಿ ರಾಕುಂಜೀರವರು ಶಾಲೆಯ ಪ್ರಾಂಶುಪಾಲರು, ಶಿಕ್ಷಕ ವೃಂದದವರು ಮತ್ತು ಶಾಲೆಯ ಮಕ್ಕಳು ದೀಪ ಬೆಳಗಿಸಿ ಸಂಸ್ಥಾಪನಾ ದಿನಾಚರಣೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಲೆಯ ಮಕ್ಕಳಿಂದ ನಾಟಕ, ಗೀತೆಗಾಯನ, ನೃತ್ಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಇದೇ ಸಂದರ್ಭದಲ್ಲಿ ಸ್ವಾಮಿ ರಾಕುಂಜೀರವರು ಮಾತನಾಡಿ ಮಕ್ಕಳು ದೇವರ ಸಮಾನ, ಮಕ್ಕಳಿಗೆ ಭೇದಬಾವ ಮಾಡಬಾರದು, ಶ್ರೀಮಂತರ ಮಕ್ಕಳಿಗೆ ಸಿಗುವ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಬಡ, ಮಧ್ಯಮ ವರ್ಗದ ಕುಟುಂಬದ ಮಕ್ಕಳಿಗೆ ಸಿಗಬೇಕು.



☛ ಉದಯವಾಹಿನಿ ಚಿತ್ರ

ಮಕ್ಕಳಿಗೆ ಉಚಿತ ಶಿಕ್ಷಣ ಸಿಗಬೇಕು, ಅವರ ಸಹ ಸಮಾಜದ ಮುಖ್ಯವಾಹಿನಿ ತರಬೇಕು, ವಿದ್ಯಾವಂತ ಸಮಾಜ ನಿರ್ಮಾಣ ಎಂದು ಆಚಾರ್ಯ ಶ್ರೀ ರಾಕುಂ ಶಾಲೆ ಉಚಿತವಾಗಿ ಶಿಕ್ಷಣ ಮತ್ತು ವಸತಿ ಸೌಲಭ್ಯ ನೀಡುತ್ತಿದೆ. ಸಾಮಾನ್ಯ ಮಕ್ಕಳು ಮತ್ತು ಅಂಧ ಹಾಗೂ ವಿಕಲ ಚೇತನ ಮಕ್ಕಳಿಗೆ ಉಚಿತ ಶಿಕ್ಷಣಕ್ಕೆ ಪ್ರವೇಶವಾಕಾಶ ನೀಡುತ್ತಿದ್ದೇವೆ.

ಬೆಳೆಯುವ ಪೈರು ಮೊಳೆಯಲ್ಲಿ ಗಾದೆ ಮಾತಿನಂತೆ ಮಕ್ಕಳು ಆಟ, ಊಟ ಪಾಠದ ಜೊತೆಯಲ್ಲಿ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬದುಕಲು ಸಹಕಾರಯಾಗಬೇಕು ಎಂದು ತರಬೇತಿ ನೀಡಲಾಗುತ್ತಿದೆ. ಕರಾಟೆ, ಯೋಗ ಮತ್ತು ಆಧ್ಯಾತ್ಮ ಚಿಂತನೆ, ಪರಿಸರ, ಸಂಸ್ಕೃತಿ, ಭಾರತೀಯ ಸಂಪ್ರಾದಯ ಹೀಗೆ ಹಲವಾರು ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ. ಮಕ್ಕಳು ಈ ದೇಶದ ಸಂಪತ್ತು ಅವರಿಗೆ ಗುರಿ ಮತ್ತು ಗುರುಗಳ ಮಾರ್ಗದರ್ಶನ ಸಮರ್ಪಕವಾಗಿ ಸಿಕ್ಕರೆ ದೇಶ ಅಭಿವೃದ್ದಿಯತ್ತ ಸಾಗುತ್ತದೆ.

ಸಾರ್ವಜನಿಕರ ಸಹಕಾರ, ಬೆಂಬಲ ಮುಖ್ಯ ಪ್ರತಿಯೊಬ್ಬರು ಸಮಾಜ ಅಭಿವೃದ್ದಿಗೆ ಶ್ರಮಿಸಬೇಕು ಎಂದು ಹೇಳಿದರು.

## ತೋಟದ ಮನೆಯಲ್ಲಿ ಭರ್ಜರಿ ಪ್ಲ್ಯಾನಿಂಗ್


• ಉದಯವಾಹಿನಿ, ಬೆಂಗಳೂರು

ಚನ್ನಪಟ್ಟಣ ಬೈ ಎಲೆಕ್ಷನ್ ಗೆಲ್ಲಲು ಶತಾಯಗತಾಯ ಪ್ರಯತ್ನ ಮಾಡುತ್ತಿರುವ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ತಮ್ಮ ತೋಟದ ಮನೆಯಲ್ಲಿ ಭರ್ಜರಿ ಪ್ಲ್ಯಾನಿಂಗ್ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಚನ್ನಪಟ್ಟಣ ಉಪ ಚುನಾವಣೆ ಕುಮಾರಸ್ವಾಮಿಯವರಿಗೆ ಪ್ರತಿಷ್ಠೆಯ ಕಣ.

ಬಿಜೆಪಿಯಲ್ಲಿದ್ದಾಗ ಸಿಪಿ ಯೋಗೇಶ್ವರ್ ಟಿಕೆಟ್ ಕೇಳಿದರೂ ಕೊಡದೇ ತಮ್ಮ ಪುತ್ರ ನಿಖಿಲ್ ರನ್ನೇ ಇಲ್ಲಿಂದ ಕಣಕ್ಕಿಳಿಸಿದ್ದಾರೆ. ಈ ಜಿದ್ದು ಬಿಜೆಪಿಯ ಕೆಲವು ನಾಯಕರಿಗೆ ಒಳಗೊಳಗೇ ಇದೆ. ಆದರೆ ಮೈತ್ರಿಯಾಗಿರುವ ಕಾರಣಕ್ಕೆ ಹೇಳಿಕೊಳ್ಳುವಂತಿಲ್ಲ. ನಿಖಿಲ್ ಈಗಾಗಲೇ ಹಿಂದೊಮ್ಮೆ ಚುನಾವಣೆ ಎದುರಿಸಿ ಸೋತಿದ್ದಾರೆ.

ಹೀಗಾಗಿ ಮತ್ತೆ ಸೋತರೆ ಅದು ಕುಮಾರಸ್ವಾಮಿಗೇ ಅಭಿಮಾನ ಭಂಗವಾದಂತೆ.



☛ ಉದಯವಾಹಿನಿ ಚಿತ್ರ

ಹೀಗಾಗಿ ಎಚ್ ಡಿ ಕುಮಾರಸ್ವಾಮಿ ಈಗ ಚನ್ನಪಟ್ಟಣದಲ್ಲಿ ಯಾವ ಲೆಕ್ಕಾಚಾರಗಳೊಂದಿಗೆ ಪ್ರಚಾರ ನಡೆಸಬೇಕು ಎಂದು ತಮ್ಮ ಬಿಡದಿಯ ತೋಟದ ಮನೆಯಲ್ಲಿ ರಹಸ್ಯ ಮೀಟಿಂಗ್ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಯಾವ ಸಮುದಾಯದ ಮತ ಸೆಳೆಯುವತ್ತ ಗಮನ ಹರಿಸಬೇಕು, ಪ್ರಚಾರ ಯಾವ ರೀತಿ ಇರಬೇಕು ಎಂದು ಕುಮಾರಸ್ವಾಮಿ ತಮ್ಮ ತೋಟದ ಮನೆಯಲ್ಲಿ ಮೀಟಿಂಗ್ ನಡೆಸಿ ಯೋಜನೆ ರೂಪಿಸಿದ್ದಾರೆ. ಇಂದಿನಿಂದ ಅವರು ಚುನಾವಣಾ ಪ್ರಚಾರ ಕಣಕ್ಕಿಳಿಯಲಿದ್ದು, ಅದಕ್ಕೆ ಮುನ್ನ ಸರಿಯಾಗಿ ಯೋಜನೆ ರೂಪಿಸಿಕೊಂಡೇ ಕಣಕ್ಕಿಳಿಯುತ್ತಿದ್ದಾರೆ ಎಂದು ತಿಳಿದುಬಂದಿದೆ.

## ನಗರಸಭೆಯಿಂದ ಮಹಾನಗರ ಪಾಲಿಕೆ ದರ್ಜೆಗೇರಿದ ಜಿಲ್ಲೆ

• ಉದಯವಾಹಿನಿ, ಬೆಂಗಳೂರು

ಹಾಸನ ನಗರಸಭೆಯನ್ನು ಮಹಾನಗರ ಪಾಲಿಕೆ ಯಾಗಿ ಮೇಲ್ದರ್ಜೆಗೇರಿಸಲು ಇಂದಿನ ಕ್ಯಾಬಿನೆಟ್ ನಲ್ಲಿ ಅನುಮೋದನೆ ದೊರಕಿದೆ.ಹಲವು ವರ್ಷಗಳ ಬೇಡಿಕೆ ಕೊನೆಗೂ ಈಡೇರಿದ್ದು, ಹಾಸನ ನಗರಸಭೆ ಇದೀಗ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಲು ಹಸಿರು ನಿಶಾನೆ ಸಿಕ್ಕಿದ್ದು ಹಾಸನ ಸಿಟಿಯ ಚಿತ್ರಣ ಬದಲಾಗಲಿದೆ. ಇದೀಗ ಹಾಸನ ಮಹಾನಗರಪಾಲಿಕೆಯಾಗಿ ಬದಲಾಗುತ್ತಿರುವ ಹಿನ್ನೆಲೆ 15–20 ವಾರ್ಡ್‌ಗಳು ಜಾಸ್ತಿಯಾಗುವ ಸಾಧ್ಯತೆಯಿದೆ. ಇದರಿಂದ ನಗರಸಭೆ ಪ್ರದೇಶದ ವ್ಯಾಪ್ತಿ ಹೆಚ್ಚಾಗಲಿದೆ. ಹೊಸ ವಾರ್ಡ್‌ಗಳು ರಚನೆಯಾದ ಬಳಿಕ ಅಲ್ಲಿಗೆ ಚುನಾವಣೆಗಳು ನಡೆಯಲಿದೆ. ಪಾಲಿಕೆ ದರ್ಜೆಗೇರಿದ ಎಲ್ಲಾ ನಗರಗಳಂತೆ ಇಲ್ಲಿಯೂ ಘನತ್ಯಾಜ್ಯ ನಿರ್ವಹಣೆ, ಸ್ಮಾರ್ಟ್ ಸಿಟಿ ಯೋಜನೆಗಳಂತಹ ಪ್ರಮುಖ ಯೋಜನೆಗಳು ಜಾರಿಗಾಲಿದ್ದು, ಹಾಸನ ನಗರಕ್ಕೆ ಹೈಟೆಕ್ ಸ್ಪರ್ಷ ಸಿಗಲಿದೆ

## ಮುಡಾ ಪ್ರಕರಣ ಸಂಬಂಧ ಹೊಸದಾಗಿ ಶೋಧ ಕಾರ್ಯ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಸೋಮವಾರ ಹೊಸದಾಗಿ ಶೋಧ ಆರಂಭಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಗರಣ ಸಂಬಂಧ ಇಡಿ ಅಧಿಕಾರಿಗಳು ಬೆಂಗಳೂರು ಮತ್ತು ಮೈಸೂರಿನ 7–8 ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇಡಿ ಅಧಿಕಾರಿಗಳು ಅಕ್ಟೋಬರ್ 18 ಮುಡಾ ಕಚೇರಿ ಸೇರಿದಂತೆ ಮೈಸೂರಿನ ಇತರ ಕೆಲವು ಸ್ಥಳಗಳ ಮೇಲೆ ದಾಳಿ ಮಾಡಿದ್ದರು. ದಾಳಿ ಬಳಿಕ, ಇಡಿ ಅಧಿಕಾರಿಗಳು ಮುಡಾದ ಆರು ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿದ್ದರು. ಈ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಸಂಗ್ರಹಿಸಿದ್ದರು. ಅಧಿಕಾರಿಗಳು ಕಳೆದ ವಾರ ಬೆಂಗಳೂರಿನ ಇಡಿ ಕಚೇರಿಯಲ್ಲಿ ಮುಡಾದ ಕೆಲವು ಕೆಳಹಂತದ ಅಧಿಕಾರಿಗಳನ್ನು ವಿಚಾರಣೆ ನಡೆಸಿದ್ದರು.

ಬೆಂಗಳೂರಿನ ಜೆ.ಪಿ.ನಗರದ ಬಿಲ್ಡರ್ ಎನ್. ಮಂಜುನಾಥ್ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ದಾಳಿ ಮಾಡಿದ್ದಾರೆ.

ಇಡಿ ಅಧಿಕಾರಿಗಳು ಬಿಲ್ಡರ್ಸ್ ನಿವಾಸದಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಲೋಕಾಯುಕ್ತದಲ್ಲಿ ದಾಖಲಾದ ಎಫ್‌ಐಆರ್ ಮಾಹಿತಿಯಂತೆ ಸಿಎಂ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಇಸಿಐಆರ್ ದಾಖಲಿಸಿದೆ.



☛ ಉದಯವಾಹಿನಿ ಚಿತ್ರ

**ಬಿಲ್ಡರ್‌ಗಳ ಮನೆ ಮೇಲೆ ಇಡಿ ದಾಳಿ**

> **ಸಿದ್ದರಾಮಯ್ಯ ಅವರು ತಮ್ಮ ಪತ್ನಿಗೆ ಮುಡಾದಿಂದ 14 ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಲೋಕಾಯುಕ್ತ ಹಾಗೂ ಇಡಿ ತನಿಖೆ ಎದುರಿಸುತ್ತಿದ್ದಾರೆ. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರನ್ನು ಇತ್ತೀಚೆಗೆ ಲೋಕಾಯುಕ್ತ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು.**

## ಚುನಾವಣಾ ಅಖಾಡಕ್ಕೆ ವಿವಾದಿತ ಮಾಜಿ ಐಎಎಸ್ ಪೂಜಾ ಖೇಡ್ಕರ್ ತಂದೆ ದಿಲೀಪ್

• ಉದಯವಾಹಿನಿ, ಬೆಂಗಳೂರು

ವಿವಾದಿತ ಮಾಜಿ ಐಎಎಸ್ ಟ್ರೈನಿ ಅಧಿಕಾರಿ ಪೂಜಾ ಖೇಡ್ಕರ್ ಅವರ ತಂದೆ ದಿಲೀಪ್ ಖೇಡ್ಕರ್ ಅವರು ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಅಖಾಡಕ್ಕಿಳಿದಿದ್ದಾರೆ. ಮಹಾರಾಷ್ಟ್ರದ ಅಹ್ಮದ್‌ನಗರ ಜಿಲ್ಲೆಯ ಶೇವಗಾಂವ್ ವಿಧಾನ ಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದು, ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಇವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಪ್ರಕಾಶ್ ಅಂಬೇಡ್ಕರ್ ಅವರ ವಿಬಿಎ ಪಕ್ಷದಿಂದ ಅಹ್ಮದ್‌ನಗರ ಕ್ಷೇತ್ರಕ್ಕೆ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ 13 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದು ಗಮನ ಸೆಳೆದಿದ್ದರು. ಇದೀಗ ದಿಲೀಪ್ ವಿಧಾನಸಭೆ ಚುನಾವಣೆಗೆ ಸಲ್ಲಿಸಿರುವ ಅಫಿಡವಿಟ್ ಕೂಡ ಚರ್ಚೆಗೆ ಗ್ರಾಸವಾಗಿದೆ. ದಿಲೀಪ್ ಅವರು ತಮ್ಮ ಪತ್ನಿ ಮನೋರಮಾ ಖೇಡ್ಕರ್ ಅವರಿಗೆ ವಿಚ್ಛೇದನ ನೀಡಿದ್ದಾರೆ ಎಂದು ಅಫಿಡವಿಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ. ಇವರ ಪುತ್ರಿ ಪೂಜಾ ಅವರು ಒಬಿಸಿ ಹಾಗೂ ಅಂಗವಿಕಲ ಕೋಟಾ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಆರೋಪದ ಮೇಲೆ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಅವರನ್ನು ಕೆಲಸದಿಂದ ವಜಾ ಮಾಡಿ ಸೆಪ್ಟೆಂಬರ್ 7 ರಂದು ಆದೇಶ ಮಾಡಿತ್ತು.

## ಅನಧಿಕೃತ ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ಅಧಿಕಾರಿಗಳ ಸಾಥ್ : ದೂರು ನೀಡಿದರೂ ನಿರ್ಲಕ್ಷ್ಯ!

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಮಳೆಯ ಅವಾಂತರದಿಂದ ಬಾಬುಸಾಪಾಳ್ಯದಲ್ಲಿ ನಿರ್ಮಾಣ ಹಂತದ ಏಳು ಅಂತಸ್ತಿನ ಕಟ್ಟಡ ಕುಸಿದು ಬಿದ್ದ ಘಟನೆಯಲ್ಲಿ 9 ಮಂದಿ ಮೃತರಾದ ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ, ಅನಧಿಕೃತ ಕಟ್ಟಡಗಳ ತೆರವು ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ.

ವಲಯ ಆಯುಕ್ತರ ಹೆಗಲಿಗೆ ಕಟ್ಟಡಗಳ ಸರ್ವೆ ಮಾಡಿ ವರದಿ ಸಲ್ಲಿಸುವ ಜವಾಬ್ದಾರಿ ವಹಿಸಿದೆ. ಆದರೆ ಇದರ ನಡವೆಯೇ ಬಿಬಿಎಂಪಿ ವಿರುದ್ಧ ಹಲವು ದೂರುಗಳು ಕೇಳಿ ಬಂದಿವೆ. ಮಹಿಳೆಯೊಬ್ಬರು ತಮ್ಮ 15X20 ಚದರ ಅಡಿ ವಿಸ್ತೀರ್ಣದ ಮನೆಯ ಮುಂದೆ ಹೊಸದಾಗಿ ನಿರ್ಮಾಣವಾಗುತ್ತಿರುವ ಅಕ್ರಮ ಕಟ್ಟಡದಿಂದ ರಕ್ಷಿಸಲು 2022 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ನಗರ ಯೋಜನೆ ಸಹಾಯಕ ನಿರ್ದೇಶಕ (ಎಡಿಟಿಪಿ), ಬಿಬಿಎಂಪಿ ಮತ್ತು ನಗರ ಯೋಜನೆ ಸಹಾಯಕ ಎಂಜಿನಿಯರ್ ಅವರನ್ನು ಸಂಪರ್ಕಿಸಿದ್ದರು.



ಬಿಬಿಎಂಪಿ ಕೇಂದ್ರ ಕಚೇರಿಯಿಂದ ಕೆಲವೇ ನೂರು ಮೀಟರ್ ದೂರದಲ್ಲಿರುವ ಶಾಂತಿನಗರದ ಅಕ್ಕಿತಿಮ್ಮನಹಳ್ಳಿಯ ಗೋಸಯ್ಯ ಬೀದಿಯಲ್ಲಿ ಆರು ಅಂತಸ್ತಿನ ಮನೆ ನಿರ್ಮಿಸುತ್ತಿದ್ದರು. ಬಿಬಿಎಂಪಿ ಎಂಜಿನಿಯರ್‌ಗಳು ಕ್ರಮ ಕೈಗೊಳ್ಳುವ ಬದಲು ಉಲ್ಲಂಘಿಸುವವರಿಗೆ ಸಹಾಯ ಮಾಡಿದ್ದಾರೆ ಎಂದು ಮಹಿಳೆ ಆರೋಪಿಸಿದ್ದಾರೆ. ಬರ್ಟಾ ಆಲ್ಬರ್ಟ್ ಥಾಮಸ್ ಅವರು ಈ ಸಂಬಂಧ ದೂರು ಸಲ್ಲಿಸಿದಾಗ, ಅಲ್ಲಿದ್ದ ಎಡಿಟಿಪಿ ಆಕೆಗೆ ನಿನ್ನ ಪತಿ ಅಥವಾ ಮಕ್ಕಳನ್ನು ಕಚೇರಿಗೆ ಕರೆತರುವಂತೆ ಹೇಳಿದರು ಎಂದು ಆರೋಪಿಸಿದ್ದಾರೆ.

> **ಬಾಬುಸಾಪಾಳ್ಯದಲ್ಲಿ ಇತ್ತೀಚೆಗೆ ಕಟ್ಟಡ ಕುಸಿದು ಬಿದ್ದಿರುವುದರಿಂದ ತಮ್ಮ ಕುಟುಂಬ ನಿದ್ದೆಯಿಲ್ಲದೆ ರಾತ್ರಿ ಕಳೆಯುತ್ತಿದೆ ಎಂದು ಬರ್ಟಾ ಆಲ್ಬರ್ಟ್ ಥಾಮಸ್ ಹೇಳಿದರು.**

## ಒಳ ಮೀಸಲಾತಿ ಜಾರಿಗೆ ಸಚಿವ ಸಂಪುಟ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಹಾಗೂ ಜಾತಿ ಗಣತಿ ವರದಿ ಬಿಡುಗಡೆ ಕುರಿತು ರಾಜ್ಯ ಸರ್ಕಾಕ ಇಕ್ಕಟ್ಟಿಗೆ ಸಿಲುಕಿತ್ತು. ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚಿಸಲಾಯಿತು.ಈ ವೇಳೆ ಒಳ ಮೀಸಲಾತಿ ಜಾರಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ನಂಬಲರ್ಹ ದಾಖಲೆಗಳು, ದತ್ತಾಂಶ ಸಂಗ್ರಹಕ್ಕೆ ಸಮಿತಿ ರಚನೆ ಮಾಡುವುದಾಗಿ ನಿರ್ಧರಿಸಲಾಗಿದೆ.

ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿ ರಚಿಸಿ ಮುಂದಿನ ಮೂರು ತಿಂಗಳಲ್ಲಿ ವರದಿ ಪಡೆದು ಮೀಸಲಾತಿ ಜಾರಿ ಬಗ್ಗೆ ನಿರ್ಧರಿಸಲಾಗುತ್ತದೆ. ದಲಿತ ಒಳ ಮೀಸಲಾತಿ ಜಾರಿ ವಿಚಾರ ಸಂಬಂಧ ಪ್ರತಿಕ್ರಿಯಿಸಿದ ಸಚಿವ ಹೆಚ್.ಕೆ ಪಾಟೀಲ್, ಒಳಮೀಸಲಾತಿ ಕಲ್ಪಿಸಲು ಸಂಪುಟ ಒಪ್ಪಿಗೆ ನೀಡಿದೆ. ನಿ. ನ್ಯಾಯಮೂರ್ತಿಗಳ ನೇತೃತ್ವದ ಕಮಿಟಿ ರಚನೆ ಮಾಡಲಾಗುತ್ತದೆ. ಡಾಟಾ ಪಡೆದು ಸಮಗ್ರವಾಗಿ ಪರಿಶೀಲಿಸಿ ವರದಿ ಪಡೆದು ಮೂರು ತಿಂಗಳೊಳಗೆ ವರದಿ ನೀಡಲು ಸಂಪುಟ ಒಪ್ಪಿಗೆ ನೀಡಿದೆ. ನೇಮಕಾತಿ ಪ್ರಕ್ರಿಯೆಗಳಿಗೆ ತಡೆ ನೀಡಲಾಗಿದ್ದು, ಯಾವುದೇ ನೇಮಕಾತಿ ಮಾಡದಂತೆ ನಿರ್ಣಯ ಮಾಡಲಾಗಿದೆ ಎಂದರು.

## ಶಿವಮೊಗ್ಗ ಏರ್‌ಪೋರ್ಟ್‌ಗೆ ಹೆಚ್ಚಿನ ಅನುದಾನ : ಸಂಪುಟ ಅಸ್ತು

• ಉದಯವಾಹಿನಿ, ಬೆಂಗಳೂರು

ಶಿವಮೊಗ್ಗದ ಜನರಿಗೆ ಡಿಜಿಸಿಎ ಸಿಹಿ ಸುದ್ದಿ ನೀಡಿದ ಬೆನ್ನಲ್ಲೇ ಇದೀಗ ಸರ್ಕಾರ ಮತ್ತೊಂದು ಶುಭಸುದ್ದಿ ನೀಡಿದೆ. ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿಗೆ ಪರಿಷ್ಕೃತ ಅನುದಾನ ಮೊತ್ತ ಘೋಷಣೆಯಾಗಿದೆ.

ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿಗೆ 127 ಕೋಟಿ ರೂ.ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಇಂದಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಇದಕ್ಕೂ ಮುನ್ನ ಸೆಪ್ಟೆಂಬರ್‌ನಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಡಿಜಿಸಿಎ ಮಾರ್ಗಸೂಚಿ ಅನ್ವಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ ಎಂದು ವಿಮಾನ ನಿಲ್ದಾಣದ ನಿರ್ವಹಣೆ ನೋಡಿಕೊಳ್ಳುವ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮಕ್ಕೆ 20 ಲಕ್ಷ ರೂ. ದಂಡವನ್ನು ವಿಧಿಸಿತ್ತು ವಿಮಾನ ನಿಲ್ದಾಣದ ಲೈಸೆನ್ಸ್ ಅನ್ನು ಅಕ್ಟೋಬರ್ 23ರ ತನಕ ವಿಸ್ತರಣೆ ಮಾಡಿತ್ತು. ಇದಾದ ಬಳಿಕ ನಿಗಮ ಎಚ್ಚೆತ್ತುಕೊಂಡಿತ್ತು. ನಂತರ ಡಿಜಿಸಿಎ ನಿಯಮಾವಳಿ ಅನ್ವಯ ಸುರಕ್ಷತಾ ಕ್ರಮಗಳನ್ನು ಕೈಗೊಂಡ ಹಿನ್ನಲೆಯಲ್ಲಿ ವಿಮಾನ ನಿಲ್ದಾಣದ ಲೈಸೆನ್ಸ್ ಅನ್ನು 2025ರ ಅಕ್ಟೋಬರ್ 23ರ ತನಕ ವಿಸ್ತರಣೆ ಮಾಡಿದೆ. ಇದೀಗ ವಿಮಾನ ನಿಲ್ದಾಣಕ್ಕೆ ಅಗತ್ಯವಿರುವ ಅಭಿವೃದ್ಧಿ ಕಾರ್ಯಕ್ಕೆ ಅನುದಾನದ ಅನುಮೋದನೆ ದೊರಕಿದೆ



☛ ಉದಯವಾಹಿನಿ ಚಿತ್ರ

## ಹೊಸ ಪ್ರವಾಸೋದ್ಯಮ ನೀತಿಗೆ ಗ್ರೀನ್ ಸಿಗ್ನಲ್ ಕೊಟ್ಟ ಸಂಪುಟ

• ಉದಯವಾಹಿನಿ, ಬೆಂಗಳೂರು

ನೂತನ ಪ್ರವಾಸೋದ್ಯಮ ನೀತಿಗೆ ಸಚಿವ ಸಂಪುಟ ಗ್ರೀನ್ ಸಿಗ್ನಲ್ ಕೊಟ್ಟಿದೆ. ಸಾಹಸ, ಕೃಷಿ, ಕರಾವಳಿ, ಬೀಚ್ ಪ್ರವಾಸೋದ್ಯಮ, ಪಾರಂಪರಿಕ, ಪರಿಸರ, ಶೈಕ್ಷಣಿಕ ಪ್ರವಾಸೋದ್ಯಮ, ಒಳನಾಡು, ಸಾಹಿತ್ಯ, ಕಡಲು, ವೈದ್ಯಕೀಯ, ಗಣಿಗಾರಿಕೆ, ರಾಜಕೀಯ, ಆಧ್ಯಾತ್ಮ, ಧಾರ್ಮಿಕ, ಬುಡಕಟ್ಟು, ವಿವಾಹ ಪ್ರವಾಸೋದ್ಯಮಗಳು ಬರಲಿವೆ. ರಾಜ್ಯದಲ್ಲಿ ಉತ್ತಮ ಪ್ರವಾಸಿ ತಾಣಗಳಿವೆ. ಪ್ರವಾಸೋದ್ಯಮದಿಂದ ಬೇಕಾದಷ್ಟು ಆದಾಯ ಮಾಡುವುದನ್ನು ನಾವು ಬೇರೆ ಕಡೆ ನೋಡುತ್ತಿದ್ದೇವೆ. ಕರ್ನಾಟಕದಲ್ಲಿ ಪ್ರವಾಸೋದ್ಯಮ ಬೆಳೆಸಲು ಪೂರಕವಾದ ಎಲ್ಲಾ ತಾಣಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇವೆ ಎಂದು ಈ ಹಿಂದೆ ಮಂಡ್ಯದಲ್ಲಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದರು.

## ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆಗೆ ಪ್ರತ್ಯೇಕ ಠಾಣೆ : ಸರ್ಕಾರ ಮಹತ್ವದ ತೀರ್ಮಾನ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 33 ವಿಶೇಷ ಪೊಲೀಸ್ ಠಾಣೆಗಳ ಸ್ಥಾಪನೆಯಾಗುತ್ತಿದ್ದು, ಇದರ 450 ಹುದ್ದೆಗಳ ನೇಮಕಾತಿಗೆ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಈ ವಿಶೇಷ ಪೊಲೀಸ್ ಠಾಣೆಗಳನ್ನು ದೌರ್ಜನ್ಯ ಪ್ರಕರಣಗಳ ತುರ್ತು ವಿಲೇವಾರಿಗಾಗಿ ಸ್ಥಾಪನೆ ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಡಿ ಸ್ಥಾಪನೆಯಾಗುತ್ತಿದ್ದು, ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆಗೆ ಒತ್ತು ನೀಡಲಾಗುತ್ತದೆ. ಇದು ದೇಶದಲ್ಲೇ ಮೊದಲ ಯೋಜನೆಯಾಗಿದೆ ಎಂದು ಸಭೆಯ ನಂತರ ಸಚಿವ ಮಹದೇವಪ್ಪ ಮಾಹಿತಿ ನೀಡಿದರು. ಪರಿಶಿಷ್ಟರ ಮೇಲೆ ದೌರ್ಜನ್ಯವಾದಾಗ ದೂರುದಾರರು ಸ್ಥಳೀಯ ಠಾಣೆಗಳಲ್ಲಿ ದೂರು ಸಲ್ಲಿಸಬೇಕು. ಬಳಿಕ ಆ ಪ್ರಕರಣಗಳು ಅಲ್ಲಿಂದ ಈ ವಿಶೇಷ ಠಾಣೆಗೆ ವರ್ಗಾವಣೆಯಾಗುತ್ತದೆ. ಕೂಡಲೇ ಎಫ್ ಐಆರ್ ದಾಖಲಿಸಲು ಅವಕಾಶವಿದೆ ಎಂದು ತಿಳಿಸಿದರು.

# ವಚನ ದರ್ಶನ ಪುಸ್ತಕಕ್ಕೆ ಲಿಂಗಾಯತ ಸಮುದಾಯ ಕೌಂಟರ್

## ವಚನ ಸಾಹಿತ್ಯವನ್ನು ರಚನೆ ಮಾಡಿದ ಶರಣರು ವೈದಿಕ ಸಂಸ್ಕೃತಿಯ ಆಚರಣೆ

• ಉದಯವಾಹಿನಿ, ಬೆಂಗಳೂರು

ವಿವಾದಾತ್ಮಕ ವಚನ ದರ್ಶನ ಪುಸ್ತಕಕ್ಕೆ ತಿರುಗೇಟು ನೀಡಲು ಲಿಂಗಾಯತ ಸಮುದಾಯವು ಡಾ.ಮೀನಾಕ್ಷಿ ಬಾಳಿ ಅವರು ಬರೆದ ವಚನ ನಿಜದರ್ಶನ ಪುಸ್ತಕವನ್ನು ಬಿಡುಗಡೆಗೊಳಿಸಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಇತ್ತೀಚೆಗೆ ಕಲಬುರಗಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಸಲಹೆಗಾರ ಹಾಗೂ ಶಾಸಕ ಬಿ.ಆರ್.ಪಾಟೀಲ್ ಅವರು ವಚನ ನಿಜದರ್ಶನ ಪುಸ್ತಕ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಅವರು ವಚನಗಳು ಕೇವಲ ವೇದ ಮತ್ತು ಉಪನಿಷತ್ತುಗಳ ಮುಂಬುವರೆದ ಭಾಗ ಎಂಬ ಹೇಳಿಕೆಯನ್ನು ನಿರಾಕರಿಸಿದರು.

ವಚನ ಸಾಹಿತ್ಯವನ್ನು ರಚನೆ ಮಾಡಿದ ಶರಣರು ವೈದಿಕ ಸಂಸ್ಕೃತಿಯ ಆಚರಣೆ, ಕಂದಾಚಾರವನ್ನು ತಿರಸ್ಕರಿಸಿ ಹೊರಗೆ ಬಂದರು. ಅವರು ಸ್ವತಂತ್ರವಾಗಿ ರಚನೆ ಮಾಡಿದ್ದೇ ವಚನ ಸಾಹಿತ್ಯ. ಇದು ಯಾವುದೇ ವೇದ, ಉಪನಿಷತ್ತಿನ ಮುಂದುವರಿದ ಭಾಗವಲ್ಲ. ವಚನ ಸಾಹಿತ್ಯವನ್ನು ಸುಟ್ಟು ಹಾಕಿದವರಿಗೆ ಉಳಿದಿರುವ ವಚನಗಳನ್ನು ನಾಶ ಮಾಡಲು ಆಗುತ್ತಿಲ್ಲ. ಹೀಗಾಗಿ, ಅವುಗಳನ್ನು ತಿರುಚುವ ಯತ್ನ ಆರಂಭಿಸಿದ್ದಾರೆ ಎಂದು ಹೇಳಿದರು.



☛ ಉದಯವಾಹಿನಿ ಚಿತ್ರ

**ವಚನ ನಿಜದರ್ಶನ' ಬಿಡುಗಡೆ**

ಇದೇ ವೇಳೆ ವಚನ ದರ್ಶನ ಪುಸ್ತಕವನ್ನು ಕೂಲಂಕಷವಾಗಿ ಪರಿಶೀಲಿಸಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿ, ಟದಿಂದ ಪುಟವನ್ನು ಎಚ್ಚರಿಕೆಯಿಂದ ಓದಿದ್ದೇನೆ. 'ವಚನ ನಿಜ ದರ್ಶನ' ಎಲ್ಲರೂ ಬೇಗನೆ ಓದಿ ಅರ್ಥ ಮಾಡಿಕೊಳ್ಳಬಹುದಾದ ಸರಳ ಭಾಷೆಯಲ್ಲಿರುವ 60 ಪುಟಗಳ ಪುಟ್ಟ ಪುಸ್ತಕ. ಮೊದಲು ಬರೆದದ್ದು ಇನ್ನೂ ದೊಡ್ಡ ಪುಸ್ತಕವಾಗಿತ್ತು. ಎಲ್ಲರೂ ಓದಲು ಸುಲಭವಾಗಲಿ ಎಂದು 60 ಪುಟಗಳಿಗೆ ಇಳಿಸಿದೆ.

ಸಂಘ ಪರಿವಾರದ 'ವಚನ ದರ್ಶನ'ದ ಸಮಸ್ಯೆ, ಅಜೆಂಡಾ, ವಿರೋಧಾಭಾಸಗಳ ಬಗ್ಗೆ ಜಾಗೃತಿ ಮೂಡಿಸುವುದು ನನ್ನ ಮುಖ್ಯ ಉದ್ದೇಶವಾಗಿದೆ. ವಚನ ದರ್ಶನ' ಒಂದು ಸಾಮಾನ್ಯ ಪುಸ್ತಕ. ಆದರೆ, ಅದನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಘ ಪರಿವಾರದವರು ಬಿಡುಗಡೆ ಮಾಡಿದ್ದಾರೆ. ನಮ್ಮಲ್ಲಿ ಅಷ್ಟು ಹಣವಿಲ್ಲದಿದ್ದರೂ, ಅಷ್ಟೇ ಪರಿಣಾಮಕಾರಿಯಾಗಿ ಬಿಡುಗಡೆ ಮಾಡಲಾಗುವುದು.ಬೇರೆ ಬೇರೆ ಜಿಲ್ಲೆಗಳಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ಪುಸ್ತಕ ಬಿಡುಗಡೆ ಮಾಡಲು ಕೈಜೋಡಿಸುತ್ತಿವೆ. ಎಲ್ಲಾ ಕಡೆ ಹೋಗಿ ನಾನೆ ಮಾತನಾಡುತ್ತೇನೆ, ಬೇರೆಯವರೂ ಮಾತನಾಡುತ್ತಾರೆ. ವಿದ್ಯಾರ್ಥಿಗಳನ್ನು, ಮಕ್ಕಳನ್ನು ಮುಟ್ಟಲು ಬೇರೆ ಯೋಜನೆ ಸಿದ್ಧವಾಗುತ್ತಿದೆ. ಒಂದು ಕಾರ್ಯಪಡೆ ಪುಸ್ತಕದ ಪ್ರಚಾರ ಮತ್ತು ಬಿಡುಗಡೆ ಕಾರ್ಯವನ್ನು ಆಯೋಜಿಸುತ್ತಿದೆ. ಅವರಿಗಿಂತ ಹೆಚ್ಚಿನ ಶ್ರಮ ಹಾಕಿ ಪುಸ್ತಕವನ್ನು ಜನರಿಗೆ ಮುಟ್ಟಿಸುತ್ತೇವೆ. ಕ್ರಿಯಾ ಪ್ರಕಾಶನ ಹೊರ ತಂದಿರುವ ಪುಸ್ತಕಕ್ಕೆ 70 ರುಪಾಯಿ ಬೆಲೆಯಿದೆ. ಹೆಚ್ಚಿನ ಪ್ರತಿಗಳನ್ನು ತೆಗೆದುಕೊಂಡರೆ ಶೇ.30 ರಿಯಾಯತಿ ನೀಡಲಾಗುತ್ತಿದೆ ಎಂದು ಹೇಳಿದರು.

> **ಬಸವಣ್ಣ ಜಾತಿ, ಬಡತನ, ಅಸಮಾನತೆಯ ಬಗ್ಗೆ ಮಾತನಾಡಿಲ್ಲ ಎಂಬ ಹುನ್ನಾರ ಇತ್ತೀಚಿಗೆ ನಡೆದಿದೆ. ಕಲ್ಯಾಣದಲ್ಲಿ ಕ್ರಾಂತಿ ಆಗಿಲ್ಲರಲಿಕ್ಕಿಲ್ಲ. ಶಾಸನಗಳು ಹೊಟ್ಟೆ ತುಂಬಿದವರ ಸಾಹಿತ್ಯ. ಶರಣರು ಮೌಖಿಕವಾಗಿ ತಮ್ಮ ಪರಂಪರೆಯನ್ನು ಕಟ್ಟಿಕೊಂಡು ಬಂದಿದ್ದಾರೆ. ವೇದ, ಉಪನಿಷತ್ ಗಳನ್ನು ಶರಣರು ನಖಶಿಕಾಂತವಾಗಿ ಖಂಡಿಸಿದರು. ಅಂತೆಯೇ ವೈದಿಕರು ವಚನ ಸಾಹಿತ್ಯಕ್ಕೆ ನಡಗುತ್ತಾರೆ. ಈ ಬಗ್ಗೆ ನಾವು ಎಚ್ಚರ ವಹಿಸಬೇಕು. ಸಕಲ ಜೀವಾತ್ಮರಿಗೆ ಲೇಸ ಬಯಸಿದ ಶರಣರು ವ್ಯಕ್ತಿಯನ್ನು ವಿರೋಧಿಸಲಿಲ್ಲ. ಸಮಾಜಕ್ಕೆ ಧಕ್ಕೆ ತರುವ ವಿಚಾರಗಳನ್ನು ವಿರೋಧಿಸಿದರು. ಶರಣರು ಸಮಾಜದ ಕಟ್ಟ ಕಡೆಯ ಮನುಷ್ಯನಿಗೆ ದಾರ್ಶನಿಕತೆಯನ್ನು ಒದಗಿಸಿದವರು ಎಂದರು.**

> **ಡಾ.ಮೀನಾಕ್ಷಿ ಬಾಳಿ ಮಾತನಾಡಿ, ತಪ್ಪು ಹಾದಿಗೆಳೆಯುತ್ತಿರುವ ವಚನ ದರ್ಶನ ಪುಸ್ತಕ ನಿರಾಕರಿಸಿ, ಮೊದಲ ಪ್ರತಿಕ್ರಿಯೆಯಾಗಿ ಪುಸ್ತಕ ಬಿಡುಗಡೆ ಮಾಡಲಾಗಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದ ಇತರ ಭಾಗಗಳಲ್ಲಿ ಪುಸ್ತಕವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.**

# ಚನ್ನಪಟ್ಟಣ - ರಾಮನಗರ ನಡುವೆ ಕೈಗಾರಿಕೆ: ಸ್ಥಳೀಯರಿಗೆ ಉದ್ಯೋಗಕ್ಕೆ ಒತ್ತು

## ಮೋದಿ ಅವರು ನನ್ನ ಮೇಲೆ ನಂಬಿಕೆ ಇರಿಸಿ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆಗಳನ್ನು ನೀಡಿದ್ದಾರೆ: ಹೆಚ್‌ಡಿಕೆ

• ಉದಯವಾಹಿನಿ ರಾಮನಗರ

ಕಾಂಗ್ರೆಸ್ ನಾಯಕರು ನನ್ನನ್ನು ನಿಂದನೆ ಮಾಡಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ನಾನು ಅಭಿವೃದ್ಧಿ ವಿಚಾರ ಇಟ್ಟುಕೊಂಡು ಪ್ರಚಾರ ಮಾಡುತ್ತಿದ್ದೇನೆ. ಅವರಿಗೂ ನನಗೂ ಇರುವ ವ್ಯತ್ಯಾಸ ಇಷ್ಟೇ ಎಂದು ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಅವರು ಹೇಳಿದರು.

ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಚನ್ನಪಟ್ಟಣ - ರಾಮನಗರ ನಡುವೆ ಬೃಹತ್ ಕೈಗಾರಿಕೆ ಒಂದನ್ನು ಸ್ಥಾಪನೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅವರು ಭರವಸೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಮೇಲೆ ನಂಬಿಕೆ ಇರಿಸಿ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆಗಳನ್ನು ನೀಡಿದ್ದಾರೆ. ಎರಡೂ ಮಹತ್ವದ ಖಾತೆಗಳಾಗಿದ್ದು, ದೇವರ ಅನುಗ್ರಹ ಜನರ ಆಶೀರ್ವಾದದಿಂದ ಸಿಕ್ಕಿರುವ ಈ ಅವಕಾಶದಿಂದ ರಾಮನಗರ ಜಿಲ್ಲೆಯ ಜನರಿಗೆ ಏನಾದರೂ ಒಳ್ಳೆಯದು ಮಾಡುತ್ತೇನೆ ಎಂದು ಅವರು ಒತ್ತಿ ಹೇಳಿದರು. ನಾವು ಟಿಕೆಟ್ ಕೊಡುತ್ತೇವೆ ಎಂದೆವು. ಬಿಜೆಪಿ ಕೂಡ ಟಿಕೆಟ್ ಕೊಡಲು ಮುಂದಾಗಿತ್ತು. ಬಿಜೆಪಿ ವರಿಷ್ಠ ನಾಯಕರ ಮಾತಿಗೆ ತಲೆಬಾಗಿ ನಾವು ಚನ್ನಪಟ್ಟಣ ಕ್ಷೇತ್ರವನ್ನು ಬಿಟ್ಟುಕೊಡಲು ನಿರ್ಧಾರ ಮಾಡಿದ್ದೆವು. ಆದರೆ, ಎಲ್ಲರ ಮಾತನ್ನು ಧಿಕ್ಕರಿಸಿ, ಕಾಲಿನಲ್ಲಿ ಒದ್ದು ಅವರು ಕಾಂಗ್ರೆಸ್ ಸೇರಿಕೊಂಡರು. ಈಗ ನೋಡಿದರೆ ಹಾದಿಬೀದಿಯಲ್ಲಿ ಸುಳ್ಳು ಪ್ರಚಾರ ಮಾಡಿಕೊಂಡು ಓಡಾಡುತ್ತಿದ್ದಾರೆ ಎಂದು ಕೇಂದ್ರ ಸಚಿವರು ದೂರಿದರು. ನನ್ನ ಬಗ್ಗೆ, ನನ್ನ ತಂದೆಯ ಬಗ್ಗೆ ಬಹಳ ಕೀಳುಮಟ್ಟದ ಭಾಷೆ ಬಳಕೆ ಮಾಡಿಕೊಂಡು ಟೀಕೆ ಮಾಡುತ್ತಿದ್ದಾರೆ. ಅವರ ಪದ ಬಳಕೆಯ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಚನ್ನಪಟ್ಟಣ ಜನರೇ ತೀರ್ಪು ಕೊಡುತ್ತಾರೆ ಎಂದು ಅವರು ಹೇಳಿದರು.

ಕುಮಾರಸ್ವಾಮಿ ಅವರಿಗೆ ಚನ್ನಪಟ್ಟಣದಲ್ಲಿ ಎಷ್ಟು ಕೆರೆಗಳು ಇವೆ ಎಂಬುದೇ ಗೊತ್ತಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಹೇಳಿದ್ದಾರೆ. ಆದರೆ, ನಾನು ಏನು ಮಾಡಿದ್ದೇನೆ ಎಂಬುದು ಹಳ್ಳಿಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ ಎಂದು ಕುಮಾರಸ್ವಾಮಿ ಅವರು ತಿರುಗೇಟು ನೀಡಿದರು.

ಕೂಡ್ಲೂರು ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, ನಿಮಗೆ ನೀಡಲಾಗಿರುವ ನಿವೇಶನಗಳನ್ನು ಹಾಗೆಯೇ ಇಟ್ಟುಕೊಳ್ಳಿ. ಉಳಿದ ಗ್ರಾಮಸ್ಥರಿಗೂ ಹಕ್ಕುಪತ್ರ ಕೊಡಿಸಲಾಗುವುದು.

ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರದಿಂದ ನೆರವು ಕೊಡಿಸಲಾಗುವುದು ಎಂದು ಕೇಂದ್ರ ಸಚಿವರು ಭರವಸೆ ನೀಡಿದರು.

### ಮೋದಿ ನೇತೃತ್ವದಲ್ಲಿ ಅಭಿವೃದ್ಧಿ

**ಚನ್ನಪಟ್ಟಣದಲ್ಲಿ ನಡೆದ ಪ್ರಚಾರದಲ್ಲಿ ಮೈಸೂರು ಕೊಡಗು ಕ್ಷೇತ್ರದ ಸಂಸದರಾದ ಯದುವೀರ್ ಒಡೆಯರ್ ಅವರು ಸಾಥ್ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಯದುವೀರ್ ಅವರು, ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಅವರ ಸಂಪುಟದಲ್ಲಿ ಕುಮಾರಸ್ವಾಮಿ ಅವರು ಅತ್ಯಂತ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.**


ಉದಯವಾಹಿನಿ ಚಿತ್ರ

**ರಾಜ್ಯ ಕಾಂಗ್ರೆಸ್ ಸರ್ಕಾರ ಬರೀ ಭ್ರಷ್ಟಾಚಾರದಲ್ಲಿ ನಿರತವಾಗಿದೆ. ಅಧಿಕಾರಕ್ಕೆ ಬಂದಾಗಿನಿಂದ ಹಗರಣಗಳಲ್ಲಿಯೇ ಮುಳುಗಿದೆ. ಅದರಲ್ಲಿ ಮೂಡಾ ಹಗರಣದ ವಿರುದ್ಧ ಬೆಂಗಳೂರಿನಿಂದ ಮೈಸೂರುವರೆಗೂ ನಡೆದ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು. ಅವರಿಗೆ ಮುಂದೆ ಒಳ್ಳೆಯ ನಾಯಕನಾಗಿ ಬೆಳೆಯುವ ಎಲ್ಲಾ ಅವಕಾಶಗಳು ಇವೆ. ಅಂತಹ ಅವಕಾಶಕ್ಕೆ ಚನ್ನಪಟ್ಟಣದ ಜನರೇ ನಾಂದಿ ಹಾಡಬೇಕು -ಯದುವೀರ್ ಒಡೆಯರ್, ಸಂಸದ**

**ಸಂಸದ ಯದುವೀರ್ ಸಾಥ್**

---

## ಸರ್ಕಾರಿ ನೌಕರರ ಸಂಘದ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ, ಶಾಂತಿಯುತ ಮತದಾನ

• ಉದಯವಾಹಿನಿ, ಶಿಡ್ಲಘಟ್ಟ

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಮತ್ತು ಯೋಜನಾ ಶಾಖೆಗಳ ನಿರ್ದೇಶಕರ ಚುನಾವಣೆ ಮತದಾನವು ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಂತಿಯುತವಾಗಿ ನಡೆಯಿತು. 33 ಸ್ಥಾನಗಳು ಪೈಕಿ ಈಗಾಗಲೇ 30 ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು, ಪ್ರಾಥಮಿಕ ಶಾಲಾ ಇಲಾಖೆಯಿಂದ ಆಯ್ಕೆಯಾಗಬೇಕಾಗಿದ್ದ 3 ಸ್ಥಾನಗಳಿಗೆ 8 ಮಂದಿ ಅಂತಿಮ ಕಣದಲ್ಲಿದ್ದರು.

ಬೆಳಿಗ್ಗೆ 9 ಗಂಟೆಯಿಂದಲೇ ಮತದಾನವು ನಿಧಾನಗತಿಯಲ್ಲಿ ಆರಂಭವಾದರೂ ಮಧ್ಯಾಹ್ನ ವೇಳೆಗೆ ಬಹಳ ಚುರುಕಾಯಿತು. ಮತದಾನ ಮಾಡಲು ಶಿಕ್ಷಕರಿಗೆ ಎರಡು ಗಂಟೆ ವಿಶೇಷ ಅನುಮತಿ ಇದ್ದುದರಿಂದ ಶಾಲಾ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಕಾರ್ಯ ಹಂಚಿಕೆ ಮತ್ತು ಸಮಯ ಹೊಂದಾಣಿಕೆಯೊಂದಿಗೆ ತಂಡಗಳಲ್ಲಿ ಆಗಮಿಸಿ ಬಂದು ಮತದಾನ ಮಾಡಿದ ದೃಶ್ಯ ಕಂಡುಬಂತು. ಸಂಜೆ 4 ಗಂಟೆಗೆ ಮತದಾನದ ಅಂತ್ಯದ ವೇಳೆಗೆ ಒಟ್ಟು 286 ಪುರುಷ ಮತದಾರರ ಪೈಕಿ 281 ಮಂದಿ, 297 ಮಹಿಳಾ ಮತದಾರರ ಪೈಕಿ 278 ಮಂದಿ ಮತ ಚಲಾಯಿಸಿದರು. ಒಟ್ಟಾಗಿ 583 ಮತಗಳಲ್ಲಿ 559 ಮತಗಳು ಚಲಾವಣೆಗೊಂಡಿದ್ದು ಶೇ. 95.9 ರಷ್ಟು ಮತದಾನವಾಯಿತು.

ಸ್ಥಳಕ್ಕೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಎನ್.ಸುಬ್ಬಾರೆಡ್ಡಿ, ತಾಲ್ಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಲ್.ವಿ.ವೆಂಕಟರೆಡ್ಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಆರ್ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್ ರುದ್ರೇಶ ಮೂರ್ತಿ, ಎನ್ ಪಿಎಸ್ ನೌಕರರ ಸಂಘದ ಅಧ್ಯಕ್ಷ ಗಜೇಂದ್ರ, ಗೌರವಾಧ್ಯಕ್ಷ ಎ.ವಿ. ವೆಂಕಟನರಸಪ್ಪ, ಇಲಾಖಾ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.


ಉದಯವಾಹಿನಿ ಚಿತ್ರ

**ಫಲಿತಾಂಶವೂ 11 ಸುತ್ತುಗಳನ್ನು ಒಳಗೊಂಡಿದ್ದು ಪ್ರತಿಯೊಂದು ಸುತ್ತಿನಲ್ಲೂ ಮತ ಎಣಿಕೆ ಕಾರ್ಯವು ಕುತೂಹಲ ಕೆರಳಿಸುವಂತಿತ್ತು. ಹನ್ನೊಂದು ಸುತ್ತುಗಳನ್ನು ಮುಗಿದ ನಂತರ ಫಲಿತಾಂಶವು ಮೇಲೂರು ಮಂಜುನಾಥ್ 362, ಕೆಂಪೇಗೌಡ ಎಂ 318, ನರಸಿಂಹರೆಡ್ಡಿ 306 ಮತಗಳನ್ನ ಪಡೆದು ಜಯಶೀಲರಾದರು**
**-ಕೆ ಎನ್ ಸುಬ್ಬಾರೆಡ್ಡಿ , ಸರ್ಕಾರಿ ನೌಕರರ ಸಂಘದ ಅಧ್ಯಕ್ಷ**

---

## 16.73 ಕೋಟಿ ವೆಚ್ಚದಲ್ಲಿ ಗುಬ್ಬಿ ರೈಲ್ವೆ ನಿಲ್ದಾಣ ಅಭಿವೃದ್ಧಿ

• ಉದಯವಾಹಿನಿ, ತುಮಕೂರು

ಗುಬ್ಬಿ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು 16.73 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿದೆ ಎಂದು ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ತಿಳಿಸಿದರು.

ಗುಬ್ಬಿ ರೈಲ್ವೇ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಗುಬ್ಬಿ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು ಈಗಾಗಲೇ ನೀಲಿ ನಕ್ಷೆ ಸಿದ್ದಪಡಿಸಲಾಗಿದೆ. ರೈಲ್ವೆ ನಿಲ್ದಾಣದ ಕಾಮಗಾರಿ ಪೂರ್ಣಗೊಂಡ ಬಳಿಕ ನಿಲ್ದಾಣಕ್ಕೆ ಶ್ರೀ ಚನ್ನಬಸವೇಶ್ವರ ಸ್ವಾಮಿಗಳ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಹೇಳಿದರು. ಇದಕ್ಕೂ ಮುನ್ನ ಚನ್ನಸೆಟ್ಟಿಹಳ್ಳಿ ಬಳಿ ಶಿವಮೊಗ್ಗ-ತುಮಕೂರು ಹೆದ್ದಾರಿಗೆ ಗುಬ್ಬಿಯ ಬಳಿ ನಿರ್ಮಿಸವಾಗುತ್ತಿರುವ ವರ್ತುಲ ರಸ್ತೆ ಕಾಮಗಾರಿ ರೈತರಿಗೆ ಸಮರ್ಪಕವಾಗಿ ಪರಿಹಾರ ವಿತರಣೆ ಮಾಡದೆ ಇದ್ದ ಕಾರಣ ಅಪೂರ್ಣವಾಗಿತ್ತು. ಖುದ್ದು ರೈತರ ಮನೆಯ ಬಳಿಯೆ ತೆರಳಿದ ಸಚಿವ ಸೋಮಣ್ಣ ರೈತರ ಸಮಸ್ಯೆಗಳನ್ನು ಅಲಿಸಿ ರೈತರಿಗೆ ಕೊಡಬೇಕಾದ 2 ಕೋಟಿ 94 ಲಕ್ಷ ಹಣವನ್ನು ಶೀಘ್ರವೇ ಪರಿಹಾರ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮನೆಯ ಬಳಿ ಇರುವ ಉದ್ಧಾನೇಶ್ವರ ದೇವಸ್ಥಾನವನ್ನು ಸ್ಥಳಾಂತರ ಮಾಡಿ ದೇವಸ್ಥಾನ ಕಟ್ಟಿಸಿಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿ ರೈತರ ಮನವೊಲಿಸಿದರು.

ನಿಟ್ಟೂರು ಹಾಗೂ ಕೆ.ಬಿ. ಕ್ರಾಸ್‌ನಲ್ಲಿ ಬೆಂಬಲಿಗರ ಜೊತೆ ಮಾತುಕತೆ ನಡೆಸಿದರು. ತಿಪಟೂರಿನ ಕೌಸ್ತುಬಾ ಹೋಟೆಲ್‌ನಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ಜಿ. ಎಸ್. ಬಸವರಾಜು, ರೈಲ್ವೆ ಇಲಾಖೆ ಅಧಿಕಾರಿಗಳು, ಗುಬ್ಬಿ ತಹಶೀಲ್ದಾರ್ ಆರತಿ, ಮುಖಂಡರು ಸೇರಿದಂತೆ ಮತ್ತಿತರರು ಇದ್ದರು.


ಉದಯವಾಹಿನಿ ಚಿತ್ರ

---

## ದೇವೇಗೌಡರು, ಕುಮಾರಣ್ಣನ ಅಭಿವೃದ್ಧಿ ಕಾರ್ಯ ಕೈಹಿಡಿಯಲಿದೆ: ನಿಖಿಲ್ ಕುಮಾರಸ್ವಾಮಿ

• ಉದಯವಾಹಿನಿ, ಚನ್ನಪಟ್ಟಣ

ಉಪ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೋಮವಾರ ಬಿರುಸಿನ ಪ್ರಚಾರ ನಡೆಸಿದರು.

ತಾಲ್ಲೂಕಿನ ಹುಣಸನಹಳ್ಳಿಯ ಬಿಸಲಮ್ಮ ಕರಗದ ಮನೆ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಗೆ ಪೂಜೆ ಸಲ್ಲಿಸಿದ ನಿಖಿಲ್, ನಂತರ ಕೋಡಂಬಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಪ್ರಚಾರ ನಡೆಸಿದರು. ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕೋಡಂಬಳ್ಳಿ ಹೋಬಳಿಯ 18 ಗ್ರಾಮಗಳಿಗೆ ಭೇಟಿ ನೀಡ್ತಿದ್ದೇನೆ.

ಜನ ರಾತ್ರಿವರೆಗೂ ಜೊತೆಯಲ್ಲಿ ಇದ್ದು ಬೆಂಬಲ ಕೊಡ್ತಿದ್ದಾರೆ. ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ಅಭಿವೃದ್ಧಿ ಕೆಲಸ ನಮ್ಮ ಕೈ ಹಿಡಿಯುತ್ತವೆ ಎಂದರು. ಡಿಸಿಎಂ ಡಿ.ಕೆ. ಶಿವಕುಮಾರ್ ಮುಖ್ಯ ಮಂತ್ರಿ ಆಗ್ತಾರೆ ಅದಕ್ಕಾಗಿ ಯೋಗೇಶ್ವರ್ ಗೆಲ್ಲಿಸಿ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯೆಸಿದ ಅವರು, ಕಾಂಗ್ರೆಸ್ ನಾಯಕರು ಹೇಳಿಕೆಗಳನ್ನು ಗಮನಿಸಿದ್ದೇನೆ. ರಾಜಕೀಯವಾಗಿ ಮಾತನಾಡೋದು ಸರ್ವೆ ಸಾಮಾನ್ಯ. ಆದರೆ ಮೊಮ್ಮಗನ ಪಟ್ಟಾಭಿಷೇಕಕ್ಕೆ ದೇವೇಗೌಡ್ರು ಆಯಂಬುಲೆನ್ಸ್‌ನಲ್ಲಿ ಬರ್ತಾರೆ ಅನ್ನೊದು ಸರಿಯಲ್ಲ. ಅಂತಹ ದುರ್ದೈವ ನಮಗೆ ಬಂದಿಲ್ಲ. ರಾಜ್ಯದ ಜನರ ಆಶೀರ್ವಾದಿಂದ ಅವರು ಶಕ್ತಿಯುತವಾಗಿದ್ದಾರೆ.

ದೀಪಾವಳಿ ಬಳಿಕ ಅವರೇ ಬಂದು ಪ್ರಚಾರ ಮಾಡ್ತಾರೆ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿಕೆಗೆ ತಿರುಗೇಟು ನೀಡಿದರು.

---

## ಕೃಷಿ ಹೊಂಡದಲ್ಲಿ ಬಿದ್ದು ನಾರಾಯಣಸ್ವಾಮಿ ಮೃತ

• ಉದಯವಾಹಿನಿ, ಶಿಡ್ಲಘಟ್ಟ

ಕೃಷಿ ಹೊಂಡದಲ್ಲಿ ಬಿದ್ದು ವ್ಯಕ್ತಿ ಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ಕಂಡುಬಂದಿದೆ. ಶಿಡ್ಲಘಟ್ಟ ತಾಲ್ಲೂಕಿನ ಅಬ್ಲೂಡು ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾದಹಳ್ಳಿ ಗ್ರಾಮಕ್ಕೆ ಹೋಗು ರಸ್ತೆಮಾರ್ಗದ ಪಕ್ಕದಲ್ಲಿ ನಾಗಭೂಷಣ್ ಅವರು ತೋಟದಲ್ಲಿ ನೀರಿನ ಶೇಕರಣೆಗಾಗಿ ನಿರ್ಮಿಸಿರುವ ಕೃಷಿ ಹೊಂಡದಲ್ಲಿ ನಾರಾಯಣಸ್ವಾಮಿ (31) ಬಿನ್ ದ್ಯಾವಪ್ಪ ಅವರ ಮೃತದೇಹ ಕಂಡುಬಂದಿದೆ.

ಕೃಷಿ ಹೊಂಡದಲ್ಲಿ ಬಿದ್ದಿರುವ ವ್ಯಕ್ತಿ ಜಯಂತಿ ಗ್ರಾಮದ ನಾರಾಯಣಸ್ವಾಮಿ ಅವರು ಮಾನಸಿಕ ಖಿನ್ನತೆಗೆ ಒಳಗಾಗಿದ್ದು, ಇದಕ್ಕೂ ಮೊದಲು ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದು ಸೋಮವಾರ ಬೆಳಗ್ಗೆ ಕೌಟುಂಬಿಕ ಕಲಹದಿಂದ ತೋಟದ ಕಡೆ ಹೋಗಿ ಕೃಷಿ ಹೊಂಡದಲ್ಲಿ ಬಿದ್ದು ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ. ಇನ್ನು ಮೃತ ನಾರಾಯಣಸ್ವಾಮಿ ಅವರ ತಂದೆ ದ್ಯಾವಪ್ಪ ಅವರು ತೋಟದ ಕಡೆ ಹೋಗಿದಾಗ ಕೃಷಿ ಹೊಂಡದ ಬಳಿ ಮಗನ ಚಪ್ಪಲಿ ಮತ್ತು ಬಟ್ಟೆ ಇದ್ದುದನ್ನ ಕಂಡು ಹೊಂಡಕ್ಕೆ ಬಿದ್ದಿದ್ದಾನೆ ಎಂದು ತಕ್ಷಣ ಜೋರಾಗಿ ಕಿರುಚಿಕೊಂಡಾಗ ಸ್ಥಳಿಯರು ಸ್ಥಳಕ್ಕೆ ಬಂದು ಗಾಬರಿಗೊಂಡು ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಪಿಎಸ್ ಐ ವೆಂಕಟರಮಣ ಭೇಟಿ ನೀಡಿ ಪರಿಶೀಲಿಸಿ ದೂರು ದಾಖಲಿಸಿಕೊಂಡು ಮೃತ ದೇಹವನ್ನು ಅಗ್ನಿ ಶಾಮಕದಳದ ಸಿಬ್ಬಂದಿಯ ಸಹಾಯದಿಂದ ಮೃತ ದೇಹವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಯಿತು. ಸ್ಥಳದಲ್ಲಿ ದಿಬ್ಬೂರಹಳ್ಳಿ ಪೊಲೀಸ್ ಠಾಣೆ ಸಿಬ್ಬಂದಿ ಶ್ರೀನಿವಾಸ್,ಸಂತೋಷ್, ಅಗ್ನಿ ಶಾಮಕ ದಳದ ಸಿಬ್ಬಂದಿ ಕದಿರಪ್ಪ ಮತ್ತಿತರರು ಇದ್ದರು.


ಉದಯವಾಹಿನಿ ಚಿತ್ರ

### ಹೆಜ್ಜೇನು ದಾಳಿ

**ತೋಟದ ಕೃಷಿ ಹೊಂಡದ ಬಳಿ ಜನರ ಕಿರುಚಾಟಕ್ಕೆ ಮರದಲ್ಲಿದ್ದ ಹೆಜ್ಜೇನಿನ ನೊಣಗಳು ಗಾಬರಿಗೊಂಡ ಎದ್ದು ಮೃತ ನಾರಾಯಣಸ್ವಾಮಿ ಅವರ ತಂದೆಯನ್ನ ಕಚ್ಚಿದ್ದರಿಂದ ಸರ್ಕಾರಿ ಆಸ್ಪತ್ರೆಗೆ ಅವರನ್ನ ಸೇರಿಸಲಾಯಿತು. ಸ್ಥಳೀಯರು ಜೇನು ಹುಳಗಳು ಹೆಚ್ಚಾಗಿದ್ದರಿಂದ ಕಚ್ಚುತ್ತವೆ ಎಂಬ ಭಯಕ್ಕೆ ಕೃಷಿ ಹೊಂಡದ ಬಳಿ ಹೋಗಲು ಹರ ಸಾಹಸ ಪಟ್ಟರು. ಮೃತರ ತಂದೆ ದ್ಯಾವಪ್ಪ ಅವರು ಮಾತ್ರ ಹೋಗಿದ್ದರಿಂದ ಜೇನು ನೊಣಗಳು ಕಚ್ಚಿದವು. ನಂತರ ಅಗ್ನಿ ಶಾಮಕ ದಳದ ಸಿಬ್ಬಂದಿ ಸಹಾಯದಿಂದ ಮೃತ ದೇಹವನ್ನು ಹೊರ ತೆಗೆಯಲಾಯಿತು.**

---

## ದೀಪಾವಳಿ ಜಾತ್ರೆಗೆ ಮಾದಪ್ಪನ ಸನ್ನಿಧಿ ಸಿಂಗಾರ

• ಉದಯವಾಹಿನಿ, ಮಹದೇಶ್ವರ ಬೆಟ್ಟ

ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಮಲೆ ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರೆಯ ಸಂಭ್ರಮ ಕಳೆಗಟ್ಟಿದೆ.

ಮಾದಪ್ಪನ ಸನ್ನಿಧಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕ್ಕೆ ಹರಿದು ಬರಲಿದ್ದು, ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭಕ್ತರಿಗೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತಿದೆ. ದೀಪಾವಳಿಯ ಸಂದರ್ಭ ಮಲೆ ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರು ಬರುವುದು ವಾಡಿಕೆಯಾಗಿದ್ದು, ಈ ಬಾರಿಯು ಭಾರಿ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಇದೆ. ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಅ.29ರಿಂದ ದೀಪಾವಳಿ ಜಾತ್ರೆಯ ಅಂಗವಾಗಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, ನ.2ರವರೆಗೆ ನಡೆಯಲಿದೆ.

ಕೊನೆಯ ದಿನ ಮಹಾರಥೋತ್ಸವ ನಡೆಯಲಿದ್ದು ಜಾತ್ರೆಗೆ ತೆರೆಬೀಳಲಿದೆ.

**ಸಕಲ ಸಿದ್ಧತೆ:** ಬೆಟ್ಟದಲ್ಲಿ ಧಾರ್ಮಿಕ ಕಾರ್ಯಕ್ರಮ, ವಿಶೇಷ ಪೂಜಾ ಕೈಂಕರ್ಯ, ಹಾಲರವಿ ಉತ್ಸವ ನಡೆಸುವ ಕುರಿತು ಪಾರುಪತ್ತೆಗಾರರು, ಪ್ರಧಾನ ಆಗಮಿಕರು, ಅರ್ಚಕರ ಜೊತೆ ಮಲೆ ಮಹದೇಶ್ವರ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು.ಎ. ಈ ಚರ್ಚೆ ನಡೆಸಿದ್ದಾರೆ. ಹಾಲರುವೆ ಸೇವೆಗೆ ದಾನಿಗಳು ನೀಡಿರುವ 101 ಸೀರೆಗಳ ಪರಿಶೀಲನೆ ನಡೆಸಲಾಗಿದೆ. ಮಲೆ ಮಹದೇಶ್ವರಸ್ವಾಮಿಯ ದರ್ಶನ ಮಾಡುವ ವೇಳೆ ಭಕ್ತರಿಗೆ ನೂಕು ನುಗ್ಗಲು ಉಂಟಾಗದಂತೆ ಸರತಿಸಾಲಿನ ವ್ಯವಸ್ಥೆ, ನೆರಳು, ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ. ದಾಸೋಹ ವ್ಯವಸ್ಥೆಗೆ ವಿಶೇಷ ಒತ್ತು ನೀಡಲಾಗಿದೆ. ಭಕ್ತರ ಬಾಯಾರಿಕೆ ತಣಿಸಲು ಅಲ್ಲಲ್ಲಿ ತೊಂಬೆಗಳು ಹಾಗೂ ನಲ್ಲಿಗಳ ವ್ಯವಸ್ಥೆ ಮಾಡಲಾಗುತ್ತಿದೆ.ದೀಪಾವಳಿ ಜಾತ್ರೆಗೆ ಮಾದಪ್ಪನ ಸನ್ನಿಧಿ ಸಿಂಗಾರ

**ಮಹದೇಶ್ವರ ಬೆಟ್ಟ:** ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಮಲೆ ಮಹದೇಶ್ವರಬೆಟ್ಟದಲ್ಲಿ ದೀಪಾವಳಿ ಜಾತ್ರೆಯ ಸಂಭ್ರಮ ಕಳೆಗಟ್ಟಿದೆ. ಮಾದಪ್ಪನ ಸನ್ನಿಧಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕ್ಕೆ ಹರಿದು ಬರಲಿದ್ದು, ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭಕ್ತರಿಗೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತಿದೆ. ದೀಪಾವಳಿಯ ಸಂದರ್ಭ ಮಲೆ ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರು ಬರುವುದು ವಾಡಿಕೆಯಾಗಿದ್ದು, ಈ ಬಾರಿಯು ಭಾರಿ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಇದೆ. ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಅ.29ರಿಂದ ದೀಪಾವಳಿ ಜಾತ್ರೆಯ ಅಂಗವಾಗಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, ನ.2ರವರೆಗೆ ನಡೆಯಲಿದೆ.

ಕೊನೆಯ ದಿನ ಮಹಾರಥೋತ್ಸವ ನಡೆಯಲಿದ್ದು ಜಾತ್ರೆಗೆ ತೆರೆಬೀಳಲಿದೆ.

**ಸಕಲ ಸಿದ್ದತೆ:** ಬೆಟ್ಟದಲ್ಲಿ ಧಾರ್ಮಿಕ ಕಾರ್ಯಕ್ರಮ, ವಿಶೇಷ ಪೂಜಾ ಕೈಂಕರ್ಯ, ಹಾಲರವಿ ಉತ್ಸವ ನಡೆಸುವ ಕುರಿತು ಪಾರುಪತ್ತೆಗಾರರು, ಪ್ರಧಾನ ಆಗಮಿಕರು, ಅರ್ಚಕರ ಜೊತೆ ಮಲೆ ಮಹದೇಶ್ವರ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು.ಎ.ಈ ಚರ್ಚೆ ನಡೆಸಿದ್ದಾರೆ.

ಹಾಲರುವೆ ಸೇವೆಗೆ ದಾನಿಗಳು ನೀಡಿರುವ 101 ಸೀರೆಗಳ ಪರಿಶೀಲನೆ ನಡೆಸಲಾಗಿದೆ. ಮಲೆ ಮಹದೇಶ್ವರ ಸ್ವಾಮಿಯ ದರ್ಶನ ಮಾಡುವ ವೇಳೆ ಭಕ್ತರಿಗೆ ನೂಕು ನುಗ್ಗಲು ಉಂಟಾಗದಂತೆ ಸರತಿಸಾಲಿನ ವ್ಯವಸ್ಥೆ, ನೆರಳು, ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ. ದಾಸೋಹ ವ್ಯವಸ್ಥೆಗೆ ವಿಶೇಷ ಒತ್ತು ನೀಡಲಾಗಿದೆ. ಭಕ್ತರ ಬಾಯಾರಿಕೆ ತಣಿಸಲು ಅಲ್ಲಲ್ಲಿ ತೊಂಬೆಗಳು ಹಾಗೂ ನಲ್ಲಿಗಳ ವ್ಯವಸ್ಥೆ ಮಾಡಲಾಗುತ್ತಿದೆ.


ಉದಯವಾಹಿನಿ ಚಿತ್ರ

**ಭಕ್ತರಿಗೆ ಅಗತ್ಯ ವ್ಯವಸ್ಥೆ**

---

## ರಾಗಿ ಇಳುವರಿ ಕುಸಿತದ ಆತಂಕ

• ಉದಯವಾಹಿನಿ, ಹುಣಸೂರು

ತಾಲ್ಲೂಕಿನಾದ್ಯಂತ ಹಿಂಗಾರು ಮಳೆ ವಾಡಿಕೆಗಿಂತಲೂ ಹೆಚ್ಚಾಗಿ ಸುರಿದಿದ್ದರಿಂದ ರಾಗಿ ಬೇಸಾಯಕ್ಕೆ ಹಿನ್ನಡೆಯಾಗಿದೆ.

ಪ್ರಸಕ್ತ ಸಾಲಿನಲ್ಲಿ 'ರಾಗಿ ಕಣಜ' ಎಂದು ಹೆಸರಾಗಿರುವ ಹುಣಸೂರು ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ ಇಳುವರಿ ಕುಂಠಿತವಾಗುವ ಸಾಧ್ಯತೆ ಹೆಚ್ಚಾಗಿದೆ.

ಪ್ರಸಕ್ತ ಸಾಲಿನಲ್ಲಿ ಅಕ್ಟೋಬರ್ 20ವರಗೆ 78.89 ಸೆಂ.ಮೀ ಮಳೆಯಾಗಿದ್ದು, ವಾಡಿಕೆ ಮಳೆ 69.7 ಸೆಂ.ಮಿ ಬೀಳಬೇಕಿತ್ತು. 11.42 ಸೆಂ.ಮೀ ಹೆಚ್ಚುವರಿ ಮಳೆಯಾಗಿದೆ. ಈ ಪೈಕಿ ಹನಗೋಡು ಹೋಬಳಿಯಲ್ಲಿ 86.5 ಸೆಂ.ಮೀಗೆ 89.67 ಸೆಂ.ಮೀ ಮಳೆಯಾಗಿ ತಾಲ್ಲೂಕಿನಲ್ಲೇ ಅತಿಹೆಚ್ಚು ಮಳೆ ದಾಖಲಾಗಿದೆ' ಎಂದು ಕೃಷಿ ಸಹಾಯಕ ನಿರ್ದೇಶಕ ಅನಿಲ್ ತಿಳಿಸಿದ್ದಾರೆ. ಹಿಂಗಾರು ಮಳೆಯ ಪ್ರಮುಖ ಬೆಳೆ ರಾಗಿ, ಮುಸುಕಿನ ಜೋಳ, ಅವರೆಕಾಯಿ, ಹುರುಳಿ, ಹಲಸಂದೆ, ಉದ್ದು, ಹೆಸರುಕಾಳು ಮತ್ತು ನೆಲಕಡಲೆ ಸೇರಿದೆ. 3,405 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ನಾಟಿ ಮುಗಿದಿದ್ದು, ಕೆಲವು ಭಾಗಗಳಲ್ಲಿ ತೆನೆ ಕಚ್ಚುವ ಹಂತದಲ್ಲಿದೆ. ಈ ಹಂತದಲ್ಲಿ ಬೆಳೆಯಲ್ಲಿ ಯಾವುದೇ ಕೃಷಿ ಚಟುವಟಿಕೆ ನಡೆಸಲು ಆಗುತ್ತಿಲ್ಲ. ಕೃಷಿ ಇಲಾಖೆ ಅಂದಾಜಿನಂತೆ 3,950 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೇಸಾಯ ನಡೆಯಬೇಕಿತ್ತು. 3405 ಹೆಕ್ಟೇರ್ ಪ್ರದೇಶಕ್ಕೆ ಸೀಮಿತವಾಗಿದೆ. ಮುಂಗಾರು ಹಂಗಾಮಿನಲ್ಲಿ 16,925 ಹೆಕ್ಟೇರ್‌ಗೆ 16,050 ಹೆಕ್ಟೇರ್ ಪ್ರದೇಶದಲ್ಲಿ (ಶೇ 94ರಷ್ಟು) ರಾಗಿ ಬಿತ್ತನೆ ಕಾರ್ಯ ನಡೆದಿತ್ತು.

ದ್ವಿದಳ ಧಾನ್ಯಗಳಲ್ಲಿ ಮುಸುಕಿನ ಜೋಳ 1,355 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವ ಗುರಿ ಇತ್ತು. ಅಕ್ಟೋಬರ್ 20ಕ್ಕೆ 1,045 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಮುಕ್ತಾಯವಾಗಿದೆ. ತಿಂಗಳ ಅಂತ್ಯಕ್ಕೆ ಗುರಿ ಮುಟ್ಟುವ ಸಾಧ್ಯತೆ ಇದೆ. ಹುರುಳಿ 2500 ಹೆಕ್ಟೇರ್‌ಗೆ 2,170 ಹೆಕ್ಟೇರ್‌ನಷ್ಟು ಬಿತ್ತನೆಯಾಗಿದೆ. ಹಲಸಂದೆ 600 ಹೆಕ್ಟೇರ್‌ಗೆ 530 ಹೆಕ್ಟೇರ್, ಅವರೆಕಾಯಿ 2,700 ಹೆಕ್ಟೇರ್ ಪ್ರದೇಶ ಗುರಿ ಹೊಂದಿದ್ದು, ಈ ಪೈಕಿ 2,035 ಹೆಕ್ಟೇರ್ ನಲ್ಲಿ ಬಿತ್ತನೆ ಮುಗಿದಿದೆ. ಈ ಬೆಳೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆ ಇದೆ' ಎನ್ನುತ್ತಾರೆ ಅನಿಲ್.

---

# ಡಿ.ಕೆ.ಶಿವಕುಮಾರ್ ಮುಂದಿನ ಸಿಎಂ: ಚರ್ಚೆ ಮತ್ತೆ ಆರಂಭ

## • ಒಕ್ಕಲಿಗ ಕಾಂಗ್ರೆಸ್ ನಾಯಕರು ಚನ್ನಪಟ್ಟಣ ಗೆದ್ದರೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂಬ ಪ್ರಶ್ನೆ

• ಉದಯವಾಹಿನಿ, ರಾಮನಗರ

ಚನ್ನಪಟ್ಟಣ ಉಪಚುನಾವಣೆ ಅಖಾಡದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಸುದ್ದಿ ಮತ್ತೆ ಮುನ್ನೆಲೆಗೆ ಬಂದಿದೆ. ಒಕ್ಕಲಿಗ ಕಾಂಗ್ರೆಸ್ ನಾಯಕರು ಚನ್ನಪಟ್ಟಣ ಗೆದ್ದರೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳುತ್ತಿದ್ದು, ಈ ಉಪಚುನಾವಣೆ ನಡೆಯುತ್ತಿರುವುದು ಕ್ಷೇತ್ರ ಶಾಸಕರ ಆಯ್ಕೆಗಾ ಇಲ್ಲ ಮುಂದಿನ ಮುಖ್ಯಮಂತ್ರಿ ಆಯ್ಕೆಗಾ ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಚನ್ನಪಟ್ಟಣ ಉಪಚುನಾವಣೆ ಅಖಾಡದಲ್ಲಿ ಪ್ರಚಾರ ನಡೆಸುತ್ತಿರುವ ಬಹುತೇಕ ಒಕ್ಕಲಿಗ ನಾಯಕರು ಡಿ.ಕೆ.ಶಿ. ಮುಂದಿನ ಮುಖ್ಯಮಂತ್ರಿಯಾಗುತ್ತಾರೆ. ಇದಕ್ಕೆ ಈ ಉಪಚುನಾವಣೆಯೇ ಭೂಮಿಕೆ ಎಂಬ ಅರ್ಥದಲ್ಲಿ ಮಾತನಾಡುತ್ತಿದ್ದಾರೆ. ಕ್ಷೇತ್ರದಲ್ಲಿ ಉಪ ಚುನಾವಣೆ ಕಾವೇರುತ್ತಿರುವ ನಡುವೆಯೇ ಸಿಎಂ ಯಾರು ಎಂಬ ಚರ್ಚೆ ಮುನ್ನೆಲೆಗೆ ಬಂದಿರುವುದು ಸಾಕಷ್ಟು ಮಹತ್ವ ಪಡೆದಿದೆ.

ರಾಮನಗರ ಜಿಲ್ಲೆ ಚನ್ನಪಟ್ಟಣದ ತಿಟ್ಟಮಾರನಹಳ್ಳಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಮನ್ವಯ ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ಎಂ.ಸಿ. ಅಶ್ವತ್ಥ್, ಯೋಗೇಶ್ವರ್ ಅವರನ್ನು 25 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಬೇಕು. ಯೋಗೇಶ್ವರ್ ಗೆದ್ದರೆ ಈ ಅವಧಿಯಲ್ಲೇ ಡಿ.ಕೆ. ಶಿವಕುಮಾರ್ ಅವರನ್ನು ಸಿಎಂ ಮಾಡಬಹುದು. ನಮ್ಮ ಜಿಲ್ಲೆಯ ಮಗನನ್ನು ಮುಖ್ಯಮಂತ್ರಿ ಮಾಡಲು ಕ್ಷೇತ್ರದ ಕಾರ್ಯಕರ್ತರು ಉಪಚುನಾವಣೆಯಲ್ಲಿ ಹೆಚ್ಚು ಶ್ರಮಿಸಬೇಕು ಎಂದು ತಿಳಿಸಿದ್ದಾರೆ.

ಸಿಎಂ ಬದಲಾವಣೆ ಪ್ರಸ್ತಾವ ರವಿವಾರವೂ ಮುಂದುವರಿದಿದೆ. ಚನ್ನಪಟ್ಟಣ ತಾಲ್ಲೂಕಿನ ಕೋಡಂಬಹಳ್ಳಿ ಗ್ರಾಮದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಸಿದ್ದರಾಮಯ್ಯ ಬಳಿಕ ಸಿಎಂ ಆಗುವ ಎಲ್ಲಾ ಅವಕಾಶ ಡಿ.ಕೆ. ಶಿವಕುಮಾರ್ ಅವರಿಗಿದೆ. ಯೋಗೇಶ್ವರ್ ಅವರನ್ನು ಈ ಚುನಾವಣೆಯಲ್ಲಿ ಗೆಲ್ಲಿಸಿದರೆ, ಶಿವಕುಮಾರ್ ಮುಖ್ಯಮಂತ್ರಿಯಾಗಲು ಶಕ್ತಿ ಬರುತ್ತದೆ.

ಕಾಂಗ್ರೆಸ್ ಕಾರ್ಯಕರ್ತರು ಈ ಕಾರಣದಿಂದಾಗಿ ಯೋಗೇಶ್ವರ್ ಅವರು ಹೆಚ್ಚು ಮತಗಳ ಅಂತರದಿಂದ ಗೆಲ್ಲುವಂತೆ ಶ್ರಮಿಸಬೇಕು ಎಂದರು. ಇನ್ನು ಕೋಡಂಬಹಳ್ಳಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅರಸೀಕೆರೆ ಶಾಸಕ ಶಿವಲಿಂಗೇಗೌಡ, ನಿಮ್ಮ ಜಿಲ್ಲೆಯವರೇ ಸಿಎಂ ಆಗುತ್ತಾರೆ, ಈ ಚುನಾವಣೆ ಫಲಿತಾಂಶ ಅದನ್ನು ತೋರಿಸುತ್ತದೆ. ರಾಜ್ಯ ರಾಜಕಾರಣದ ತಿರುವು ಇಲ್ಲಿಂದಲೇ ಪ್ರಾರಂಭವಾಗುತ್ತದೆ ಎಂದು ಹೇಳುವ ಮೂಲಕ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಪ್ರಸ್ತಾವಿಸಿದ್ದಾರೆ.

**ನಾನು ಒಕ್ಕಲಿಗ, ನಾನು ಸಿಎಂ ಆಗುತ್ತೇನೆ**



### ಜಾತಿ ಸಮೀಕರಣ ಆರಂಭ

**ಉಪಚುನಾವಣೆಯಲ್ಲಿ ಜಾತಿ ಸಮೀಕರಣ ಆರಂಭವಾಗಿದೆ. ಅಹಿಂದ ಮತಗಳು ಕಾಂಗ್ರೆಸ್ ಪರವಾಗಿವೆ. ಆದರೆ ಕ್ಷೇತ್ರದಲ್ಲಿ ಪ್ರಬಲ ಕೋಮು ಎನಿಸಿರುವ ಒಕ್ಕಲಿಗ ಮತದಾರರು ಜೆಡಿಎಸ್ ಪಾಳಯದ ಮತ ಬ್ಯಾಂಕ್ ಆಗಿವೆ. ಹಳೇ ಮೈಸೂರ ಭಾಗದಲ್ಲಿ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆಲ್ಲಲು ಒಕ್ಕಲಿಗ ಮತಗಳು ಚಲಾವಣೆಗೊಳ್ಳಲು ಮುಖ್ಯಕಾರಣ. ನಾನು ಒಕ್ಕಲಿಗ, ನಾನು ಸಿಎಂ ಆಗುತ್ತೇನೆ, ನನ್ನ ಕೈಗೂ ಪೆನ್ನು ನೀಡಿ ಎಂದು ಡಿ.ಕೆ. ಶಿವಕುಮಾರ್ ಪ್ರಚಾರ ಮಾಡಿದ್ದರು. ಈ ಉಪಚುನಾವಣೆಯಲ್ಲಿ ಒಕ್ಕಲಿಗರ ಮತ ಸೆಳೆಯಲು ಮತ್ತೆ ಡಿಕೆಶಿ ಸಿಎಂ ಎಂಬ ಅಸ್ತ್ರವನ್ನು ಬಳಸಲಾಗುತ್ತಿದೆಯಾ ಎಂಬ ಅನುಮಾನ ಮೂಡಿದೆ.**

**ಚನ್ನಪಟ್ಟಣದಲ್ಲಿ ಡಿ.ಕೆ. ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಹೇಳುತ್ತಿರುವ ಎಲ್ಲ ಮುಖಂಡರು ಎಚ್.ಡಿ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಒಂದು ಕಾಲದಲ್ಲಿ ಓಡಾಡುತ್ತಿದ್ದವರೇ ಆಗಿದ್ದಾರೆ. ಪುಟ್ಟಣ್ಣ, ಶಿವಲಿಂಗೇಗೌಡ, ಎಂ.ಸಿ. ಅಶ್ವತ್ಥ್ ಈ ಮೊದಲು ಜೆಡಿಎಸ್‌ನಲ್ಲಿದ್ದು, ಬಳಿಕ ಕಾಂಗ್ರೆಸ್‌ಗೆ ಬಂದಿರುವವರು ಎಂಬುದು ವಿಶೇಷ.**

---

### ಮಿನಿ ನ್ಯೂಸ್

## ಕಟ್ಟಡ ಕಾರ್ಮಿಕರಿಗೆ ಶಾಸಕ ಕೊತ್ತೂರು ಮಂಜುನಾಥ್ ಕಿಟ್ ವಿತರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೋಲಾರ

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಾರ್ಮಿಕರಿಗೆ ವಿತರಿಸುವ ಎಲೆಕ್ಟ್ರಾನಿಕ್ಸ್ ಕಿಟ್‌ಗಳನ್ನು ಸೋಮವಾರ ನಗರದ ತಮ್ಮ ಕಛೇರಿಯಲ್ಲಿ ಶಾಸಕ ಕೊತ್ತೂರು ಮಂಜುನಾಥ್ ಸಾಂಕೇತಿಕವಾಗಿ ಫಲಾನುಭವಿಗಳಿಗೆ ವಿತರಿಸಿದರು,

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ವೈ ಶಿವಕುಮಾರ್, ಕೋಮುಲ್ ನಿರ್ದೇಶಕ ಷಂಷೀರ್,ನಗರಸಭೆ ಸದಸ್ಯ ಅಂಬರೀಶ್, ಕಾರ್ಮಿಕ ನಿರೀಕ್ಷಕಿ ರಾಜೇಶ್ವರಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಮೈಲಾಂಡಹಳ್ಳಿ ಮುರಳಿ, ಛತ್ರಕೋಡಿಹಳ್ಳಿ ಮಂಜುನಾಥ್, ಮುಖಂಡರಾದ ಬೆಳಗಾನಹಳ್ಳಿ ಮುನಿವೆಂಕಟಪ್ಪ, ಖಾದ್ರಿಪುರ ಬಾಬು, ರಾಮಯ್ಯ, ಮುಂತಾದವರು ಇದ್ದರು.

## ಸ್ನೇಹಿತನ ಪತ್ನಿ ಜತೆ ಅಕ್ರಮ ಸಂಬಂಧ ಸಕ್ಕರೆ ನಾಡಲ್ಲಿ ಯುವಕನ ಕೊಲೆ

• ಉದಯವಾಹಿನಿ ಮಂಡ್ಯ

ತನ್ನ ಪತ್ನಿಯ ಜತೆ ಅಕ್ರಮ ಸಂಬಂಧ ಹೊಂದಿದ್ದಾನೆ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬ ಸ್ನೇಹಿತನನ್ನೇ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಚಿನಕುರಳಿ ಗ್ರಾಮದಲ್ಲಿ ಘಟನೆ ನಡೆದಿದೆ. ನಾಗಮಂಗಲ ತಿರುಮಲಾಪುರ ಗ್ರಾಮದ ಅರವಿಂದ್ (23) ಬರ್ಬರವಾಗಿ ಕೊಲೆಯಾದ ಯುವಕ. ಈತ ತನ್ನ ಸ್ನೇಹಿತರ ಜೊತೆ ಚಿನಕುರುಳಿ ಗ್ರಾಮದ ಕುಮಾರ್ ಎಂಬುವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ರವಿವಾರ ರಾತ್ರಿ ಸ್ನೇಹಿತರ ಜೊತೆ ಮದ್ಯ ಸೇವಿಸಿ ಮಲಗಿದ್ದ. ಈ ವೇಳೆ ಆತನ ಜೊತೆಯಲ್ಲಿ ಮಲಗಿದ್ದ ವಿಜಯ್ ಹಾಗು ಏಳುಮಲೈ ಎಂಬವರು ಸುತ್ತಿಗೆಯಿಂದ ಅರವಿಂದನಿಗೆ ಹೊಡೆದು ಹತ್ಯೆ ಮಾಡಿದ್ದಾರೆ. ಕೊಲೆ ಮಾಡಿರುವ ಇಬ್ಬರು ಕೂಡ ಅರವಿಂದನ ಸ್ವಗ್ರಾಮ ತಿರುಮಲಾಪುರದವರು. ತನ್ನ ಪತ್ನಿಯ ಜೊತೆ ಅಕ್ರಮ ಸಂಬಂಧಕ್ಕೆ ಹೊಂದಿದ್ದರಿಂದ ಕೊಲೆ ಮಾಡಿರುವುದಾಗಿ ವಿಜಯ್ ಹೇಳಿದ್ದಾನೆ. ಸ್ಥಳಕ್ಕೆ ಪಾಂಡವಪುರ ಪೊಲೀಸರ ಭೇಟಿ ನೀಡಿ ಪರಿಶೀಲನೆ ಆರಂಭಿಸಿದ್ದಾರೆ. ಆರೋಪಿಗಳನ್ನು ಬಂಧಿಸಿದ್ದಾರೆ.

## ಕುಡಿದ ನಶೆಯಲ್ಲಿ ಮಾತಿನ ಚಕಮಕಿ ಸುತ್ತಿಗೆಯಿಂದ ಹೊಡೆದು ಸ್ನೇಹಿತನ ಕೊಲೆ

• ಉದಯವಾಹಿನಿ ಪಾಂಡವಪುರ

ಕುಡಿದ ನಶೆಯಲ್ಲಿ ಸ್ನೇಹಿತರ ನಡುವೆ ಮಾತಿನ ಚಕಮಕಿ ನಡೆದು, ಕೋಪದಲ್ಲಿ ಸ್ನೇಹಿತನಿಗೆ ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಚಿನಕುರುಳಿ ಗ್ರಾಮದಲ್ಲಿ ನಡೆದಿದೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಚಿನಕುರಳಿ ಅರವಿಂದ್(27) ಕೊಲೆಯಾದ ಯುವಕ. ವಿಜಯ್ ಹತ್ಯೆ ಮಾಡಿದ ಆರೋಪಿ. ಇಬ್ಬರು ನಾಗಮಂಗಲ ತಾಲ್ಲೂಕಿನ ತಿರುಮಲಾಪುರ ಗ್ರಾಮದವರು. ಕಲ್ಲು ಕೆಲಸ ಮಾಡಲೆಂದು ಜೊತೆಗೆ ಬಂದಿದ್ದರು. ಕುಮಾರ್ ಎಂಬುವವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಕುಡಿದ ಮತ್ತಿನಲ್ಲಿ ನಿನ್ನ ಪತ್ನಿಯ ಜೊತೆ ಅಕ್ರಮ ಸಂಬಂಧ ಹೊಂದಿರುವುದಾಗಿ ಅರವಿಂದ್ ಹೇಳಿದ್ದಾನೆ.

ಇದರಿಂದ ಕುಪಿತಗೊಂಡ ವಿಜಯ್ ಸುತ್ತಿಗೆಯಿಂದ ಹೊಡೆದು ಹತ್ಯೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ. ಈ ವೇಳೆ ಮತ್ತೊಬ್ಬ ಸ್ನೇಹಿತ ಏಳುಮಲೈ ಜತೆಗಿದ್ದ. ಘಟನೆ ಸಂಬಂಧ ಆರೋಪಿ ವಿಜಯ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೆಲ್ಫಿ ತೆಗೆದುಕೊಳ್ಳುವಾಗ ಕೆರೆ ಕೋಡಿಯಲ್ಲಿ ಕೊಚ್ಚಿ ಹೋಗಿದ್ದ ವಿದ್ಯಾರ್ಥಿನಿ ರಕ್ಷಣೆ

• ಉದಯವಾಹಿನಿ ತುಮಕೂರು

ಮಂದಾರಗಿರಿ ಬೆಟ್ಟದ ಹಿಂಭಾಗದ ಮೈದಾಳ ಕೆರೆಯ ಕೋಡಿ ನೀರಿನಲ್ಲಿ ಭಾನುವಾರ ಸಂಜೆ ಸೆಲ್ಫಿ ತೆಗೆದುಕೊಳ್ಳುವಾಗ ಕೊಚ್ಚಿ ಹೋಗಿದ್ದ ಹಂಸ (20)ಎಂಬ ವಿದ್ಯಾರ್ಥಿನಿಯನ್ನು ರಕ್ಷಣೆ ಮಾಡಲಾಗಿದೆ. ಸೆಲ್ಫಿ ತೆಗೆದುಕೊಳ್ಳಲು ಹೋದ ವಿದ್ಯಾರ್ಥಿನಿ ಕೆಳಕ್ಕೆ ಬಿದ್ದು ಪೊಟರೆಯೊಂದರಲ್ಲಿ ಸಿಲುಕಿಕೊಂಡಿದ್ದಳು. ಸೋಮವಾರ ಆಕೆಯನ್ನು ಕಾಪಾಡುವಲ್ಲಿ ರಕ್ಷಣಾ ತಂಡ ಯಶಸ್ವಿಯಾಗಿದೆ. ಸುಮಾರು 12 ಗಂಟೆಗಳ ಕಾರ್ಯಾಚರಣೆ ಬಳಿಕ ಯುವತಿ ಬದುಕಿ ಬಂದಿದ್ದಾರೆ.


ಉದಯವಾಹಿನಿ ಚಿತ್ರ

ಗುಬ್ಬಿ ತಾಲ್ಲೂಕು ಶಿವರಾಂಪುರದ ನಿವಾಸಿ ಸೋಮನಾಥ್ ಅವರ ಪುತ್ರಿ ಹಂಸ ಅವರು ನಗರದ ಎಸ್‌ಐಟಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿದ್ದಾರೆ. ಮೈದಾಳ ಕೆರೆ ಕೋಡಿಯಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವಾಗ ಕಾಲು ಜಾರಿ ಬಿದ್ದಿದ್ದರು. ನೀರಿನಲ್ಲಿ ಜಾರಿ ಹೋಗಿ, ಕಲ್ಲಿನ ಪೊಟರೆಯಲ್ಲಿ ಸಿಲುಕಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ತಡ ರಾತ್ರಿವರೆಗೂ ರಕ್ಷಣಾ ಕಾರ್ಯಾಚರಣೆ ನಡೆಸಿದ್ದರು.

ಆದರೆ ಆಕೆ ಸಿಲುಕಿರುವ ಜಾಗಕ್ಕೆ ಹೋಗುವುದು ಸವಾಲಿನ ಕೆಲಸವಾಗಿತ್ತು. ಹತ್ತಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಕೋಡಿ ಹರಿಯುವ ಭಾಗದಲ್ಲಿ ಸುಮಾರು ಹದಿನೈದು ಅಡಿ ಆಳದಲ್ಲಿರುವ ಕಲ್ಲಿನ ಬಂಡೆ ನಡುವೆ ಹಂಸ ಸಿಲುಕಿರಬಹುದು ಎಂದು ಶಂಕಿಸಲಾಗಿತ್ತು. ಅದೀಗ ನಿಜವಾಗಿದೆ.

ಕೋಡಿ ನೀರು ರಭಸದಿಂದ ಹರಿಯುತ್ತಿರುವ ಕಾರಣ, ಆಕೆಯ ಪತ್ತೆ ಹಾಗೂ ರಕ್ಷಣೆಗೆ ತೊಡಕಾಗಿತ್ತು. ಕೆರೆ ಕೊಡಿಯ ನೀರನ್ನು ಬೇರೆಡೆಗೆ ತಿರುಗಿಸುವ ಮೂಲಕ, ಆಕೆ ಸಿಲುಕಿದ್ದ ಕಲ್ಲಿನ ಪೊಟರೆಯ ಜಾಗಕ್ಕೆ ನೀರು ಹೋಗದಂತೆ ನೋಡಿಕೊಂಡು, ಬಳಿಕ ರಕ್ಷಣಾ ಕಾರ್ಯವನ್ನು ಯಶಸ್ವಿಯಾಗಿ ನಡೆಸಲಾಯಿತು.

**ಭಾನುವಾರ ರಕ್ಷಣಾ ಕಾರ್ಯ ಸ್ಥಗಿತಗೊಳಿಸಿದ್ದ ಅಗ್ನಿ ಶಾಮಕ ಸಿಬ್ಬಂದಿ, ಸೋಮವಾರ ಘಟನೆ ನಡೆದ ಮಂದಾರಗಿರಿ ಬೆಟ್ಟದ ಬಳಿ ಮೈದಾಳ ಕೆರೆ ಕೋಡಿ ಸ್ಥಳಕ್ಕೆ ಮತ್ತೆ ತೆರಳಿದ್ದು, ಬೆಳಿಗ್ಗೆಯಿಂದ ರಕ್ಷಣಾ ಕಾರ್ಯಾಚರಣೆ ಪುನಾರಂಭಿಸಿದ್ದರು. ಕದ್ದು ಸೆಲ್ಫಿ ತೆಗೆದಿದ್ದೇ ಕಳ್ಳತನ ಮಾಡಿದ್ದವಳು ಸಿಕ್ಕಿಬೀಳಲು ಕಾರಣವಾಯ್ತು**

ಅಂತರಾಳದಿಂದ..
EDITORIAL

# ಗೋಮಾಂಸ ಸೇವನೆ ಅಪರಾಧವೆ?

ಒಂದು ಕಾಲದ ಸಾದತ್ ಹಸನ್ ಮಾಂಟೋ ಅವರ ವಿಡಂಬನೆಗಳು ಇಂದು ವಾಸ್ತವ ರೂಪತಾಳಿ ಮಾಧ್ಯಮಗಳ ಮುಖ ಪುಟ ಸುದ್ದಿಗಳಾಗುತ್ತಿವೆ. ಹರ್ಯಾಣದಲ್ಲಿ ಬೀಫ್ ಸೇವಿಸಿದ ಕಾರಣಕ್ಕೆ ಸಂಘಪರಿವಾರದ ದುಷ್ಕರ್ಮಿಗಳಿಂದ ಹತ್ಯೆಗೀಡಾಗಿದ್ದವಲಸೆ ಕಾರ್ಮಿಕನ ಪ್ರಕರಣ, ಇದೀಗ ವಿಡಂಬನೆಯ ರೂಪ ಪಡೆದಿದೆ. ಹರಿಯಾಣದ ಚರ್ಖಿ ದಾದ್ರಿ ಜಿಲ್ಲೆಯಲ್ಲಿ ಎರಡು ತಿಂಗಳ ಹಿಂದೆ ಕಾರ್ಮಿಕನೊಬ್ಬನನ್ನು ಬೀಫ್ ಸೇವಿಸಿದ ಕಾರಣಕ್ಕಾಗಿ ದುಷ್ಕರ್ಮಿಗಳು ಕೊಂದು ಹಾಕಿದ್ದರು. ಇದೀಗ ಎರಡು ತಿಂಗಳ ಬಳಿಕ ಹತ ಕಾರ್ಮಿಕನ ಮನೆಯಿಂದ ವಶ ಪಡಿಸಿಕೊಳ್ಳಲಾಗಿದ್ದ ಮಾಂಸದ ಸ್ಯಾಂಪಲ್ ದನದ್ದಲ್ಲ ಎಂದು ಪ್ರಯೋಗಾಲಯ ಸ್ಪಷ್ಟಪಡಿಸಿದೆಯಂತೆ ಹತ್ಯೆಗೆ ಕೆಲವು ಗಂಟೆಗಳ ಮುನ್ನ ಪೊಲೀಸರಿಗೆ ಕರೆ ಮಾಡಿದ್ದ ಗುಂಪು, ಆ ಪ್ರದೇಶದಲ್ಲಿರುವ ಜೋಪಡಿಗಳಲ್ಲಿ ಬೀಫ್ ಅಡುಗೆ ಮಾಡಿ ತಿನ್ನಲಾಗುತ್ತಿದೆ ಎಂದು ಆರೋಪಿಸಿತ್ತು. ಈ ಹತ್ಯೆಗೆ ಸಂಬಂಧಿಸಿ ಈಗಾಗಲೇ 10 ಮಂದಿಯನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಮುಖ್ಯ ಆರೋಪಿಗಳೆಂದು ಗುರುತಿಸಲಾಗಿರುವ ನಿಜಕ್ಕೂ ಚರ್ಚೆಯಾಗಬೇಕಾದದ್ದು ಮಾಂಸ ಸೇವಿಸಿದ ಕಾರಣಕ್ಕಾಗಿ ಒಬ್ಬ ಕಾರ್ಮಿಕ ನನ್ನು ಬರ್ಬರವಾಗಿ ಕೊಂದು ಹಾಕಿದ್ದು ಎಷ್ಟು ಸರಿ ಎನ್ನುವುದು? ಈ ದೇಶದಲ್ಲಿ ಬೀಫ್ ಸೇವಿಸುವುದು ತಪ್ಪೆ? ಅವರೇನೂ ಅಲ್ಲಿ ಯಾವುದೇ ಪ್ರಾಣಿಯನ್ನು ಅಕ್ರಮವಾಗಿ ಕೊಂದು, ಅದನ್ನು ಅಡುಗೆ ಮಾಡಿ ತಿಂದಿರಲಿಲ್ಲ ಹೊರಗಿನಿಂದ ಮಾಂಸ ತಂದು ಬೇಯಿಸಿ ಅದನ್ನು ಸೇವಿಸಿದ್ದಾರೆ. ಈ ದೇಶದಲ್ಲಿ ಆಹಾರದಭಾಗವಾಗಿ ಬೀಫ್ ಸೇವಿಸುವುದು ಅಪರಾಧವಲ್ಲ ಆದರೂ ಪೊಲೀಸರು ಚರ್ಚೆಯನ್ನು ತಿಂದಿರುವುದು ಗೋಮಾಂಸವೋ ಅಲ್ಲವೋ ಎನ್ನುವುದರ ಕಡೆಗೆ ತಿರುಗಿಸಿದ್ದಾರೆ. ಇದೀಗ ಮಾಂಸ ಬೀಫ್ ಅಲ್ಲದೇ ಇರುವುದರಿಂದ ಆರೋಪಿಗಳು ಎಸಗಿರುವುದು ತಪ್ಪು ಎಂದು ಪರೋಕ್ಷವಾಗಿ ಹೇಳುತ್ತಿದ್ದಾರೆ. ಒಂದು ವೇಳೆ ಮಾಂಸ ಬೀಫ್ ಆಗಿದ್ದಿದ್ದರೆ ಕೊಲೆಗಾರರು ಎಸಗಿರುವುದು ಸರಿಯಾಗಿ ಬಿಡುತ್ತಿತ್ತೇ ಪೊಲೀಸರ ಸಮಸ್ಯೆ ಇನ್ನೂ ಪೂರ್ತಿಯಾಗಿ ಪರಿಹಾರವಾಗಿಲ್ಲ, ಯಾಕೆಂದರೆ, ತಿಂದಿರುವುದು ಬೀಫ್ ಅಲ್ಲದೇ ಇರಬಹುದು.

> ಪೊಲೀಸರು ಗ್ರಾಮವನ್ನು ತಲುಪುವ ಮುನ್ನವೇ ಗುಂಪ ಕಾರ್ಮಿಕ ಮಲಿಕ್‌ನನ್ನು ಥಳಿಸಿಕೊಂದು ಹಾಕಿತ್ತು ಪೊಲೀಸರು ಸ್ಥಳ ಮಹಜರು ನಡೆಸಿ, ಮಾಂಸವನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. 'ಪ್ರಯೋಗಾಲಯದ ವರದಿಯನ್ನು ನಾವು ಸ್ವೀಕರಿಸಿದ್ದು ಅದು ದನದ ಮಾಂಸವಲ್ಲ ಎನ್ನುವುದು ದೃಢಪಟ್ಟಿದೆ' ಎಂದು ಪೊಲೀಸರು ಇದೀಗ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಆದರೆ ದುಷ್ಕರ್ಮಿಗಳು ಕೊಂದಿರುವುದು ಮುಸ್ಲಿಮ್ ಸಮುದಾಯಕ್ಕೆ ಸೇರಿದ ಕಾರ್ಮಿಕರನ್ನೋ ಅಥವಾ ಬೇರೆಯವರನ್ನೋ ಎನ್ನುವುದು ಕೂಡ ಸದ್ಯದ ದಿನಗಳಲ್ಲಿ ಬಹಳ ಮುಖ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ತನಿಖೆ ನಡೆದು, 'ಕೊಲೆಯಾದ ಸಂತ್ರಸ್ತ ಮುಸ್ಲಿಮನಾಗಿರಲಿಲ್ಲ' ಎನ್ನುವುದು ಕೂಡ ಪೊಲೀಸರ ತನಿಖೆಯಿಂದ ಬಹಿರಂಗವಾಗಬಹುದು. ಆಗಲೂ ಆರೋಪಿಗಳು ಪೊಲೀಸರ ದೃಷ್ಟಿಯಿಂದ ಅಮಾಯಕರಾಗುವ ಸಾಧ್ಯತೆಗಳನ್ನು ಪೂರ್ತಿಯಾಗಿ ನಿರಾಕರಿಸಲಾಗುವುದಿಲ್ಲ. 'ಶಂಕಿತ ಬೀಫ್ ಸೇವಿಸಿದ ಕಾರ್ಮಿಕ ಮುಸ್ಲಿಮನೆಂದು ತಪ್ಪು ತಿಳಿದು ಆರೋಪಿಗಳು ಕೊಂದಿದ್ದಾರೆ ಎಂದು ಪತ್ರಿಕಾ ಹೇಳಿಕೆ ನೀಡುವ ದಿನಗಳು ದೂರವಿಲ್ಲ. ಇತ್ತೀಚೆಗೆ ಹರ್ಯಾಣದ ಫರೀದಾಬಾದ್‌ನಲ್ಲಿ ನಕಲಿ ಗೋರಕ್ಷಕರೆಂದು ಗುರುತಿಸಿಕೊಂಡಿದ್ದ ದುಷ್ಕರ್ಮಿಗಳು ಕಾರೊಂದನ್ನು ಬೆನ್ನಟ್ಟಿ ವಿದ್ಯಾರ್ಥಿಯೊಬ್ಬನನ್ನು ಗುಂಡಿಟ್ಟು ಕೊಂಡಿದ್ದರು. ಆದರೆ ಬಳಿಕ ಕೊಲೆಯಾದಾತನ ಹೆಸರು ಆರ್ಯನ್ ಮಿಶ್ರಾ ಎನ್ನುವುದು ಬೆಳಕಿಗೆ ಬಂತು. ಈ ಸಂದರ್ಭದಲ್ಲಿ ಕಾರಿನಲ್ಲಿದ್ದಾತ ಮುಸ್ಲಿಮ್ ಎಂದು ತಿಳಿದು ಗುಂಡು ಹಾರಿಸಿದ್ದ ಎಂದು ಕೊಲೆ ಆರೋಪಿ ಪಶ್ಚಾತ್ತಾಪ ಪಟ್ಟಿದ್ದನಂತೆ ಅವನ ಪ್ರಕಾರ, ಅಲ್ಲಿ ಮಿತ್ರಾ ಬದಲಿಗೆ, ಶರೀಫ್ ಇದ್ದಿದ್ದರೆ ಅವನು ಮಾಡಿರುವುದು ಸರಿ. ಕಾರಿನಲ್ಲಿ ಗೋಮಾಂಸ ಅಥವಾ ಗೋವುಗಳು ಇರುವುದು ಅವರಿಗೆ ಮುಖ್ಯವಲ್ಲ. ಆ ಕಾರಿನಲ್ಲಿರುವವನ ಹೆಸರು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ್ದರೆ ಆತ ಮಾಡಿರುವ ಕೃತ್ಯ ಸಕ್ರಮವಾಗಿ ಬಿಡುತ್ತದೆ. ಪಶ್ಚಾತ್ತಾಪ ಪಡುವ ಅಗತ್ಯವೂ ಇರುವುದಿಲ್ಲ. ಈ ಘಟನೆಯಲ್ಲಿ ಮೃತನ ಹೆಸರು ಅರ್ಯನ್ ಮಿಶ್ರಾ ಇದ್ದ ಕಾರಣಕ್ಕೇ ಆರೋಪಿಗಳನ್ನು ತಕ್ಷಣವೇ ಬಂಧಿಸಿ ಅವರ ಮೇಲೆ ಪ್ರಕರಣವನ್ನು ದಾಖಲಿಸಲಾಯಿತು.

ಒಂದು ವೇಳೆ ಆತ ಬೇರೆ ಧರ್ಮಕ್ಕೆ ಸೇರಿದವನಾಗಿದ್ದರೆ, ಪೊಲೀಸರು ಇಷ್ಟೊಂದು ಆಸಕ್ತಿಯಿಂದ ಆರೋಪಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲವೇನೋ ಕಾರ್ಮಿಕ ಮಾಂಸ ಸೇವಿಸಿದ ಪ್ರಕರಣವೂ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಕಾರ್ಮಿಕ ಮುಸ್ಲಿಮ್ ಸಮುದಾಯಕ್ಕೆ ಸೇರಿದವನಾಗಿರುವುದರಿಂದ ಅವನು ಯಾವ ಮಾಂಸ ಸೇವಿಸಿದರೂ ದುಷ್ಕರ್ಮಿಗಳ ಪಾಲಿಗೆ ಅದು ಬೀಫ್ ಮಾತ್ರ ಆಗಿರುತ್ತದೆ. ಯಾಕೆಂದರೆ ಅವರಿಗೆ ಅವರು ಏನನ್ನು ಸೇವಿಸಿದ್ದಾರೆ ಎನ್ನುವುದಲ್ಲ. ಸೇವಿಸಿದವರು ಯಾವ ಧರ್ಮಕ್ಕೆ ಸೇರಿದ್ದಾರೆ. ಎನ್ನುವುದು ಮುಖ್ಯವಾಗಿರುತ್ತದೆ. ಜೋಪಡ ಪಟ್ಟಿಯಲ್ಲಿ ಮನುಷ್ಯರು ಹೊಟ್ಟೆ ತುಂಬಾ ಊಟ ಮಾಡುವುದೇ ದೊಡ್ಡ ವಿಷಯ. ಹೀಗಿರುವಾಗ, ಅವರು ತಿಂದ ಮಾಂಸ ಯಾವ ಪ್ರಾಣಿಯನ್ನು ಎಂದು ತನಿಖೆ ನಡೆಸಿ, 'ಬೀಫ್ ತಿಂದಿಲ್ಲ ಎಂದು ಮಾಧ್ಯಮಗಳ ಮುಂದೆ ಘೋಷಿಸುವ ಪೊಲೀಸರು ಹೊಟ್ಟೆಗೆ ಅನ್ನ ತಿನ್ನುತ್ತಾರೆ ಎನ್ನುವುದನ್ನು ನಂಬಲು ಸಾಧ್ಯವೆ ಈ ದೇಶದಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಕೊಲ್ಲುವುದು ತಪ್ಪೇ ಹೊರತು, ಗೋಮಾಂಸವನ್ನು ಸೇವಿಸುವುದು ತಪ್ಪು ಎಂದು ಯಾವ ಕಾನೂನೂ ಹೇಳುವುದಿಲ್ಲ. ವಿಪರ್ಯಾಸವೆಂದರೆ, ಈ ದೇಶ ಇಂದಿಗೂ ಗೋಮಾಂಸವನ್ನು ರಫ್ತು ಮಾಡುವುದರಲ್ಲಿ ಅಗ್ರ ಸ್ಥಾನದಲ್ಲಿದೆ. ಬಡ ಕೂಲಿ ಕಾರ್ಮಿಕನನ್ನು ಗೋಮಾಂಸ ಸೇವಿಸಿದ ಆರೋಪದಲ್ಲಿ ಕೊಂದು ಹಾಕುವ ದುಷ್ಕರ್ಮಿಗಳಿಗೆ ಇದು ಗೊತ್ತಿಲ್ಲ ಎಂದಲ್ಲ ಇಲ್ಲಿ ವಿಷಯ ಗೋಮಾಂಸವಲ್ಲ ಒಂದು ನಿರ್ದಿಷ್ಟ ಸಮುದಾಯದ ಮೇಲಿರುವ ದ್ವೇಷವೇ ಕೊಲೆಗೆ ಕಾರಣ ಮತ್ತು ಗೋಮಾಂಸದ ಹೆಸರಿನಲ್ಲಿ ನಡೆಯುತ್ತಿರುವ ಎಲ್ಲಾ ದಾಳಿಗಳೂ ಒಂದು ನಿರ್ದಿಷ್ಟ ಸಮುದಾಯದ ಮೇಲೆ ದಾಳಿ ನಡೆಸಲು ಇರುವ ಕುಂಟು ನೆಪಗಳಷ್ಟೇ ಭಾರತದ ಹಸಿವಿನ ಸೂಚ್ಯಂಕ ಅತ್ಯಂತ ಕಳವಳಕಾರಿಯಾಗಿದೆ ಎಂದು ಇತ್ತೀಚಿನ ವರದಿ ಹೇಳುತ್ತದೆ. ಅಪೌಷ್ಟಿಕತೆ ಭಾರತದಲ್ಲಿ ಹೆಚ್ಚುತ್ತಿದೆ. ಭಾರತದಲ್ಲಿ 23.4 ಕೋಟಿ ಕಡುಬಡವರಿದ್ದಾರೆ ಎನ್ನುವ ಅಂಶವನ್ನು ವಿಶ್ವಸಂಸ್ಥೆ ಬಹಿರಂಗಪಡಿಸಿದೆ. ಅಪೌಷ್ಟಿಕತೆಯ ಕಾರಣದಿಂದ ಹರಡುವ ಕ್ಷಯದಂತಹ ರೋಗಗಳು ಭಾರತದಲ್ಲಿ ಹೆಚ್ಚುತ್ತಿವೆ. ಭಾರತ ಚರ್ಚಿಸಬೇಕಾದದ್ದು ಈ ವಿಷಯದ ಕುರಿತಂತೆ ಭಾರತದಲ್ಲಿ ಹಸಿವಿನ ಕಾರಣದಿಂದ ಸಾಯುತ್ತಿರುವವರ ಸಂಖ್ಯೆಗಳು ಸುದ್ದಿಯಾಗಬೇಕು.




• ಹಿಂದಿನ ಸಂಚಿಕೆಯಿಂದ 17ನೆಯ ಅಧ್ಯಾಯ

ಯಜ್ಞಾದಿ ಸತ್ಕರ್ಮಗಳಿಗೆ ವಿಘ್ನವನ್ನು ಮಾಡುವವಳು. ಸಾಯಂಕಾಲವಾದರೆ ಇವಳನ್ನು ಕೊಲ್ಲಲು ಶಕ್ಯವಲ್ಲ ರಾಕ್ಷಸರಿಗೆ ಸಾಯಂಕಾಲದಲ್ಲಿ ಬಲವು ಹೆಚ್ಚುವುದು. ಆಗ ಅವರನ್ನು ಜಯಿಸುವದಕ್ಕೆ ಯಾರಿಗೂ ಶಕ್ಯವಲ್ಲ ಆದ್ದರಿಂದ ಈಗಲೇ ಇವಳನ್ನು ಸಂಹರಿಸಬೇಕು ಎಂದು ಹೇಳಿದನು ಆ ವಾಕ್ಯವನ್ನು ಕೇಳಿ ಶ್ರೀರಾಮನು ಶಬ್ದವೇಧಿ ಎಂಬ ಬಾಣವನ್ನು ತೊಟ್ಟು ಅನೇಕ ಶರಗಳಿಂದ ತಾಟಕಿಯನ್ನು ಮುಚ್ಚಿದನು ಆ ಯಕ್ಷಿಯು ಮಾಯಾಸಾಮರ್ಥ್ಯದಿಂದ ಆ ಅಂಬುಗಳನ್ನು ತಪ್ಪಿಸಿಕೊಂಡು, ಲಕ್ಷ್ಮಣನ ಮೇಲೆ ಆರ್ಭಟಿಸಿ ಸಿಡಿಲಿನ ಹಾಗೆ ಅತಿವೇಗದಿಂದ ನುಗ್ಗಿ ಬರುವುದನ್ನು ಕಂಡು ರಘುನಾಥನು ಒಂದು ಶರವನ್ನು ತಾಟಕಿಯ ಎದೆಗೆ ಸಂಧಾನಮಾಡಿ ಎಸೆದನು. ತಾಟಕಿಯು ಆ ಬಾಣದಿಂದ ಎದೆಯೊಡೆದು ಬಿದ್ದು ಶರೀರವನ್ನು ಬಿಟ್ಟಳು. ' ಹಾಗೆ ಮಂಥರೆಗೆ ಸಮಾನಳಾದ ತಾಟಕಿಯು ಲೋಕಾಂತರಕ್ಕೆದಿದ ವೃತ್ತಾಂತವನ್ನು ಕಂಡಂಥ ದೇವೇಂದ್ರನೂ ಸಮಸ್ತ ದೇವತೆಗಳೂ ರಾಮಲಕ್ಷ್ಮಣರನ್ನು ಅನೇಕ ರೀತಿಯಲ್ಲಿ ಕೊಂಡಾಡಿದರು. ಅವರು ಅತ್ಯಂತ ಸಂತೋಷದಿಂದ ವಿಶ್ವಾಮಿತ್ರಮುನೀಂದ್ರನನ್ನು ಕುರಿತು 'ಮುನೀಶ್ವರನೇ, ನಿನಗೆ ಅನೇಕ ಶ್ರೇಯಸ್ಸಾಗಲಿ ! ಇಂದ್ರಾದಿ ದೇವತೆಗಳೂ ಏಕಾದಶರುದ್ರರೂ ಬೃಹಸ್ಪತಿಯೂ ಯಕ್ಷರಿಗೆ ಒಡೆಯ ನಾದ ಕುಬೇರನೂ ವಿಶ್ವೇದೇವತೆಗಳೂ ಋಷಿಗಳೂ ವರುಣನೂ ಪಿತೃದೇವತೆಗಳೂ ಮೊದಲಾದ ನಾವೆಲ್ಲರೂ ಕೂಡಿ ನಿನ್ನ ಚರಿತದಿಂದ ಸಂತೋಷಪಟ್ಟೆವು. ವಿಶ್ವಾಮಿತ್ರ, ಪೂರ್ವದಲ್ಲಿ ಭೃಶಾಶ್ವ ನೆಂಬ ರಾಯನಿಗೆ ಜನಿಸಿದ ನೂರೈವತ್ತು ಮಕ್ಕಳು ಮಂತ್ರಾಸ್ತ್ರಸ್ವರೂಪರಾಗಿ ನಿನ್ನ ವಶವರ್ತಿಗಳಾಗಿದ್ದಾರೆ.

ಆ ಮಂತ್ರಾಸ್ತ್ರಗಳನ್ನು ರಘುನಾಥನಿಗೆ ಉಪದೇಶಮಾಡು. ನಿನ್ನ ಮಂತ್ರಜಾಲಕ್ಕೆ ಈತನೇ ಪಾತ್ರನು. ಈತನು ನಿನ್ನ ಸಂಗಡ ಬಂದಿದ್ದಾನೆ. ದಶರಥರಾಯನ ಕುಮಾರನಾದ ರಘುನಾಥನು ಸಮಸ್ತ ದೇವತೆಗಳ ಕಾರ್ಯಗಳನ್ನೂ ಸಾಧ್ಯಮಾಡಬೇಕು. ಆದ್ದರಿಂದ ನನ್ನ ವಶವಾಗಿರುವ ಮಂತ್ರಾಸ್ತ್ರಗಳನ್ನು ಶ್ರೀರಾಮನಿಗೆ ಉಪದೇಶಮಾಡು ಎಂದು ಹೇಳಿ ತಮ್ಮ ತಮ್ಮ ಲೋಕಗಳಿಗೆ ಬಿಜಯಂಗೈದರು.

ಆಮೇಲೆ ವಿಶ್ವಾಮಿತ್ರನು, ತನ್ನ ವಚನದಿಂದ ತಾಟಕಿಯನ್ನು ಕೊಂದು ಜಯಲಕ್ಷ್ಮೀ ಸಂಪನ್ನನಾದ ರಘುನಾಥನನ್ನು ನೋಡಿ ಅತ್ಯಂತ ಸಂತುಷ್ಟಚಿತ್ತನಾದನು ಆಮೇಲೆ ಸಾಯಂಕಾಲವಾಗುತ್ತಿರಲು ಆತನನ್ನು ಕುರಿತು ಎಲೈ ರಘುನಾಥನೆ, ಈ ಆಶ್ರಮದಲ್ಲಿ ಈ ರಾತ್ರಿಯನ್ನು ಕಳೆದು ನಾಳೆ ನಮ್ಮ ಆಶ್ರಮಕ್ಕೆ ಹೋಗೋಣ ಎಂದು ಹೇಳಿ ರಾಮಲಕ್ಷ್ಮಣರೊಡನೆ ಆ ತಾಟಕಿಯವನದಲ್ಲಿ ಸುಖದಿಂದಿದ್ದನು ಆ ಯಕ್ಷಿಯನ್ನು ಕೊಂದುದರಿಂದ ಆಗ ಆ ವನವು ಶಾಪವಿಮೋಚನವನ್ನು ಹೊಂದಿ ಕುಬೇರನ ಚೈತ್ರರಥವೆಂಬ ಉದ್ಯಾನವನದಂತೆ ಮನೋಹರವಾಗಿ ಒಪ್ಪುತ್ತಿತ್ತು.

ಮುಂದುವರಿಯುವುದು...

# ಸರ್ಕಾರದ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್ ಬೇಕು

## ಆಧಾರ್‌ನ ಪ್ರಾದೇಶಿಕ ಕಚೇರಿಗೆ ಹೋಗಿ ಬದಲಾವಣೆ ಪ್ರಕ್ರಿಯೆಯನ್ನು ಅನುಸರಿಸಿ

• ಉದಯವಾಹಿನಿ, ಬೆಂಗಳೂರು

ಪ್ರಮುಖ ದಾಖಲೆಗಳಲ್ಲಿ ಆಧಾರ್ ಕಾರ್ಡ್ ಕೂಡ ಒಂದಾಗಿದೆ. ಈಗ ಯಾವುದೇ ಕಚೇರಿಗೆ ಹೋದರೂ ಕೈಯಲ್ಲಿ ಆಧಾರ್ ಹಿಡಿದುಕೊಂಡು ಹೋಗಲೇಬೇಕಾಗುತ್ತದೆ. ಇನ್ನೂ ಒಂದು ವೇಳೆ ಇದರಲ್ಲಿ ಮಾಹಿತಿ ತಪ್ಪಾಗಿದ್ದರೆ, ಎಷ್ಟು ಬಾರಿ ತಿದ್ದುಪಡಿ ಮಾಡಬಹುದು ಎನ್ನುವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ ಗಮನಿಸಿ.



ಉದಯವಾಹಿನಿ ಚಿತ್ರ

ಇದೀಹ ಹುಟ್ಟಿದ ಮಗುವಿಂದಲೂ ಎಲ್ಲಾರಿಗೂ ಸರ್ಕಾರ ಆಧಾರ್ ಕಾರ್ಡ್ ಕಟಡ್ಡಾಯಗೊಳಿಸಿದೆ. ಪಾನ್ ಕಾರ್ಡ್, ಬ್ಯಾಂಕ್ ಖಾತೆ ಸೇವೆಗಳೊಂದಿಗೆ ಸರ್ಕಾರದ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್ ಬೇಕೇ ಬೇಕಾಗುತ್ತದೆ.

ಆದ್ದರಿಂದ ಇದು ತುಂಬಾ ಮುಖ್ಯವಾದ ದಾಖಲೆ ಆಗಿದೆ. ಆಧಾರ್ ಕಾರ್ಡ್ ಅನ್ನು ಗುರುತಿನ ಚೀಟಿಯಾಗಿಯೂ ಬಳಸಿಕೊಳ್ಳಲಾಗುತ್ತದೆ.

**ವೆಬ್‌ಸೈಟ್‌ಗೆ ಭೇಟಿ ಕೊಡಿ**

ಇನ್ನೂ ಈ ಆಧಾರ್ ಕಾರ್ಡ್‌ನಲ್ಲಿ ಹೆಸರು, ಹುಟ್ಟಿದ ದಿನಾಂಕ, ಕುಟುಂಬದ ಹೆಸರು, ವಿಳಾಸ, ಲಿಂಗ ಇತ್ಯಾದಿ ತಪ್ಪುಗಳಿದ್ದರೆ ನೀವು ತೊಂದರೆಗೆ ಸಿಲುಕುವುದು ಗ್ಯಾರಂಟಿ. ಇದನ್ನು ಸರಿಪಡಿಸಬಹುದು, ಆದರೆ ಆಧಾರ್ ಕಾರ್ಡ್‌ನಲ್ಲಿ ನಿಮ್ಮ ಹೆಸರು, ಹುಟ್ಟಿದ ದಿನಾಂಕ ಅಥವಾ ಇತರ ವಿವರಗಳನ್ನು ಪದೇ ಪದೇ ಬದಲಾಯಿಸಬಹುದು ಎಂದು ನೀವು ಭಾವಿಸಿದರೆ ತಪ್ಪು.

ಯಾಕೆಂದರೆ ಆಧಾರ್ ಕಾರ್ಡ್‌ನಲ್ಲಿ ಯಾವುದೇ ಬದಲಾವಣೆಗೆ ಒಂದು ಮಿತಿ ಇರುತ್ತದೆ. ಅದರ ನಂತರ ಅದನ್ನು ಬದಲಾವಣೆ ಮಾಡಲಾಗುವುದಿಲ್ಲ. ಆಧಾರ್ ಕಾರ್ಡ್‌ನಲ್ಲಿ ಯಾವ ಮಾಹಿತಿಯನ್ನು ಎಷ್ಟು ಬಾರಿ ಬದಲಾಯಿಸಬಹುದು ಎನ್ನುವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ ತಿಳಿಯಿರಿ.

> ಇನ್ನು ನಿಮ್ಮ ಆಧಾರ್ ಕಾರ್ಡ್‌ನಲ್ಲಿ ನಿಮ್ಮ ವಿಳಾಸವನ್ನು ಬದಲಾಯಿಸಲು ನೀವು ಬಯಸಿದರೆ, ನೀವು ಬಯಸಿದಷ್ಟು ಬಾರಿ ಬದಲಾಯಿಸಬಹುದು. ಇದಕ್ಕೆ ಯಾವುದೇ ಮಿತಿಯಿಲ್ಲ. ಆದರೂ, ಇದಕ್ಕಾಗಿ ನೀವು ವಿಳಾಸದ ಪುರಾವೆಯನ್ನು ನೀಡಬೇಕಾಗುತ್ತದೆ. ಇದರಿಂದ ನಿಮ್ಮ ವಿಳಾಸವನ್ನು ಪರಿಶೀಲನೆ ಮಾಡಲಾಗುತ್ತದೆ. ಒಂದು ವೇಳೆ ಆಧಾರ್ ಕಾರ್ಡ್‌ನಲ್ಲಿ ನಿಮ್ಮ ಲಿಂಗ ತಪ್ಪಾಗಿದ್ದರೆ, ಅದನ್ನು ಬದಲಾಯಿಸಲು ಬಯಸಿದರೆ, ಆಧಾರ್‌ನ ಪ್ರಾದೇಶಿಕ ಕಚೇರಿಗೆ ಹೋಗಿ ಬದಲಾವಣೆ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ.

2019ರ ಮೊದಲು ಆಧಾರ್ ಕಾರ್ಡ್‌ನಲ್ಲಿ ಯಾವುದೇ ಮಾಹಿತಿಯನ್ನು ಬದಲಾವಣೆ ಮಾಡಲು ಯಾವುದೇ ಮಿತಿ ಇರಲಿಲ್ಲ. ಆದರೆ, ಅದರ ನಂತರ ಯುಐಡಿಎಐ ಹೆಸರು, ಹುಟ್ಟಿದ ದಿನಾಂಕ ಮತ್ತು ಲಿಂಗದಲ್ಲಿ ಬದಲಾವಣೆಗಳಿಗೆ ಮಿತಿ ಹೇರಲಾಗಿದ್ದು, ಇದಕ್ಕೆ ಶುಲ್ಕವನ್ನೂ ಕೂಡ ಪಾವತಿ ಮಾಡಬೇಕಾಗುತ್ತದೆ ನೆನಪಿರಲಿ.

> ಆಧಾರ್ ಕಾರ್ಡ್‌ನಲ್ಲಿ ಹುಟ್ಟಿದ ದಿನಾಂಕವನ್ನು ಬದಲಾಯಿಸಬೇಕಾದರೆ, ಒಮ್ಮೆ ಮಾತ್ರ ಸಾಧ್ಯ. ಹುಟ್ಟಿದ ದಿನಾಂಕದಲ್ಲಿ ಗರಿಷ್ಠ 3 ವರ್ಷಗಳ ಬದಲಾವಣೆ ಮಾಡಬಹುದು. ಅಂದರೆ, ನಿಮ್ಮ ಹುಟ್ಟಿದ ದಿನಾಂಕ ಏನೇ ಇರಲಿ, ಅದಕ್ಕಿಂತ ಮೂರು ವರ್ಷ ಮುಂದೆ ಅಥವಾ ಹಿಂದಿನ ದಿನಾಂಕವನ್ನು ನೀವು ನಮೂದಿಸಿರಬಹುದು. ದಿನಾಂಕವು ಆಧಾರ್ ದಾಖಲಾತಿಯನ್ನು ಆಧರಿಸಿರುತ್ತದೆ. ಆದ್ದರಿಂದ ಹುಟ್ಟಿದ ದಿನಾಂಕವನ್ನು ಭರ್ತಿ ಮಾಡುವಾಗ ಜಾಗರೂಕರಾಗಿರಬೇಕಾಗುತ್ತದೆ.

ಆಧಾರ್ ಕಾರ್ಡ್‌ನಲ್ಲಿ ನಿಮ್ಮ ಹೆಸರು ತಪ್ಪಾಗಿದ್ದರೆ, ಬದಲಾಯಿಸಲು ಬಯಸಿದರೆ, ನೀವು ಅದನ್ನು ಎರಡು ಬಾರಿ ಮಾತ್ರ ಬದಲಾವಣೆ ಮಾಡಬಹುದು. ಬಳಿಕ ನಿಮ್ಮ ಹೆಸರನ್ನು ಬದಲಾಯಿಸಲು ಸಾಧ್ಯವಿಲ್ಲ. ಹೆಚ್ಚಿನ ಮಾಹಿತಿಗಾಗಿ ಯುಐಡಿಎಐ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಬಹುದಾಗಿದೆ.

# ವಿದ್ಯಾರ್ಥಿಗಳ ಕ್ರಿಯಾಶೀಲತೆ ಮತ್ತು ಉದ್ಯಮ ಸಹಭಾಗಿತ್ವದ ಇಗ್ನೈಟ್ ಮೆರಕಿ ಮುಕ್ತಾಯ

• ಉದಯವಾಹಿನಿ, ಬೆಂಗಳೂರು

NIFT, NID, UCEED ಸೇರಿದಂತೆ ಹಲವು ಕಾರ್ಯಕ್ರಮಗಳಿಗೆ ಅತ್ಯುತ್ತಮ ತರಬೇತಿ ಕೇಂದ್ರವಾಗಿರುವ ಇಗ್ನೈಟ್ ಇಂಡಿಯಾ ಎಜುಕೇಶನ್, ವಿಟ್ನೆಸಿಂಗ್ ಟ್ರೂ ಫ್ಯಾಶನ್ (W.T.F) ಸಹಯೋಗದೊಂದಿಗೆ ಆಯೋಜಿಸಿದ್ದ ಇಗ್ನೈಟ್ ಮೆರಕಿ ಕಾಲೇಜು ಉತ್ಸವ ಬೆಂಗಳೂರಿನ ಹೋಟೆಲ್ ರಾಯಲ್ ಆರ್ಕಿಡ್‌ನಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿದೆ. ಫ್ಯಾಶನ್ ಸ್ಟೈಲಿಂಗ್, ಆರ್ಕಿಟೆಕ್ಚರ್, ಕಾನೂನು, ನಿರ್ವಹಣೆ, ಕಲೆ ಮತ್ತು ಕರಕುಶಲ ಕಲಿಕೆಗೆ ಡಬ್ಲ್ಯುಟಿಎಫ್ ಜನಪ್ರಿಯವಾಗಿದೆ.



ಉದಯವಾಹಿನಿ ಚಿತ್ರ



**ಆರ್ಮಿ ಪಬ್ಲಿಕ್ ಸ್ಕೂಲ್‌ಗೆ ಫ್ಯಾಷನ್ ಶೋನಲ್ಲಿ ಮೊದಲ ಬಹುಮಾನ**

ಉಭಯ ಸಂಸ್ಥೆಗಳು ಸಹಭಾಗಿತ್ವದೊಂದಿಗೆ ಅಂತರ್ ಕಾಲೇಜು ಮಟ್ಟದ ಹಲವು ಸ್ಪರ್ಧೆಗಳನ್ನು ಆಯೋಜಿಸಿದ್ದವು.ಫ್ಯಾಷನ್ ಶೋ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿದ ಆರ್ಮಿ ಪಬ್ಲಿಕ್ ಸ್ಕೂಲ್ ರೂ.25,000 ನಗದು, ರೂ.25,000 ಇಗ್ನೈಟ್ ಇಂಡಿಯಾ ವೋಚರ್ ಮತ್ತು ರೂ.10,000 ರೈನುಶ್ ವೋಚರ್ ಪಡೆಯಿತು. ಟಿಸಿಐಸ್ ದ್ವಿತೀಯ ಹಾಗೂ ಏಕ್ಯ ಸ್ಕೂಲ್ ತೃತೀಯ ಬಹುಮಾನ ಪಡೆದವು.

ಈ ವರ್ಷ, ಇಗ್ನೈಟ್ ಮೆರಾಕಿ ರೂ.7 ಲಕ್ಷಕ್ಕೂ ಹೆಚ್ಚು ನಗದು ಬಹುಮಾನಗಳು, ವೋಚರ್‌ಗಳು, ವಸ್ತುಗಳು ಮತ್ತು ಕಾರ್ಯಾಗಾರ ಪ್ರವೇಶ ಅವಕಾಶಗಳನ್ನು ಒದಗಿಸಿತು.

MITID ಪುಣೆ, ಇನ್ಸ್ಟಿಟ್ಯುಟೊ ಮರಂಗೋನಿ ಮುಂಬೈ, ವಿಸ್ಲಿಂಗ್ ವುಡ್ಸ್ ಇಂಟರ್ನ್ಯಾಷನಲ್ ಪುಣೆ, ಪಾರುಲ್ ಯೂನಿವರ್ಸಿಟಿ ಮತ್ತು ಸಂಜಯ್ ಘೋಡಾವತ್ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡುವ ಮೂಲಕ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಜ್ಞಾನ ಮತ್ತು ನೈಜ-ಪ್ರಪಂಚದ ಅರಿವನ್ನು ಒದಗಿಸಿತು.

> ಈ ಕುರಿತು ಪ್ರತಿಕ್ರಿಯಿಸಿದ ಇಗ್ನೈಟ್ ಇಂಡಿಯಾ ಎಜ್ಯುಕೇಷನ್ ಸಿಒಒ ಕೃಷ್ಣಾನಂದ ಸಿಂಗ್, ಮೆರಕಿಯೊಂದಿಗೆ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಒದಗಿಸಲು ಸಂತಸವಾಗುತ್ತಿದೆ. ಬಹುಮಾನ ಪಡೆದ ಹಾಗೂ ಇದರಲ್ಲಿ ಭಾಗಿಯಾದ ಎಲ್ಲ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದನೆಗಳು'' ಎಂದರು.

ಏಕ್ಯಾ ಸ್ಕೂಲ್, ಹಾರ್ವೆಸ್ಟ್ ಇಂಟರ್‌ನ್ಯಾಶನಲ್, ಆರ್ಮಿ ಪಬ್ಲಿಕ್ ಸ್ಕೂಲ್, TCISಓಕ್ರಿಡ್ಜ್ ಇಂಟರ್ನ್ಯಾಶನಲ್ ಸ್ಕೂಲ್, ಕಾರ್ಮೆಲ್ ಕಾನ್ವೆಂಟ್ ಸ್ಕೂಲ್, ಮತ್ತು ವೈದೇಹಿ ಸ್ಕೂಲ್ ಆಫ್ ಎಕ್ಸಲೆನ್ಸ್ನ 1000ಕ್ಕೂ ಅಧಿಕ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾದರು.

## ಸಾಮಾಜಿಕ ಕಳಕಳಿ



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

ಹಾಸನದ ದೇವಿಯೂ ಹಾಸನಾಂಬೆಯು ತಾಯಿ
ಮಾಸ ನವಂಬರ್ ನಲಿ ದರುಶನವದು
ಸೀಸವನು ಮುಗಿಯುತರಿ ಜನರೆಲ್ಲ ಬರುತಿರಲು
ಸೋಸದಲೆ ಹರಿಸುವೆಯ ಲಕ್ಷ್ಮಿ ದೇವಿ.......


ಹಾಸನಾಂಬ ದೇವಿಯ ದರ್ಶನವು ವರ್ಷಕ್ಕೊಮ್ಮೆ ಒಂದು ವಾರದ ಕಾಲ ದರ್ಶನವಾಗುತ್ತದೆ. ಹಾಸನದ ಜನತೆಗೆ ಹಾಸನಂಬ ದೇವಿಯ ದರ್ಶನ ಈ ಬಾರಿ ನವೆಂಬರ್ ತಿಂಗಳಿನಲ್ಲಿ ಸಿಕ್ಕಿದೆ. ಎಲ್ಲರೂ ಶಿರವನ್ನು ಬಾಗಿ ನಮಿಸುತ್ತ ದೇವಿಯ ದರ್ಶನಕ್ಕೆ ಕಾತುರದಿಂದ ಕಾಯುತ್ತಿರುತ್ತಾರೆ. ತಾಯಿಯ ಗರ್ಭ ಗುಡಿಯ ಒಳಗಿನ ಉಜ್ವಲಿಸುವ ದೀಪದ ಬೆಳಕನ್ನು ನೋಡಲು ಭಕ್ತಾದಿಗಳು ಹಪಹಪಿಸುತ್ತಾರೆ. ಯಾರನ್ನು ಮೇಲು -ಕೀಳು ಎಂದು ನೋಡದೆ ಎಲ್ಲರನ್ನೂ ಹರಿಸು ತಾಯಿ ಎಂದು ಭಕ್ತಿಯಲ್ಲಿ ಬೇಡುತ್ತಾರೆ. ಹಾಸನಾಂಬ ದೇವಿಯ ದರ್ಶನವು ವರ್ಷಕ್ಕೆ ಒಮ್ಮೆ ಆಗುವುದು ಪ್ರತಿಯೊಬ್ಬರಿಗೆ ತಿಳಿದಂತಹ ವಿಷಯವಾಗಿದೆ. ನಮ್ಮ ಆಚಾರ ವಿಚಾರಗಳಲ್ಲಿ ನೋಡಿದರೆ ಹಾಸನಾಂಬ ದೇವಿಯು ಮಡಿವಂತಿಕೆ,ನೈರ್ಮಲ್ಯ, ನಿಯಮ ,ನಿಷ್ಠಗಳಿಗೆ ಒಲಿಯುವಳು ಎಂದು ತಿಳಿದುಬಂದಿದೆ. ಈ ಬಾರಿ ನವೆಂಬರ್ ಒಂದರಂದು ಹಾಸನಂಬ ದೇವಿಯ ದೇವಾಲಯದ ಬಾಗಿಲು ತೆರೆದಿದ್ದು ಭಕ್ತಾದಿಗಳ ದರ್ಶನಕ್ಕಾಗಿ ಸಿದ್ಧವಾಗಿದೆ. ಈ ದೇವಾಲಯದ ಪ್ರಮುಖರಾದ ತಹಶೀಲ್ದಾರರು,ಕಮಿಷನರ್, ಶಾಸಕರು ಮುಂತಾದವರ ಸಮ್ಮುಖದಲ್ಲಿ ಈ ದೇವಾಲಯವನ್ನು, ತೆಗೆಯಲಾಗುತ್ತದೆ. ಬಹಳ ಇಂದಿನಿಂದ ಬಂದಂತಹ ಇತಿಹಾಸವೇನೆಂದರೆ ಬಲಿಪಾಡ್ಯಮಿಯ ಮೂರನೇ ದಿನ ಅವರೆಲ್ಲರ ಸಮ್ಮುಖದಲ್ಲಿ ದೇವಿಗೆ ದೀಪ, ಅಕ್ಕಿ, ನೈವೇದ್ಯ ಇಟ್ಟು ಅಲಂಕಾರವನ್ನು ಮಾಡಿ ಭಕ್ತಿಯಿಂದ ದೇವಾಲಯವನ್ನು ಮುಚ್ಚಲಾಗುತ್ತದೆ. ಎಂಬುದು ತಿಳಿದು ಬಂದಂತಹ ವಿಷಯ. ಈ ದೇವಾಲಯದ ದರ್ಶನ ಮಾಡಲು ಹಲವಾರು ರಾಜ್ಯಗಳಿಂದ ಇತ್ತೀಚಿನ ವರದಿಗಳ ಪ್ರಕಾರ ವಿದೇಶಗಳಿಂದಲೂ ಸಹ ದರ್ಶನಕ್ಕಾಗಿ ಬರುತ್ತಿದ್ದಾರೆ ಎಂಬುದು ತಿಳಿದು ಬರುತ್ತಿದೆ. ಹಾಸನಾಂಬ ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಆಶಿಸುತ್ತೇನೆ.

**ವರ್ಷಕ್ಕೊಮ್ಮೆ ಒಂದು ವಾರದ ಕಾಲ ದರ್ಶನ**

**ದಿನಕ್ಕೊಂದು ಮುಕ್ತಕ -9**


ಉದಯವಾಹಿನಿ ಚಿತ್ರ

# ಕಳಶ ಫೈನ್ ಜ್ಯುವೆಲ್ಸ್‌ನ ಹೊಸ ಮಳಿಗೆ ಬೆಂಗಳೂರಿನಲ್ಲಿ ಆರಂಭ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕಳಶ ಫೈನ್ ಜ್ಯುವೆಲ್ಸ್‌ನ ದಕ್ಷಿಣ ಭಾರತದ ಮಳಿಗೆಯು ಬೆಂಗಳೂರಿನಲ್ಲಿ ಅದ್ದೂರಿಯಾಗಿ ಉದ್ಘಾಟನೆಗೊಂಡಿತು. ನಟಿ ಶ್ರೀಯಾ ಸರನ್ ಅವರು ಮಳಿಗೆಯನ್ನು ಉದ್ಘಾಟಿಸಿದರು. ಕಳಶವು ತನ್ನ ಮಳಿಗೆಯಲ್ಲಿ ಚಿನ್ನ, ವಜ್ರ ಆಭರಣಗಳ ಸುಂದರ ಕಲೆಕ್ಷನ್ ಹೊಂದಿದ್ದು, ಮಳಿಗೆಯು ಕಲಾತ್ಮಕತೆ ಮತ್ತು ಐಷಾರಾಮಿತನವನ್ನು ಹೊಂದಿದೆ.

ಕಳಶ ಫೈನ್ ಜ್ಯುವೆಲ್ಸ್‌ನ ಮಾಲೀಕರಾದ ಶ್ರವಣ್ ಕುಮಾರ್ ಗುಡೂರ್ ನಿರ್ದೇಶಕರಾದ ಅಭಿಷೇಕ್ ಚಂದಾ ಭವ್ಯ ಮಳಿಗೆಯ ಉದ್ಘಾಟನೆಯನ್ನು ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರವಣ್ ಕುಮಾರ್ ಗುಡೂರ್ ಮತ್ತು ಅಭಿಷೇಕ್ ಚಂದಾ ಕಳಶ ಫೈನ್ ಜ್ಯುವೆಲ್ಸ್ ಹೊಸ ಮಳಿಗೆಯನ್ನು ಅನಾವರಣಗೊಳಿಸಲು ನಾವು ಸಂತೋಷಪಡುತ್ತೇವೆ. ಶ್ರೀಯಾ ಸರನ್ ಈ ಮಳಿಗೆ ಉದ್ಘಾಟಿಸಿದ್ದಾರೆ. ನಮ್ಮ ಸಂಗ್ರಹಣೆಯಲ್ಲಿನ ಪ್ರತಿಯೊಂದು ಆಭರಣವು ಹಿಂದಿನ ಕಾಲದ ಸೊಬಗು ಮತ್ತು ಭವ್ಯತೆಯಿಂದ ಸ್ಫೂರ್ತಿ ಪಡೆದಿದೆ. ಈ ಆಭರಣಗಳನ್ನು ಧರಿಸಿರುವವರಿಗೆ ಇದು ರಾಜಮನೆತನದ ಅನುಭವ ನೀಡುತ್ತದೆ' ಎಂದರು.

**ಬೆಂಗಳೂರಿನಲ್ಲಿ ಅದ್ದೂರಿಯಾಗಿ ಉದ್ಘಾಟನೆ**

ಈ ಹೊಸ ಮಳಿಗೆಯನ್ನು ಪ್ರಾರಂಭಿಸುವುದರೊಂದಿಗೆ ಕಳಶ ಫೈನ್ ಜ್ಯುವೆಲ್ಸ್ ಐಷಾರಾಮಿ, ಸಂಪ್ರದಾಯ ಮತ್ತು ಸಾಟಿಯಿಲ್ಲದ ಕರಕುಶಲತೆಯ ಆಭರಣವನ್ನು ಜನರಿಗೆ ನೀಡಲಿದೆ. ಕಲಶಾ ತನ್ನ ಸುಂದರ ಆಭರಣಗಳು ಮತ್ತು ಅದರ ಕಲಾತ್ಮಕತೆಯ ಪರಂಪರೆಯನ್ನು ಅನುಭವಿಸಲು ಜನರಿಗೆ ಅವಕಾಶ ನೀಡುತ್ತದೆ.

# ಬೆಲೆ ಏರಿಕೆಯ ನಿಯಂತ್ರಿಸಲು ಅ.30ರಂದು ಭಾರತ್ ಉತ್ಪನ್ನಗಳ ಬಿಡುಗಡೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಲೆ ಏರಿಕೆಯ ಸಮಸ್ಯೆ ನಿಯಂತ್ರಿಸಲು ಕೇಂದ್ರ ಗ್ರಾಹಕ ವ್ಯವಹಾರಗಳ ಹಾಗೂ ನಾಗರಿಕ ಪೂರೈಕೆ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ ಬೆಂಗಳೂರಿನಲ್ಲಿ ಜನರಿಗೆ ಕೈಗೆಟುಕುವ ದರದಲ್ಲಿ ಅಗತ್ಯ ಧಾನ್ಯಗಳ ವಿತರಣೆ ಆರಂಭಿಸಿದೆ. ಬುಧವಾರ (ಅ.30)ದಿಂದ ಉತ್ಪನ್ನಗಳು ಲಭ್ಯವಾಗಲಿವೆ.

ಈ ಮೂಲಕ ಈ ಬಾರಿಯ ದೀಪಾವಳಿ ಹಬ್ಬ ಗ್ರಾಹಕರ ಪಾಲಿಗೆ ಇನ್ನಷ್ಟು ಸಿಹಿಯಾಗಿರಲಿದೆ. ಯೋಜನೆ ಅಡಿಯಲ್ಲಿ ಅಕ್ಕಿ 34 ರೂ., ಗೋದಿ ಹಿಟ್ಟು 30 ರೂ., ಕಡಲೆ ಬೇಳೆ 70 ರೂ., ಹೆಸರು ಬೇಳೆ 107 ರೂಪಾಯಿಗೆ ಮಾರಾಟ ವಿತರಿಸಲಾಗುತ್ತಿದೆ. ಈ ಮೂಲಕ ಬೆಂಗಳೂರಿಗರಿಗೆ ಅಗ್ಗದ ದರದಲ್ಲಿ ಉತ್ತಮ ದರ್ಜೆಯ ಆಹಾರ ಪದಾರ್ಥಗಳನ್ನು ಲಭ್ಯವಾಗುವಂತೆ ಮಾಡಲಾಗುತ್ತಿದೆ. ಈ ಎಲ್ಲಾ ಉತ್ಪನ್ನಗಳು ಭಾರತ್ ಬ್ರ್ಯಾಂಡ್ ಅಡಿಯಲ್ಲಿ ಲಭ್ಯವಿವೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗ್ರಾಹಕ ವ್ಯವಹಾರ ಹಾಗೂ ನಾಗರಿಕ ಪೂರೈಕೆ ಸಾರ್ವಜನಿಕ ವಿತರಣಾ ಸಚಿವ ಪ್ರಹ್ಲಾದ್ ಜೋಶಿ, ಸಚಿವಾಲಯದ ರಾಜ್ಯ ಸಚಿವೆ ನಿಮುಬೆನ್ ಜಯಂತಿ ಬಾಯಿ ಬಾಂಬಾನೀಯ ಹಾಗೂ ಕೇಂದ್ರ ರಾಜ್ಯ ಸಚಿವ ಬಿ.ಎಲ್.ವರ್ಮ ಅವರ ಆದೇಶದಂತೆ ಬೆಂಗಳೂರಿನಲ್ಲಿ ವಿತರಣೆ ಆರಂಭವಾಗಿದೆ.

# ಕನ್ನಡಪರ ಸಂಘಟನೆ ಬೆಳೆಯಲು ಪ್ರೋತ್ಸಾಹ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಮದುವೆ, ಗೃಹಪ್ರವೇಶಗಳ ಕರೆಯೋ ಲೆಗಳು, ಸಭೆ ಸಮಾರಂಭಗಳ ಆಹ್ವಾನ ಪತ್ರಗಳು ಸಂಪೂರ್ಣವಾಗಿ ಕನ್ನಡದಲ್ಲಿರಲಿ. ಮನೆ ಯ ಹೆಸರುಹಲಗೆ ಕನ್ನಡದಲ್ಲಿರಲಿ. ಈಗಾಗಲೇ ಇಂಗ್ಲಿಷ್ ನಲ್ಲಿದ್ದರೆ ಕನ್ನಡಕ್ಕೆ ಬದಲಾಯಿಸಿ, ನಿಮ್ಮ ಬಡಾವಣೆ, ಕಚೇರಿ, ಕಾರ್ಖಾನೆಗಳಲ್ಲಿನ ಕನ್ನಡ ಪರ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ.

ಕನ್ನಡಪರ ಸಂಘಟನೆ ಬೆಳೆಯಲು ಪ್ರೋತ್ಸಾಹಿಸಿ, ಒಗ್ಗಟ್ಟನ್ನು ಮೂಡಿಸಲು ಸದಾ ಯತ್ನಿಸಿ. ಉದ್ಯೋಗ, ಹುದ್ದೆಗಳು ಕನ್ನಡಿಗರಿಗೇ ದೊರಕಲು ಸಹಾಯಮಾಡಿ. ಹುದ್ದೆಗಳ ಅವಕಾಶಗಳಿದ್ದರೆ ಅವರಿಗೆ ತಿಳಿಸಿ. ನಿಮ್ಮ ಕುಟುಂಬದವರೊಡನೆ ಕರ್ನಾಟಕದ

ಐತಿಹಾಸಿಕ ಜಾಗಗಳಿಗೆ, ಸುಂದರ ಪ್ರದೇಶಗಳಿಗೆ ಪ್ರವಾಸ ಹೋಗಿ,ಯಾವುದೇ ಕನ್ನಡಪರ ಚಳವಳಿಯಾಗಲಿ ಭಾಗವಹಿಸಿ, ನನ್ನೊಬ್ಬನಿಂದ ಏನಾಗುತ್ತ ದೆಯೆಂಬ ಆಲಸ್ಯವನ್ನು ಕೈಬಿಡಿ ಕನ್ನಡಿಗರಿಗೇ ಮತ ಹಾಕಿ; ಅದರಲ್ಲೂ ಕನ್ನಡಪರ ವ್ಯಕ್ತಿ ಗಳಿಗೇ ಮತ ಹಾಕಿ.

ಇಂಗ್ಲಿಷ್ ಬೆರೆಸಿ ಮಾತನಾಡುವುದಕ್ಕಿಂತ ಶುದ್ಧ ಕನ್ನಡದಲ್ಲಿ ಮಾತನಾಡುವುದು ಗೌರವದ ವಿಚಾರ ಎಂದು ಭಾವಿಸಿ, ಇತರರಿಗೂ ತಿಳಿಸಿರಿ. ಕನ್ನಡದಲ್ಲೇ ಮಾತನಾಡುತ್ತೇನೆ ಎಂದು ನಿರ್ಧರಿಸಿ. ನಿಮ್ಮ ರಬ್ಬರ್ ಸ್ಟಾಂಪ್, ಪರಿಚಯ ಚೀಟಿ (ವಿಸಿಟಿಂಗ್‌ಕಾರ್ಡ್), ಲೆಟರ್‌ಹೆಡ್‌ಗಳು ಕನ್ನಡ ದಲ್ಲೇ ಇರಲಿ. ಅನಿವಾರ್ಯ ಎನಿಸಿದರೆ ಕನ್ನಡದ ಕೆಳಗೆ ಇಂಗ್ಲಿಷ್‌ನಲ್ಲಿ ಮುದ್ರಿಸಿ.

ರೈಲ್ವೆ, ಅಂಚೆ, ಆದಾಯತೆರಿಗೆ ಮುಂತಾದ ಕೇಂದ್ರ ಸರ್ಕಾರದ ಕಚೇರಿಗಳಿಗೆ ಹೋದಾಗ ಕನ್ನಡ ನಮೂನೆ ಯನ್ನೇ ಬಳಸಿ, ಕನ್ನಡ ನಮೂನೆಗಳಿಲ್ಲದಿದ್ದರೆ ಕೇಂದ್ರ ಸರ್ಕಾರ ಒಪ್ಪಿರುವ ತ್ರಿಭಾಷಾ ಸೂತ್ರಕ್ಕೆ ವಿರೋಧವಾಗುತ್ತದೆ. ಎಂದು ಸಂಬಂಧ ಪಟ್ಟವರಿಗೆ ತಿಳಿಸಿ, ಅಲ್ಲಿರುವ ಸಲಹೆ/ ದೂರು ಪೆಟ್ಟಿಗೆಯಲ್ಲಿ ಕನ್ನಡ ಬಳಸದಿರುವುದಕ್ಕೆ ನಿಮ್ಮ ಅಸಮಾಧಾನ ದಾಖಲಿಸಿ ಸಮಯ ಸಿಕ್ಕಾಗಲೆಲ್ಲ ಮಿತ್ರರಿಗೆ, ಪರಿಚಿತರಿಗೆ ಕನ್ನಡದಲ್ಲೇ ವ್ಯವಹರಿಸೋಣ ಎಂಬ ಮಾತನ್ನು ಹೇಳುವ ಪತ್ರ ಬರೆಯಿರಿ.

**ಕಾರ್ಖಾನೆಗಳಲ್ಲಿನ ಕನ್ನಡ ಪರ ಸಂಘಟನೆಗಳ ಕಾರ್ಯಕ್ರಮ**

ಕನ್ನಡ ಸಮಸ್ಯೆ – ಪರಿಹಾರ ಕುರಿತು ಚಿಂತಿಸಲು ಮನವಿ ಮಾಡಿ, ನಿಮ್ಮ ಶಾಸಕರು, ಸಂಸತ್ ಸದಸ್ಯರಿಗೆ ನಾಡು-ನುಡಿಯ ಸಮಸ್ಯೆಗಳ ವಿಚಾರ ಪತ್ರ ಬರೆಯಿರಿ. ಕನ್ನಡಕ್ಕೆ ಅಪಾಯವಿದೆ, ಅವಮಾನ ಆಗುತ್ತಿದೆ ಅನ್ನಿಸಿದರೆ ಪತ್ರಿಕೆಗಳಿಗೆ ಬರೆಯಿರಿ, ಕನ್ನಡ ಸಂಘಟನೆಗಳಿಗೆ ತಿಳಿಸಿ. ಸಂಬಂಧಪಟ್ಟ ಇಲಾಖೆಯವರಿಗೆ ಬರೆಯಿರಿ, ಇಂತಹ ಪ್ರಯತ್ನಗಳು ತಕ್ಷಣ ಫಲ ನೀಡದಿರಬಹುದು. ನಿರಾಶರಾಗಬೇಡಿ, ದೂರದರ್ಶನ (ಉಪಗ್ರಹ ವಾಹಿನಿಗಳು), ಆಕಾಶವಾಣಿಗಳಲ್ಲಿ ಕಳಪೆ ಕಾರ್ಯಕ್ರಮಗಳು ಬರುತ್ತಿದ್ದರೆ ಪತ್ರ ಬರೆದು ಅಸಮಾಧಾನ ಸೂಚಿಸಿ, ಬೇರೆಯವರೂ ಪತ್ರ ಬರೆಯುವಂತೆ ಮಾಡಿ, ನಿಶ್ಚಿತವಾಗಿ ಕಾರ್ಯಕ್ರಮಗಳ ಗುಣಮಟ್ಟ ಸುಧಾರಿಸುತ್ತದೆ.

- ನೆನಪಿಡಿ; ನಿಮ್ಮ ಆದಾಯದ ಒಂದು ಭಾಗ ಕನ್ನಡಕ್ಕಾಗಿ ವಿನಿಯೋಗವಾಗಲಿ. ಕನ್ನಡ ಸಂಘಟನೆಗಳ ಸದಸ್ಯತ್ವ ಪಡೆಯುವಲ್ಲಿ, ವಂತಿಗೆ ಕೊಡುವಲ್ಲಿ ಉದಾರವಾಗಿರಿ ನೀವು ಕೊಡುವ ಹಣ ಕನ್ನಡದ ಕೆಲಸಕ್ಕೆ ಸಂದಾಯ ವಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಚೆನ್ನಾಗಿ ನೆನಪಿಡಿ; ನಿಮ್ಮ ಜಾತಿ ಕನ್ನಡ, ನಿಮ್ಮ ಕುಲ ಕನ್ನಡ, ನಿಮ್ಮ ಸಮಸ್ತವೂ ಕನ್ನಡ,
- ಕನ್ನಡದ ಮಧ್ಯೆ ಅನಗತ್ಯ ಇಂಗ್ಲಿಷ್ ಬಳಕೆ ಬೇಡ. ''ಮೊನ್ನೆ, ಅಂದ್ರೆ ಡೇ ಬಿಫೋರ್ ಎಸ್ಟರ್ಡೇ, ನನ್ನ ಫ್ರೆಂಡ್ಸ್ ಜೊತೆ ಡೈರೆಕ್ಟರನ್ನು ಮೀಟ್ ಮಾಡಿದೆ'' ಎಂಬಂತಹ ವಾಕ್ಯಗಳು ಬೇಡ. ''ಮೊನ್ನೆ ನನ್ನ ಗೆಳೆಯರ ಜೊತೆ ನಿರ್ದೇಶಕರನ್ನು ಭೇಟಿ ಮಾಡಿದೆ'' ಇದು ಸರಿ, ''ರೈಲಿಗೆ ಹೋಗಲು ಮುಂಗಡ ಟಿಕೆಟ್ ಕೊಂಡು ಕೊಂಡೆ'' ಇಂತಹ ಕಡೆ ಇಂಗ್ಲಿಷ್ ಪದ ಅನಿವಾರ್ಯ ಬಳಸಿರಿ. ರೇಡಿಯೋ, ಕ್ರಾಸ್, ಚೆಕ್ಕು, ಹೊಟೇಲ್ ಇವು ಇಂದು ಕನ್ನಡದ ಪದಗಳೇ ಆಗಿವೆ.

-- ಮುಂದುವರೆಯುತ್ತದೆ

# ಹೆಣ್ಣು ಮಕ್ಕಳ ಘನತೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ

## ಹೆಣ್ಣು ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಹಲವು ಯೋಜನೆ, ಕಾನೂನುಗಳನ್ನು ಜಾರಿಗೆ ತಂದಿದೆ: ಎಂ.ವಿಜಯ್

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ಹೆಣ್ಣು ಮಕ್ಕಳ ಘನತೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಹೆಣ್ಣು ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಹಲವು ಯೋಜನೆ ಹಾಗೂ ಕಾನೂನುಗಳನ್ನು ಜಾರಿಗೆ ತಂದಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ವಿಜಯ್ ಹೇಳಿದರು.

ಅಂತಾರಾಷ್ಟ್ರೀಯ ಹೆಣ್ಣು ಮಗುವಿನ ದಿನಾಚರಣೆ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಡಾನ್ ಬಾಸ್ಕೋ ಶಾಲೆ ಸಹಯೋಗದಲ್ಲಿ, ಸೋಮವಾರ ನಗರದ ಡಾನ್‌ಬಾಸ್ಕೋ ಶಾಲೆಯಲ್ಲಿ ಆಯೋಜಿಸಲಾಗಿದ್ದ, ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅಕ್ಟೋಬರ್ 11 ರಂದು ಪ್ರತಿ ವರ್ಷ ಅಂತರಾಷ್ಟ್ರೀಯ ಹೆಣ್ಣು ಮಗುವಿನ ದಿನಾಚರಣೆ ಆಚರಿಸಲಾಗುತ್ತಿದೆ.

ಗರ್ಲ್ಸ್ ವಿಜನ್ ಫಾರ್ ದಿ ಫ್ಯೂಚರ್‌ಎಂಬುದು ಈ ವರ್ಷದ ಧ್ಯೇಯ ವಾಕ್ಯ ವಾಗಿದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಹಾಗೂ ಆರೋಗ್ಯ ಬಗ್ಗೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ವಿಶ್ವ ಸಂಸ್ಥೆ ಈ ಧ್ಯೇಯವಾಕ್ಯವನ್ನು ಘೋಷಿಸಿದೆ. ಇದರೊಂದಿಗೆ ಹೆಣ್ಣು ಮಕ್ಕಳ ಹಕ್ಕುಗಳ ಕುರಿತಾಗಿ ಕಾನೂನು ಜಾಗೃತಿಯನ್ನು ಸಹ ಮೂಡಿ ಸುವ ಉದ್ದೇಶ ಹೊಂದಿದೆ. ಇದರ ಅಂಗ ವಾಗಿಯೇ ಸೋಮವಾರ ಕಾನೂನು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಸರ್ಕಾರದ ಹಲವು ಅಂಗಸ್ಥೆಗಳು ಹೆಣ್ಣು ಮಕ್ಕಳ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ನ್ಯಾ. ಎಂ.ವಿಜಯ್ ತಿಳಿಸಿದರು. ಜಿಲ್ಲೆಯಲ್ಲಿ ಬಾಲ್ಯ ವಿವಾಹ ಹಾಗೂ ಪೋಕ್ಸೋ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದು, ಹೆಣ್ಣು ಮಕ್ಕಳೇ ಇದರಲ್ಲಿ ಬಲಿಪಶುಗಳಾಗಿದ್ದಾರೆ. ಮುಖ್ಯವಾಗಿ ಹೆಣ್ಣು ಮಕ್ಕಳು ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ಕಾಯ್ದೆಗಳ ಕುರಿತು ತಿಳಿದುಕೊಳ್ಳಬೇಕು. ತರಗತಿ, ಶಾಲೆ, ಮನೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ವಿಷಮ ಪರಿಸ್ಥಿತಿಗಳು ಎದುರಾದರೆ ನಿಮ್ಮ ಘನತೆ ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕುಗಳು ನಿಮಗಿವೆ ಎಂದು ನ್ಯಾ.ಎಂ.ವಿಜಯ್ ಹೇಳಿದರು.

**ಉಪ ಪ್ರಧಾನ ಕಾನೂನು ಅಭಿರಕ್ಷಕ ಎಂ.ಮೂರ್ತಿ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿ.ಸವಿತಾ ಬಾಲ್ಯವಿವಾಹ ನಿಷೇಧ ಕುರಿತು ಪ್ರತಿಜ್ಞಾವಿಧಿ ಬೋಧಿಸಿದರು.**


> **ಹೆಣ್ಣು ಮಕ್ಕಳು ಶಿಕ್ಷಣದ ಜೊತೆಗೆ ಕಾನೂನಿನ ಅರಿವನ್ನು ತಿಳಿದಿರಬೇಕು. ನಿಮ್ಮ ಭವಿಷ್ಯ ಸುಂದರವಾಗಿರಬೇಕಾದರೆ ಬಾಲ್ಯವಸ್ಥೆಯಲ್ಲಿ ಯಾವುದೇ ರೀತಿಯ ಕಿರುಕುಳ- ದೌರ್ಜನ್ಯಕ್ಕೆ ಒಳಗಾಗಬಾರದು. ಉನ್ನತ ಶಿಕ್ಷಣ ಪಡೆದು ಯಾವುದು ಸರಿ, ಯಾವುದು ತಪ್ಪು ಎಂಬುದನ್ನರಿತು ತಮ್ಮ ಭವಿಷ್ಯವನ್ನು ರೂಪಿಕೊಳ್ಳುವ ಸೈನಿಕರಾಗಬೇಕು. ಹೆಣ್ಣಿನ ಜೀವನ ಹಸನಾಗಿಸಲು ಪ್ರತಿಯೊಬ್ಬರು ಧ್ವನಿ ಎತ್ತಬೇಕು**
>
> **- ವೈ.ತಿಪ್ಪೇಸ್ವಾಮಿ**
> **ವಕೀಲರ ಸಂಘದ ಅಧ್ಯಕ್ಷ**

ಡಾನ್ ಬಾಸ್ಕೋ ಪ್ರೌಢ ಶಾಲಾ ಪ್ರಾಂಶುಪಾಲ ಉದಯ ಕುಮಾರ್ ಮಾತನಾಡಿ, ಹೆಣ್ಣು ಮಕ್ಕಳು ಸಮಾಜದಲ್ಲಿ ತಮ್ಮ ಹಕ್ಕುಗಳನ್ನು ಅರಿತು ಸಮಾನತೆಯಿಂದ ಜೀವನ ನಡೆಸಬೇಕು. ಸಮಾಜದಲ್ಲಿನ ದೌರ್ಜನ್ಯ, ಬಡತನ, ತಾರತಮ್ಯತೆಯನ್ನು ಹೋಗಲಾಡಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ಆದರೆ ಇಂದಿನ ಶಿಕ್ಷಣ ಕೇವಲ ಪಾಠ ಪ್ರವಚನಗಳಿಗಷ್ಟೇ ಸೀಮಿತವಾಗಿರುವುದು ದೌರ್ಭಾಗ್ಯ. ಪ್ರಮುಖವಾಗಿ ಹೆಣ್ಣು ಮಕ್ಕಳಿಗೆ ಇಂತಹ ಕಾರ್ಯಗಾರಗಳ ಮೂಲಕ ಅವರ ಹಕ್ಕುಗಳ ಕುರಿತು ಅರಿವು ಮೂಡಿಸಲಾಗುತ್ತಿದೆ.

ಇದು ಪುರುಷ ಪ್ರಧಾನ ಸಮಾಜವಾದ್ದರಿಂದ ಅನೇಕ ದೌರ್ಜನ್ಯಗಳು ಇಂದಿಗೂ ನಡೆಯುತ್ತಲೇ ಇವೆ. ತಮ್ಮ ಜೀವನದಲ್ಲಿ ಬರುವ ಇಂತಹ ದೈಹಿಕ,ಮಾನಸಿಕ ಸಮಸ್ಯೆಗಳನ್ನು ಎದುರಿಸುವ ಶಕ್ತಿ ಸಾಮರ್ಥ್ಯಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ.ಅನಿಲ್ ಕುಮಾರ್, ಡಾನ್‌ಬಾಸ್ಕೋ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು ಸೇರಿದಂತೆ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

# ದೂಳುಮಯ ಹೆದ್ದಾರಿ: ಸಾರ್ವಜನಿಕರಿಗೆ ಕಿರಿಕಿರಿ

• ಉದಯವಾಹಿನಿ, ಮಲೇಬೆನ್ನೂರು


ಉದಯವಾಹಿನಿ ಚಿತ್ರ

ಪ್ರಸಕ್ತ ಮಳೆಗಾಲ ಆರಂಭವಾದ ನಂತರ ರಾಜ್ಯ ಹೆದ್ದಾರಿ-25ರಲ್ಲಿ ಭಾರಿ ಗಾತ್ರದ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಚಾಲಕರಿಗೆ ಚಾಲನಾ ಪರೀಕ್ಷಾ ಸ್ಥಳವಾಗಿ ಮಾರ್ಪಟ್ಟಿದೆ. ಹೊಸಪೇಟೆ- ಮಂಗಳೂರು ರಸ್ತೆ ಮಲೆನಾಡು ಬಯಲು ಸೀಮೆ ಸಂಪರ್ಕಸೇತು.

ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಲಾರಿ, ಬಸ್ಸು, ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ.

ಹೈದರಾಬಾದ್, ಬಳ್ಳಾರಿ, ಬೆಳಗಾವಿ, ಮುಂಬೈ, ಗೋವಾ, ಮೈ ಸೂರು, ಮಂಗಳೂರು ಕಡೆಗೆ ಲಾರಿ ಸೇರಿ ರಾಜ್ಯ ಸಾರಿಗೆ ಸಂಸ್ಥೆಯ 450ಕ್ಕೂ ಹೆಚ್ಚು ಬಸ್‌ಗಳು ಸಂಚರಿಸುತ್ತವೆ. ಮಳೆಗಾಲದಲ್ಲಿ ನಿರ್ಮಾಣವಾದ ಗುಂಡಿಗಳಿಂದಾಗಿ ರಸ್ತೆ ಕೆಸರುಮಯವಾಗಿತ್ತು.

ಲೋಕೋಪಯೋಗಿ ಇಲಾಖೆಯಿಂದ ಗುಂಡಿಗೆ ಜಲ್ಲಿ ಕಲ್ಲುಪುಡಿ ತುಂಬಲಾಗಿತ್ತು. ಕಳೆದ ವಾರ ಸುರಿದ ಮಳೆಗೆ ಜಲ್ಲಿಕಲ್ಲು ಪುಡಿ ಕೊಚ್ಚಿ ಹೋಗಿ ರಸ್ತೆ ತುಂಬೆಲ್ಲ ಹರಡಿದೆ. ವಾಹನಗಳು ಸಾಗಿದಾಗ ಸಿಡಿಯುವುದರಿಂದ ಅಕ್ಕಪಕ್ಕದಲ್ಲಿ ಓಡಾಡುವವರು, ದ್ವಿಚಕ್ರ ವಾಹನ ಸವಾರರು ಪೆಟ್ಟು ತಿಂದು ಗಾಯಗೊಂಡಿದ್ದಾರೆ.

ಮಳೆ ನಿಂತ ಮೇಲೆ ರಸ್ತೆ ಅಕ್ಕಪಕ್ಕದ ಅಂಗಡಿಗಳು, ಆಸ್ಪತ್ರೆ, ಹೋಟೆಲ್, ಮೆಡಿಕಲ್ ಶಾಪ್, ಬ್ಯಾಂಕ್ ಕಚೇರಿಗಳು ದೂಳುಮಯವಾಗಿದೆ. ಒಂದು ವಾಹನ ಹೋದರೆ ದೂಳು ಹರಡುವುದು ಸಾಮಾನ್ಯವಾಗಿದೆ. ದೂಳು ಹರಡುವುದರಿಂದ ದಮ್ಮು ಕೆಮ್ಮಿನ ಪ್ರಕರಣಗಳು ಹೆಚ್ಚಾಗಿವೆ. ಆಸ್ಪತ್ರೆಯಲ್ಲಿ ಕುಳಿತು ಕೆಲಸ ಮಾಡುವುದು ಕಷ್ಟವಾಗಿದೆ.

> **ರಸ್ತೆ ಬದಿಯಲ್ಲಿರುವ ಗ್ಯಾರೇಜ್‌ನ ದ್ವಿಚಕ್ರ ವಾಹನಗಳ ಭಾಗಗಳಲ್ಲಿ ಮಣ್ಣು ಸೇರುವುದರಿಂದ ಕೆಲಸ ಮಾಡುವುದು ಕಷ್ಟವಾಗಿದೆ. ಕಟ್ಟಿಂಗ್ ಶಾಪ್‌ನವರು ಕೆಲಸ ಮಾಡುವುದೇ ದುಸ್ತರವಾಗಿದೆ**
>
> **-ಡಾ.ಎಚ್.ಜೆ.ಚಂದ್ರಕಾಂತ್**

ಮಾಸ್ಕ್ ಬಳಸುವುದು ಅನಿವಾರ್ಯವಾಗಿದೆ ಎಂದು ಡಾ.ಎಚ್.ಜೆ.ಚಂದ್ರಕಾಂತ್ ತಿಳಿಸಿದರು.


ಪ್ರತಿನಿತ್ಯ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆ ವೇಳೆಯಲ್ಲಿ ರಸ್ತೆಗೆ ನೀರನ್ನು ಸಿಂಪಡಿಸಬೇಕು ಎಂದು ರಸ್ತೆ ಬದಿ ಅಂಗಡಿಯವರು ದೂರಿದರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ತುರ್ತಾಗಿ ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ಸ್ಥಳೀಯ ವ್ಯಾಪಾರಿಗಳು ಹಾಗೂ ವಾಹನ ಚಾಲಕರು ಒತ್ತಾಯಿಸಿದರು.

# ವಿದ್ಯುತ್ ಕಳ್ಳತನಕ್ಕೆ ಬೀಳದ ಕಡಿವಾಣ

• ಉದಯವಾಹಿನಿ, ಹುಬ್ಬಳ್ಳಿ

ವಿವಿಧ ಯೋಜನೆಗಳಡಿ ಉಚಿತ ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ನೀಡುತ್ತಿದ್ದರೂ ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್ ಕಳ್ಳತನ ಮುಂದುವರಿದಿದೆ. ವಿದ್ಯುತ್ ಕಳ್ಳತನ ತಡೆಯಲು ಹರಸಾಹಸ ಪಡುತ್ತಿರುವ ಇಲಾಖೆಗೆ ಇದು ಸಮಸ್ಯೆ ತಂದೊಡ್ಡಿದೆ. ಅರಿವಿನ ಕೊರತೆ ಹಾಗೂ ಏನೂ ಆಗಲ್ಲ ಎನ್ನುವ ಅಸಡ್ಡೆಯ ಕಾರಣದಿಂದಾಗಿ ಪ್ರಕರಣಗಳು ಹೆಚ್ಚಾಗಿವೆ ಎನ್ನುತ್ತವೆ ಇಲಾಖೆಯ ಮೂಲಗಳು. ಇಂದಿನ ಜೀವನ ಶೈಲಿಗೆ ವಿದ್ಯುತ್ ಅವಶ್ಯಕ ವಸ್ತುವಾಗಿದೆ. ಸಮರ್ಪಕ ವಿದ್ಯುತ್ ಪೂರೈಸಲು ಸರ್ಕಾರ ಕ್ರಮಕ್ಕೆಗೊಳ್ಳುತ್ತಿದೆ. ಗೃಹ ಬಳಕೆಗಾಗಿ 200 ಯೂನಿಟ್‌ವರೆಗೆ ಉಚಿತ, 10 ಎಚ್‌ಪಿ ಸಾಮರ್ಥ್ಯದ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಹಾಗೂ ಸಣ್ಣ ಕೈಗಾರಿಕೆಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಸುತ್ತಿದೆ. ಇಷ್ಟರ ಹೊರತಾಗಿಯೂ ವಿದ್ಯುತ್ ಕಳ್ಳತನ ಪ್ರಕರಣಗಳು ನಿಯಂತ್ರಣಕ್ಕೆ ಬಾರದಿರುವುದು ಇಲಾಖೆಗೆ ತಲೆನೋವು ತಂದಿದೆ.

### ಪ್ರಕರಣಗಳಡಿ ದಾಖಲು



**ವಿದ್ಯುತ್ ತಂತಿಗೆ ಕೊಕ್ಕೆ ಹಾಕಿ, ನೇರವಾಗಿ ವಿದ್ಯುತ್ ಕಳ್ಳತನ ಮಾಡುವ ಪ್ರಕರಣಗಳನ್ನು ಕೊಗನ್ನೈಜೆಬಲ್ ಪ್ರಕರಣಗಳಡಿ ದಾಖಲು ಮಾಡಲಾಗುತ್ತದೆ. ಗೃಹ ಬಳಕೆಯ ವಿದ್ಯುತ್ ಸಂಪರ್ಕವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸುವುದು, ವಿದ್ಯುತ್ ಮೀಟರ್‌ನಲ್ಲಿ ಏರುಪೇರು ಮಾಡುವುದು ಹಾಗೂ ಇತ್ಯಾದಿ ಪ್ರಕರಣಗಳನ್ನು ನಾನ್- ಕೊಗನ್ನೈಜೆಬಲ್ ಪ್ರಕರಣಗಳಡಿ ದಾಖಲು ಮಾಡಲಾಗುತ್ತದೆ.**

# ಗೋಮಾಳ ಜಾಗಕ್ಕಾಗಿ ಎರಡು ಕುಟುಂಬಗಳ ನಡುವೆ ಗಲಾಟೆ: ಗುಡಿಸಲುಗಳಿಗೆ ಬೆಂಕಿ ಇಟ್ಟ ದುಷ್ಕರ್ಮಿಗಳು

• ಉದಯವಾಹಿನಿ, ಬೆಳಗಾವಿ


ಉದಯವಾಹಿನಿ ಚಿತ್ರ

ಗೋಮಾಳ ಜಾಗಕ್ಕಾಗಿ ಎರಡು ಕುಟುಂಬಗಳ ನಡುವೆ ಆರಂಭವಾದ ಜಗಳ ತಾರಕಕ್ಕೇರಿದ್ದು, ಗುಡಿಸಲುಗಳಿಗೆ ಬೆಂಕಿ ಹಚ್ಚಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮುಗಳಖೋಡ ಗ್ರಾಮದಲ್ಲಿ ನಡೆದಿದೆ.

ಸರ್ಕಾರಿ ಗೋಮಾಳ ಜಾಗಕ್ಕಾಗಿ ಎರಡು ಕುಟುಂಬಗಳ ನಡುವೆ ಹಲವು ದಿನಗಳಿಂದ ಗಲಾಟೆ ನಡೆಯುತ್ತಿತ್ತು.

ತಡರಾತ್ರಿ ದುಷ್ಕರ್ಮಿಗಳು ಗೋಮಾಳ ಜಾಗದಲ್ಲಿದ್ದ ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದಾರೆ. ಬೆಂಕಿ ಕೆನ್ನಾಲಿಗೆಗೆ ಗುಡಿಸಲುಗಳು ಸುಟ್ಟು ಭಸ್ಮವಾಗಿವೆ. ಸರ್ಕಾರಿ ಗೋಮಾಳ ಜಾಗದಲ್ಲಿ ಮಹಾದೇವ್ ಮಾದರ್ ಎಂಬುವವರು ಶೆಡ್ ಹಾಕಿಕೊಂಡಿದ್ದರು.

ಬಳಿಕ 12 ಗುಂಟೆ ಗೋಮಾಳ ಜಾಗದಲ್ಲಿ ಗುಡಿಸಲುಗಳನ್ನು ನಿರ್ಮಿಸಿದ್ದರು. ಇದೇ ವಿಚಾರವಾಗಿ ಮಹಾವೀರ ಕುರಾಡೆ ಕುಟುಂಬದವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ನಿನ್ನೆ ಕೂಡ ಇದೇ ವಿಚಾರವಾಗಿ ಎರಡು ಕುಟುಂಬಗಳ ನಡುವೆ ಜಗಳ ನಡೆದಿದೆ.

### ಪೊಲೀಸರು ಸ್ಥಳಕ್ಕೆ ಭೇಟಿ

**ಈ ವೇಳೆ ಗುಡಿಸಲುಗಳಿಗೆ ಮಹಾವೀರ ಕುಟುಂಬದವರು ಬೆಂಕಿ ಹಚ್ಚಿದ್ದಾರೆ ಎಂದು ಆರೋಪಿಸಲಾಗಿದೆ. ಹಾರೂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.**

# ಚಿತ್ತಾ ಮಳೆ: ಸೊಪ್ಪು, ತರಕಾರಿ ದರ ದುಪ್ಪಟ್ಟು

• ಉದಯವಾಹಿನಿ, ಹರಿಹರ


ಉದಯವಾಹಿನಿ ಚಿತ್ರ

ಅತಿಯಾದ ಮಳೆಯಿಂದಾಗಿ ಸೊಪ್ಪು, ತರಕಾರಿ ದರ ದುಪ್ಪಟ್ಟಾಗಿದ್ದು ಜನಸಾಮಾನ್ಯರು ಖರೀದಿಗೆ ಹಿಂದೇಟು ಹಾಕುವಂತಾಗಿದೆ. ಪ್ರಸಕ್ತ ತಿಂಗಳ ಮೊದಲ, ಎರಡನೇ ವಾರದಲ್ಲಿ ಸುರಿದ ಚಿತ್ತಾ ಮಳೆ ನಾಡಿನ ಜಲಾಶಯ, ನದಿ, ಕೆರೆ, ಕಟ್ಟೆ, ಹಳ್ಳಗಳನ್ನು ತುಂಬಿಸಿದ ಖುಷಿ ನೀಡಿತ್ತು.

ಭಾರಿ ಪ್ರಮಾಣದ ಬೆಳೆ ಹಾನಿಯೂ ಉಂಟಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದ ಸ್ಥಿತಿಗೆ ರೈತರನ್ನು ನೂಕಿತ್ತು. ಮಳೆಯಿಂದಾಗಿ ಸೊಪ್ಪು, ವಿವಿಧ ತರಕಾರಿ ಬೆಳೆಗೂ ಸಾಕಷ್ಟು ಹಾನಿ ಉಂಟಾಗಿದೆ. ಈ ಹಿಂದೆ 5ಕ್ಕೆ ಒಂದು ಸಿವುಡು (ಕಟ್ಟು) ಸಿಗುತ್ತಿದ್ದ ಸೊಪ್ಪಿನ ಬೆಲೆ ಈಗ 10 ರಿಂದ 15ಕ್ಕೆ ಏರಿದೆ. ಹೋಲ್‌ಸೇಲ್ ಬೆಲೆ 100 ಸಿವುಡಿಗೆ 800 ಆಗಿದೆ. ಕೊತ್ತಂಬರಿ, ಮೆಂತೆ, ರಾಜಗಿರಿ, ಎಳೆ ಅರಬಿ, ಪಾಲಕ್, ಸಬ್ಬಸಿಗೆ, ಪುದೀನ, ಬಸಳೆ ಹೀಗೆ ವಿವಿಧ ಬಗೆಯ ಸೊಪ್ಪುಗಳ ಬೆಲೆ ದುಪ್ಪಟ್ಟಾಗಿದೆ. ಸಸ್ಯಹಾರಿಗಳ ಜೊತೆಗೆ ಮಾಂಸಹಾರಿಗಳಿಗೂ ಅಡುಗೆಗೆ ಸೊಪ್ಪು ಬೇಕೇ ಬೇಕು. ಇನ್ನು ಟೊಮೊಟೊ, ಆಲೂಗೆಡ್ಡೆ, ಬದನೆ ಕಾಯಿ, ಬೀನ್ಸ್, ಮುಳುಗಾಯಿ, ಕ್ಯಾರೆಟ್, ಹೂಕೂಸು, ಎಲೆ ಕೋಸು, ಸೋರೆಕಾಯಿ, ದೊಣ್ಣೆ ಮೆಣಸಿನಕಾಯಿ, ಗೆಡ್ಡೆ ಕೋಸು, ನವಿಲು ಕೋಸು, ಬೆಂಡೆ ಕಾಯಿ, ಈರುಳ್ಳಿ ಹೀಗೆ ವಿವಿಧ ತರಕಾರಿ ದರವೂ ಏರಿಕೆಯಾಗಿದೆ.

ಹೋಟೆಲ್‌ಗಳಲ್ಲಿ ಸೊಪ್ಪು, ತರಕಾರಿಯನ್ನು ಹೆಚ್ಚಾಗಿ ಬಳಸುವುದರಿಂದ ಮಾಲೀಕರಿಗೂ ಬೆಲೆ ಏರಿಕೆ ಬಿಸಿ ಮುಟ್ಟಿದೆ. ದುಬಾರಿ ಬಾಡಿಗೆ, ಸಿಬ್ಬಂದಿ ವೇತನದ ಜತೆಗೆ ಸೊಪ್ಪು, ತರಕಾರಿ ದರ ಏರಿಕೆಯನ್ನೂ ಸಹಿಸಿಕೊಂಡು ವ್ಯಾಪಾರ ನಡೆಸಬೇಕಾದ ಸ್ಥಿತಿ ಎದುರಾಗಿದೆ ಎಂದು ಹೋಟೆಲ್ ಮಾಲೀಕ ಶಿವಣ್ಣ ತಿಳಿಸಿದರು.

### ಇನ್ನಷ್ಟು ಏರುವ ಸಾಧ್ಯತೆ

**ಗ್ರಾಹಕರಿಗೂ ಇದರ ಬಿಸಿ ತಟ್ಟಿದ್ದು, ಇದ್ದಷ್ಟು ಹಣದಲ್ಲೇ ಸೊಪ್ಪು, ತರಕಾರಿ ಖರೀದಿಸುವ ಅನಿವಾರ್ಯತೆಗೆ ಸಿಲುಕಿದ್ದಾರೆ. ನಾಲ್ಕು ಸಿವುಡು ಖರೀದಿಸುವವರು ಎರಡಕ್ಕೆ, ಅರ್ಧ ಕೆ.ಜಿ. ತರಕಾರಿ ಕೊಳ್ಳುವವರು ಕಾಲು ಕೆ.ಜಿ.ಗೆ ಸೀಮಿತರಾಗಿದ್ದಾರೆ. ಮುಂದೆ ದೀಪಾವಳಿ ಹಬ್ಬ ಇರುವುದರಿಂದ ದರ ಇನ್ನಷ್ಟು ಏರುವ ಸಾಧ್ಯತೆ ಇದೆ. ಹೀಗಾದರೆ ಹಬ್ಬ ಆಚರಿಸುವುದು ಹೇಗೆ ಎಂಬ ಚಿಂತೆಯೂ ಗ್ರಾಹಕರನ್ನು ಕಾಡುತ್ತಿದೆ.**

# ಕಲ್ಲಿನಿಂದ ಜಜ್ಜಿ ಕೊಲೆ

• ಉದಯವಾಹಿನಿ, ಕುಮಟಾ

ಇಲ್ಲಿನ ಸರ್ಕಾರಿ ಆಸ್ಪತ್ರೆಯ ಕಟ್ಟಡ ಹಾಗೂ ಸಿಬ್ಬಂದಿ ವಸತಿ ಗೃಹ ನವೀಕರಣ ಕಾಮಗಾರಿ ನಡೆಸಲು ಬಂದಿದ್ದ ಮೂವರು ಕಾರ್ಮಿಕರ ನಡುವೆ ಸೋಮವಾರ ಉಂಟಾದ ಘರ್ಷಣೆಯಲ್ಲಿ ಓರ್ವ ಹತ್ಯೆಯಾಗಿದ್ದಾನೆ. ಹುಬ್ಬಳ್ಳಿಯ ಆನಂದ ನಗರ ನಿವಾಸಿ ಇಮ್ತಿಯಾಜ್ ರಾಯಭಾಗಿ (34) ಕೊಲೆಯಾಗಿರುವ ವ್ಯಕ್ತಿ.

ಮೃತ ವ್ಯಕ್ತಿಯ ಜತೆ ಇದ್ದ ಹುಬ್ಬಳ್ಳಿ ಆನಂದ ನಗರದ ಸಾದಿಕ್ (20), ಮುನಿಯಪ್ಪ (50) ಸೇರಿ ಕಲ್ಲಿನಿಂದ ಜಜ್ಜಿ ಕಾರ್ಮಿಕನ ಕೊಲೆ ಮಾಡಿದ್ದಾರೆ. ಇಬ್ಬರೂ ಆರೋಪಿಗಳು ಹುಬ್ಬಳ್ಳಿಗೆ ಪರಾರಿಯಾಗಿದ್ದು, ಅವರನ್ನು ಬಂಧಿಸಲಾಗುವುದು ಎಂದು ಸಿ.ಪಿ.ಐ ಯೋಗೇಶ್ ತಿಳಿಸಿದ್ದಾರೆ. ನವೀಕರಣ ಕಾಮಗಾರಿ ನಡೆಸಲು ಬಂದ ನಾಲ್ವರು ಕಾಮಗಾರಿ ನಡೆಯುತ್ತಿದ್ದ ಒಂದು ವಸತಿ ಗೃಹದಲ್ಲಿ ವಾಸವಾಗಿದ್ದರು. ಘಟನೆ ನಡೆದಾಗ ವಸತಿ ಗೃಹದ ಇನ್ನೊಂದು ಕೊಣೆಯಲ್ಲಿ ಮಲಗಿದ್ದ ಇನ್ನೊಬ್ಬ ಕಾರ್ಮಿಕ ಮೊಯಿನುದ್ದಿನ್ ಎಂಬಾತ ಘಟನೆ ಬಗ್ಗೆ ಮಾಹಿತಿ ನೀಡಿದ್ದಾನೆ ಎಂದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಜಗದೀಶ್ , ಭಟ್ಕಳ ಡಿಎಸ್ಪಿ ಮಹೇಶ್ ಕೆ.ಎಂ. ಸ್ಥಳಕ್ಕೆ ಭೇಟಿ ನೀಡಿದ್ದಾರೆ.

# ನೆಲದೊಡಲು ಬಗೆವವರಿಗೆ ಇಲ್ಲ ಕಡಿವಾಣ

• ಉದಯವಾಹಿನಿ, ತುಮರಿ


ಉದಯವಾಹಿನಿ ಚಿತ್ರ

ಗಣಿಗಾರಿಕೆ ನಿಯಂತ್ರಣಕ್ಕೆ ಸರ್ಕಾರದ ಬಳಿ ನಾನಾ ಅಸ್ತ್ರಗಳಿವೆ. ಗಣಿ ಮತ್ತು ಖನಿಜ ಕಾಯ್ದೆ, ಪರಿಸರ ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ ಸೇರಿದಂತೆ ಹಲವು ಕಾನೂನುಗಳ ಮೂಲಕ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸುವ ಅವಕಾಶಗಳಿವೆ. ಗಣಿ ಮತ್ತು ಭೂ ವಿಜ್ಞಾನ, ಕಂದಾಯ, ಅರಣ್ಯ ಇಲಾಖೆಗಳು ಅಧಿಕಾರ ಹೊಂದಿವೆ. ಆದರೆ, ಪರಿಸರ, ಜನ, ಜಾನುವಾರುಗಳಿಗೆ ಕಂಟಕವಾಗಿ ಹಬ್ಬುತ್ತಿರುವ 'ಕೆಂಪು ಕಲ್ಲು ಗಣಿ ಮಾಫಿಯಾ'ವನ್ನು ಹತ್ತಿಕ್ಕಲು ಅಧಿಕಾರಿಗಳು ಬಿಗಿ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಗ್ರಾಮಸ್ಥರ ಆರೋಪವಾಗಿದೆ. ಕರೂರು ಹೋಬಳಿಯ ಶರಾವತಿ ಸಿಂಗಳೀಕ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಚನ್ನಗೊಂಡ ಗ್ರಾಮದ ಕಂದಾಯ ಹಾಗೂ ವನ್ಯಜೀವಿ ಪ್ರದೇಶದಲ್ಲಿ ಅನಧಿಕೃತವಾಗಿ ಕೆಂಪು ಕಲ್ಲಿನ ಗಣಿಗಾರಿಕೆ ಕೆಲವು ವರ್ಷಗಳಿಂದ ನಡೆದಿದೆ. 9 ಕೆಂಪು ಕಲ್ಲಿನ ಕ್ವಾರಿಗಳು ಇಲ್ಲಿವೆ. ಪ್ರತಿಯೊಂದರ ಗಣಿಗಾರಿಕೆ ಪ್ರದೇಶವು 450 ಮೀಟರ್ ಉದ್ದ, 600 ಮೀಟರ್ ಅಗಲ ಹಾಗೂ 60 ಅಡಿ ಆಳ ಇದೆ. ಸುಧಾರಿತ ಯಂತ್ರದ ಮೂಲಕ ಖಾಸಗಿ ವ್ಯಕ್ತಿಗಳಿಂದ ಕೆಂಪು ಕಲ್ಲುಗಳನ್ನು ಕತ್ತರಿಸಿ ತೆಗೆಯಲಾಗುತ್ತಿದೆ ಎಂದು ಆರೋಪಿಸಲಾಗಿದೆ. ದಿನವೊಂದಕ್ಕೆ 30ಕ್ಕೂ ಹೆಚ್ಚು ಲೋಡ್ ಕೆಂಪು ಕಲ್ಲುಗಳನ್ನು ಇಲ್ಲಿಂದ ಸಾಗಿಸಲಾಗುತ್ತಿದೆ. ಒಂದು ಗಣಿಗಾರಿಕೆ ಪ್ರದೇಶದಿಂದ ದಿನಕ್ಕೆ 3 ಲಕ್ಷ ಆದಾಯ ಇದೆ ಎಂದು ಅಂದಾಜಿಸಲಾಗಿದೆ. ರಾಜಕೀಯ ವ್ಯಕ್ತಿಗಳ ಪ್ರಭಾವದಿಂದ ಕಲ್ಲುಗಳನ್ನು ತೆಗೆದು ಜನರಿಗೆ ದುಪ್ಪಟ್ಟು ಬೆಲೆಗೆ ಮಾರುವ ದಂಧೆಗೆ ಕಡಿವಾಣ ಇಲ್ಲದಂತಾಗಿದೆ ಎಂದು ಸ್ಥಳೀಯರಾದ ಮಂಜುನಾಥ್ ಬೇಸರ ವ್ಯಕ್ತಪಡಿಸುತ್ತಾರೆ. ಯಾವುದೇ ಮಂಜೂರಾತಿ, ಪರವಾನಿಗೆ ಇಲ್ಲದೆ ಖಾಸಗಿ ವ್ಯಕ್ತಿಗಳು ಭೂಮಿಯ ಒಡಲು ಬಗೆಯುತ್ತಿರುವ ಜೊತೆಗೆ ಕಲ್ಲುಗಳನ್ನು ಹೊತ್ತೊಯ್ಯುವ ವಾಹನಗಳು ವೇಗವಾಗಿ ಬಂದು ಸ್ಥಳೀಯರು, ಶಾಲಾ ಮಕ್ಕಳ ಮೇಲೆ ಎರಗುವ ಆತಂಕವಿದೆ. ತಿಂಗಳ ಹಿಂದೆ ಇದೇ ಗ್ರಾಮದ ವಿದ್ಯಾರ್ಥಿಯೊಬ್ಬ ವೇಗವಾಗಿ ಚಲಿಸುವ ಮರಳು ಸಾಗಾಣಿಕೆ ಮಾಡುವ ಟಿಪ್ಪರ್‌ಗೆ ಸಿಕ್ಕಿ ಮೃತಪಟ್ಟಿದ್ದ. ವ್ಯಾಪಕ ದೂಳಿನಿಂದ ಈ ಭಾಗದ ಎಳೆಯ ಮಕ್ಕಳ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ.

ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದರೂ, ಇಲ್ಲಿನ ಕಟ್ಟಿನಕಾರು, ಕೋಗಾರು, ಹೊಂಡಗದ್ದೆ ಭಾಗದಲ್ಲಿ ಅರಣ್ಯ, ಕಂದಾಯ ಇಲಾಖೆ ಪ್ರದೇಶದಲ್ಲಿ ಕೆಂಪು ಕಲ್ಲು ತೆಗೆಯಲು ಅವಕಾಶ ನೀಡಿದ ಪರಿಣಾಮ ಪರಿಸರಕ್ಕೂ ಸಾಕಷ್ಟು ಹಾನಿಯಾಗಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ: ಅಂಗವಿಕಲರಿಂದ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಉಡುಪಿ

ಅಂಗವಿಕಲರಿಗೆ ಸರ್ಕಾರ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಯಿತು. ದಿವ್ಯಾಂಗರ ರಕ್ಷಣಾ ಸಮಿತಿಯ ವಿಜಯ್ ಕೊಡವೂರು ಮಾತನಾಡಿ, ರಾಜ್ಯದಲ್ಲಿ ಅಂಗವಿಕಲ ಹಕ್ಕುಗಳ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲೆಯ ಎಂಡೋಸಲ್ಫಾನ್ ಪೀಡಿತರ ಪುನರ್ವಸತಿ ಕೇಂದ್ರವನ್ನು ಕುಂದಾಪುರದ ನಾಡಾದಲ್ಲಿ ಗುರುತಿಸಲಾದ ಸ್ಥಳದಲ್ಲಿ ನಿರ್ಮಿಸಲು ಮುಂದಿನ ಬಜೆಟ್ ನಲ್ಲಿ ಅನುದಾನ ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು. ಮಂಜುನಾಥ ಹೆಬ್ಬಾರ್, ರವೀಂದ್ರ ಹೆಮ್ಮಾಡಿ, ವೆಂಕಟೇಶ್, ಹರೀಶ್ ಶೆಟ್ಟಿ ಪಾಲ್ಗೊಂಡಿದ್ದರು. ಪ್ರತಿಭಟನಾ ಸಭೆಗೂ ಮೊದಲು ಮಣಿಪಾಲದ ಕಾಯಿನ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು.

# ಅಂಗನವಾಡಿ ಸಮಸ್ಯೆಗಳು ಹಲವಾರು: ಕಾರ್ಯಕರ್ತೆಯರಿಗೆ ಕಾರ್ಯಭಾರದ ಹೊರೆ

## ಪುಟ್ಟ ಕಂದಮ್ಮಗಳನ್ನು ತಮ್ಮದೇ ಮಕ್ಕಳಂತೆ ಸಲಹುವ ಅಂಗನವಾಡಿ ಕಾರ್ಯಕರ್ತೆಯರ ನೋವು ಸೆರಗಿನೊಳಗೆ ಬಚ್ಚಿಟ್ಟ ಕೆಂಡದಂತೆ

• ಉದಯವಾಹಿನಿ, ಮಂಗಳೂರು


ಉದಯವಾಹಿನಿ ಚಿತ್ರ

ಮಕ್ಕಳು ಪರಸ್ಪರ ಬೆರೆಯುವ, ಇತರ ಮಕ್ಕಳೊಡನೆ ಒಡನಾಡುವ, ಶಾಲಾ ಶಿಕ್ಷಣ ವ್ಯವಸ್ಥೆಗೆ ಪುಟಾಣಿಗಳನ್ನು ಅಣಿಗೊಳಿಸುವ ಕೇಂದ್ರ ಅಂಗನವಾಡಿಗಳು. ಶಾಲಾ ಪೂರ್ವ ಶಿಕ್ಷಣ ನೀಡುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಪಾತ್ರ ಮಹತ್ವದ್ದು. ಪುಟ್ಟ ಕಂದಮ್ಮಗಳನ್ನು ತಮ್ಮದೇ ಮಕ್ಕಳಂತೆ ಸಲಹುವ ಅಂಗನವಾಡಿ ಕಾರ್ಯಕರ್ತೆಯರ ನೋವು ಸೆರಗಿನೊಳಗೆ ಬಚ್ಚಿಟ್ಟ ಕೆಂಡದಂತೆ.

ಸರ್ಕಾರದ ಹೊಸ ಕಾರ್ಯಕ್ರಮಗಳು, ಬದಲಾಗುವ ಆಹಾರ ಮೆನು, ವಿವಿಧ ಇಲಾಖೆಗಳ ಹೆಚ್ಚುವರಿ ಕಾರ್ಯಭಾರಗಳು ಅಂಗನವಾಡಿ ಕಾರ್ಯಕರ್ತೆಯರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. 'ಗೌರವ ಧನ'ದ ಅಡಿಯಲ್ಲಿ ಕೆಲಸ ಮಾಡುವ ನಮ್ಮ ಪರಿಶ್ರಮಕ್ಕೆ ಬೆಲೆಯೇ ಇಲ್ಲದಂತಾಗಿದೆ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಜಿಲ್ಲೆಯಲ್ಲಿ ಒಟ್ಟು 2,131 ಅಂಗನವಾಡಿಗಳು ಇವೆ. ಮಂಜೂರು ಇರುವ 2,130 ಕಾರ್ಯಕರ್ತೆಯರ ಹುದ್ದೆಗಳಲ್ಲಿ 59 ಹುದ್ದೆಗಳು ಖಾಲಿ ಇದ್ದರೆ, ಸಹಾಯಕಿಯರ 2,125 ಹುದ್ದೆಗಳಲ್ಲಿ 180 ಹುದ್ದೆಗಳು ಖಾಲಿ ಇವೆ. 164 ಅಂಗನವಾಡಿಗಳಿಗೆ ನಿವೇಶನದ ಲಭ್ಯತೆ ಇಲ್ಲ. 56 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿವೆ. ನಗರ ಪ್ರದೇಶದಲ್ಲಿರುವ ಒಂದಷ್ಟು ಅಂಗನವಾಡಿಗಳಲ್ಲಿ ಮಕ್ಕಳ ಸಂಖ್ಯೆ ಇದ್ದರೂ, ಕೊಠಡಿ ಕಿರಿದಾಗಿದೆ. ಚರಂಡಿ, ಕಸದ ತೊಟ್ಟಿ ಸನಿಹದಲ್ಲಿರುವ ಅಂಗನವಾಡಿಗಳಿಗೆ ನಿತ್ಯ ನಿರಂತರ ಅಸಹ್ಯ ವಾಸನೆ ತಪ್ಪಿದ್ದಲ್ಲ. ರಸ್ತೆ ವಿಸ್ತರಣೆ ವೇಳೆ ಕಟ್ಟಡ ಕಳೆದುಕೊಳ್ಳುವ ಆತಂಕದಲ್ಲೂ ಕೆಲವು ಅಂಗನವಾಡಿಗಳು ಇವೆ.

ಮೊಟ್ಟೆ ಪೂರೈಕೆ ತೀರದ ಸಮಸ್ಯೆ. ಈ ಹಿಂದೆ ಟೆಂಡರ್ ಮೂಲಕ ಗುತ್ತಿಗೆ ಪಡೆದ ಕಂಪನಿ ಮೊಟ್ಟೆ ಪೂರೈಕೆ ಮಾಡುತ್ತಿತ್ತು. ಆಗ, ಕಳಪೆ ಗುಣಮಟ್ಟ, ಕೊಳೆತ ಮೊಟ್ಟೆಗಳ ಬಗ್ಗೆ ಗರ್ಭಿಣಿ, ಬಾಣಂತಿಯರ ಬೈಗುಳ ಕೇಳಿಸಿಕೊಳ್ಳಬೇಕಾಗುತ್ತಿತ್ತು. ಈಗ ಅಂಗನವಾಡಿಗಳಿಗೆ ನೇರವಾಗಿ ಹಣ ಪಾವತಿಯಾಗುತ್ತಿದೆ. ಒಂದು ಮೊಟ್ಟೆಗೆ ಸರ್ಕಾರ 6 ನೀಡುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಮೊಟ್ಟೆಯ ದರ ಏರಿಳಿತ ವಾಗುತ್ತದೆ. ಪ್ರಸ್ತುತ ಒಂದು ಮೊಟ್ಟೆಗೆ 6.30ರಿಂದ 7 ದರ ಇದ್ದು, ಹೆಚ್ಚುವರಿ ಮೊತ್ತವನ್ನು ಅಂಗನವಾಡಿ ಕಾರ್ಯಕರ್ತೆಯರು ಸ್ವತಃ ಭರಿಸುತ್ತಾರೆ ಎನ್ನುತ್ತಾರೆ ಕಾರ್ಯಕರ್ತೆಯೊಬ್ಬರು.

ಆರೋಗ್ಯ ಇಲಾಖೆ ಸೇರಿದಂತೆ ಹಲವಾರು ಇಲಾಖೆಗಳ ಕಾರ್ಯಭಾರವನ್ನು ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸುತ್ತಾರೆ. ಬೆಳಿಗ್ಗೆ 9.30ರಿಂದ ಸಂಜೆ 4 ಗಂಟೆಯವರೆಗೆ ತಮ್ಮ ಕಂದಮ್ಮಗಳ ಕಾಳಜಿಯನ್ನು ನಮಗೆ ವಹಿಸಿ ತಾಯಂದಿರು ಕೆಲಸಕ್ಕೆ ಹೋಗುತ್ತಾರೆ. ಮಕ್ಕಳಿಗೆ ನಿರ್ದಿಷ್ಟ ಸಮಯಕ್ಕೆ ಆಹಾರ, ಮಧ್ಯಾಹ್ನದ ಊಟ ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತೇವೆ. ಆದರೆ, ಹೆಚ್ಚುವರಿ ಕೆಲಸಗಳಿದ್ದಾಗ, ಕೇಂದ್ರಕ್ಕೆ ಬೇರೆ ಇಲಾಖೆಗಳ ಅಧಿಕಾರಿಗಳ ಭೇಟಿ ಇದ್ದಂತಹ ಅನಿವಾರ್ಯ ಸಂದರ್ಭಗಳಲ್ಲೂ ದೈನಂದಿನ ಕಾರ್ಯದಲ್ಲಿ ವಿನಾಯಿತಿ ಇರುವುದಿಲ್ಲ. 21 ಬೇರೆ ಬೇರೆ ನೋಂದಣಿ ಪುಸ್ತಕಗಳಲ್ಲಿ ದಾಖಲಾತಿ ಮಾಡುವ ಹೊಣೆ ನಮ್ಮ ಕರ್ತವ್ಯದ ಭಾಗವಾಗಿದೆ. ಕೆಲವು ಅಂಗನವಾಡಿಗಳಲ್ಲಿ ಸಹಾಯಕರೂ ಇಲ್ಲ. ಇಂತಹ ಕಷ್ಟಗಳನ್ನು ಎಲ್ಲಿಯೂ ಹೊರಗಿಕ್ಕಲಾಗದ ಪರಿಸ್ಥಿತಿ ನಮ್ಮದು' ಎಂದು ಪುತ್ತೂರಿನ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಅಲವತ್ತುಕೊಂಡರು.


> **ಸರ್ಕಾರದ ನಿಯಮದಂತೆ ಅಂಗನವಾಡಿ ಕೇಂದ್ರದ ವ್ಯಾಪ್ತಿಗೆ ಬರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ತಿಂಗಳಿಗೆ 25 ಮೊಟ್ಟೆ ಹಾಗೂ ಅಂಗನವಾಡಿ ಮಕ್ಕಳಿಗೆ ವಾರಕ್ಕೆ ಎರಡು ದಿನ ಮೊಟ್ಟೆ ನೀಡಬೇಕು. ಮೊಟ್ಟೆಯ ದರ ಜಾಸ್ತಿಯಾದರೆ, ಅದರ ಭಾರ ನಮಗೆ. ಮಾರುಕಟ್ಟೆ ದರ ಆಧರಿಸಿ, ಮೊಟ್ಟೆಗೆ ಖರೀದಿಗೆ ನೀಡುವ ಹಣವನ್ನು ಸರ್ಕಾರ ಪಾವತಿಸಬೇಕು ಎಂಬುದು ನಮ್ಮ ಬಹುದಿನಗಳ ಬೇಡಿಕೆ**
>
> **-ಜಯಲಕ್ಷ್ಮಿ, ರಾಜ್ಯ ಗೌರವಾಧ್ಯಕ್ಷೆ**

### ಪೋಷಣ್ ದೊಡ್ಡ ಹೊರೆ

**ಅಪೌಷ್ಟಿಕತೆ ತಡೆಗಟ್ಟುವ ಉದ್ದೇಶದಿಂದ ನಡೆಸುವ ಪೋಷಣ್ ಮಾಸಾಚರಣೆಗೆ ಒಂದೆರಡು ವರ್ಷಗಳಿಂದ ಅನುದಾನ ಬರುವುದು ನಿಂತಿದೆ. ಕಾರ್ಯಕ್ರಮದ ಉದ್ದೇಶ ಒಳ್ಳೆಯದೇ ಆಗಿದ್ದರೂ, ಬಿಡಿಗಾಸೂ ಇಲ್ಲದೆ ಕಾರ್ಯಕ್ರಮ ನಡೆಸುವುದು ಸುಲಭವಲ್ಲ. ಹಲವಾರು ಕಡೆ ಬ್ಯಾನರ್ ವೆಚ್ಚವನ್ನೂ ಕಾರ್ಯಕರ್ತೆಯರೇ ಭರಿಸುತ್ತಾರೆ. ಸಮುದಾಯ ಸಹಭಾಗಿತ್ವದಲ್ಲಿ ನಡೆಸಬೇಕೆನ್ನುವ ಪರಿಕಲ್ಪನೆ ಒಳ್ಳೆಯದೇ, ಆದರೆ, ಸಹಕಾರ ಸಿಗುವುದು ಕೆಲವೆಡೆಗಳಲ್ಲಿ ಮಾತ್ರ ಎಂದು ಸಂಘಟನೆಯ ಪದಾಧಿಕಾರಿಯೊಬ್ಬರು ಬೇಸರಿಸಿದರು.**

## ಮಿನಿ ನ್ಯೂಸ್

# ಕರುನಾಡ ಯುವ ಪಡೆ ಮತ್ತಷ್ಟು ಬಲಿಷ್ಠ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಪ್ಪಳ

ಕರುನಾಡು ಯುವ ಪಡೆ ವೇದಿಕೆಗೆ ಸೇರ್ಪಡೆ ಗೊಂಡ ಹೋರಾಟಗಾರರಿಗೆ ಕರ್ನಾಟಕ ಪರಿಸರ ರತ್ನ ಪುರಸ್ಕೃತರು, ರಾಜ್ಯಾಧ್ಯಕ್ಷರಾದಂತ ಕೆ ಎಮ್ ಹಳ್ಳಿಯವರು ತಾಲ್ಲೂಕು, ಜಿಲ್ಲಾ, ರಾಜ್ಯಮಟ್ಟದ ಪದವಿ ಪದಗ್ರಹಣ ಆದೇಶ ಪತ್ರವನ್ನು ಹೊರಡಿಸಿ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಕೆಎಂ ಹಳ್ಳಿಯವರು ಭ್ರಷ್ಟಾಚಾರದಲ್ಲಿ ಮುಳುಗಿರುವ ಕೊಪ್ಪಳ ಜಿಲ್ಲೆಯ ಅಧಿಕಾರಿಗಳಿಗೆ ಹಾಗೂ ರಾಜಕಾರಣಿಗಳಿಗೆ ಬುದ್ಧಿ ಕಲಿಸಬೇಕೆಂದು ಈ ಯುವ ಪಡೆ ಕಟ್ಟುತ್ತಿದ್ದೆನೆ ಎಂದು ನೂತನವಾಗಿ ಸೇರ್ಪಡೆಯಾದ ಯುವಕರಿಗೆ ಕಿವಿ ಮಾತನ್ನು ಹೇಳಿದರು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರು ಕರ್ನಾಟಕ ಪರಿಸರ ರತ್ನ ಪುರಸ್ಕೃತ ಕೆ ಎಮ್ ಹಳ್ಳಿ ಜಿಲ್ಲಾಧ್ಯಕ್ಷರು ಫಕೀರೇಶ ಬಾರಕೇರ, ಜಿಲ್ಲಾ ಉಪಾಧ್ಯಕ್ಷ ದುರ್ಗರಾಜ್ ಗಂಟಿ ಹನುಮಂತಪ್ಪ ಮಾರುತಿ ದಾದಾಪೀರ್ ಆರ್ ಎನ್ ಇಸ್ಮಾಯಿಲ್ ರಾಜ್ಯ ಉಪಾಧ್ಯಕ್ಷರು ಸಿದ್ದಪ್ಪ ಶಿವರಾಜ್ ಎಲ್ಲಪ್ಪ ನಿಂಗಪ್ಪ ಮತ್ತಿತರರಿದ್ದರು.

# ಕಾಲುಬಾಯಿ ರೋಗ; ಒಂದೇ ವಾರದಲ್ಲಿ 30ಕ್ಕೂ ಹೆಚ್ಚು ಕುರಿ-ಮೇಕೆಗಳ ಸಾವು

• ಉದಯವಾಹಿನಿ, ಗಂಗಾವತಿ

ಕಾಲುಬಾಯಿ ರೋಗದಿಂದ ಒಂದೇ ವಾರದಲ್ಲಿ ತಾಲ್ಲೂಕಿನ ತಿರುಮಲಾಪೂರ ಗ್ರಾಮದಲ್ಲಿ 30ಕ್ಕೂ ಹೆಚ್ಚು ಕುರಿ-ಮೇಕೆಗಳು ಸಾವನ್ನಪ್ಪಿರುವ ಘಟನೆ ನಡೆದಿದೆ. ಕುರಿಗಾರರಿಗೆ ಲಕ್ಷಾಂತರ ರೂ.ನಷ್ಟವಾಗಿದ್ದು ಜಿಲ್ಲಾ ಡಳಿತ ಮುನ್ನೆಚ್ಚರಿಕೆ ಕ್ರಮವಾಗಿ ಪಶುಗಳಿಗೆ ಲಸಿಕೆ ಹಾಕುವ ಕಾರ್ಯ ಮಾಡುತ್ತಿದ್ದು ಇನ್ನೂ ಬಹುತೇಕ ಗ್ರಾಮೀಣ ಭಾಗಕ್ಕೆ ಲಸಿಕಾ ತಂಡ ಹೋಗಿಲ್ಲ. ಈ ವರ್ಷ ಮಳೆಗಾಲ ಹೆಚ್ಚಾಗಿರುವ ಕಾರಣ ಪಶುಗಳಿಗೆ ಕಾಲುಬಾಯಿ ರೋಗ ವ್ಯಾಪಕವಾಗಿದ್ದು ಇದರಿಂದಾಗಿ ಜಿಲ್ಲೆಯ ಬಹುತೇಕ ಗ್ರಾಮೀಣ ಭಾಗದಲ್ಲಿ ದನ, ಕುರಿ, ಮೇಕೆಗಳಿಗೆ ಕಾಲುಬಾಯಿ ರೋಗ ವ್ಯಾಪಕವಾಗಿ ಹರಡಿದೆ.
**ಸಿಬ್ಬಂದಿ ಕೊರತೆಯ ನೆಪ:** ಪಶುಸಂಗೋಪನೆ ಇಲಾಖೆಯಲ್ಲಿ ವೈದ್ಯರು ಸೇರಿ ಅಗತ್ಯವಾದ ಸಿಬ್ಬಂದಿ ಕೊರತೆ ಇದ್ದು ಪಶುಗಳ ಸಂಖ್ಯೆಗೆ ಹೋಲಿಸಿದರೆ ಸಿಬ್ಬಂದಿ ಬಹಳ ಕಡಿಮೆ ಇದೆ. ಸಿಬ್ಬಂದಿ ಕೊರತೆ ಹಲವು ದಶಕಗಳಿಂದ ಇದ್ದರೂ ಸರಕಾರಗಳು ನಿರ್ಲಕ್ಷ್ಯ ವಹಿಸಿದ್ದರಿಂದ ಪಶುಗಳಿಗೆ ಬರುವ ರೋಗಗಳ ಕುರಿತು ಮುನ್ನೆಚ್ಚರಿಕೆ ವಹಿಸುವಲ್ಲಿ ಪಶುಸಂಗೋಪನೆ ಇಲಾಖೆ ವಿಫಲವಾಗಿದೆ.

# ಜ್ವರದಿಂದ ಮಗು ಸಾವು; ವೈದ್ಯರ ನಿರ್ಲಕ್ಷ್ಯ ಕಾರಣವೆಂದು ಆಕ್ರೋಶ

• ಉದಯವಾಹಿನಿ, ಹೊಸಪೇಟೆ

ತ್ರೀವ ಜ್ವರದಿಂದ ಬಳಲುತ್ತಿದ್ದ ಐದು ವರ್ಷದ ಮಗುವಿಗೆ ವೈದ್ಯರಿಂದ ತುರ್ತು ಚಿಕಿತ್ಸೆ ಲಭಿಸದೆ ಸಾವನ್ನಪ್ಪಿದ ಘಟನೆ ನಗರದ ಸರ್ಕಾರಿ ನೂರು ಹಾಸಿಗೆ ಆಸ್ಪತ್ರೆಯಲ್ಲಿ ಸೋಮವಾರ ನಡೆದಿದೆ. ಮಗು ಸಾವಿಗೆ ವೈದ್ಯರ ನಿರ್ಲಕ್ಷ್ಯ ಧೋರಣೆ ಕಾರಣ ಎಂದು ಪಾಲಕರು ಆರೋಪಿಸಿದ್ದಾರೆ. ತಾಲ್ಲೂಕಿನ ಕಮಲಾಪುರದ ಅಂಬೇಡ್ಕರ್ ನಗರದ ಶಾಂತಪ್ಪ, ಶಂಕ್ರಮ್ಮ ಎಂಬವವರ ಪುತ್ರ ಕುಶಾಲ್ (5) ಮೃತಪಟ್ಟ ಮಗು.ತ್ರೀವ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮಗುವನ್ನು ಕರೆದುಕೊಂಡು ಬೆಳಗ್ಗೆ 7 ಗಂಟೆಗೆ ಆಸ್ಪತ್ರೆಗೆ ಭೇಟಿ ನೀಡಿದಾಗ ತುರ್ತು ಚಿಕಿತ್ಸಾ ವಾರ್ಡ್ ನಲ್ಲಿ ವೈದ್ಯರು ಇರಲಿಲ್ಲ. ಅ. 24 ರಂದು ಸರ್ಕಾರಿ ಆಸ್ಪತ್ರೆಗೆ ಬಂದು ಮಗುವಿಗೆ ಚಿಕಿತ್ಸೆ ಕೊಡಿಸಿದ್ದರು. ಮಗು ಚೆನ್ನಾಗಿದೆ ವೈದ್ಯರು ಹೇಳಿ ಕಳುಹಿಸಿದ್ದರು. ಸೋಮವಾರ ಬೆಳಗ್ಗೆ ಜ್ವರ ಹೆಚ್ಚಾಗಿದೆ ಎಂದು ಮಗುವಿನೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿದ್ದರು. ಈ ವೇಳೆ ತುರ್ತು ಚಿಕಿತ್ಸೆ ನೀಡಲು ವೈದ್ಯರಿರಲಿಲ್ಲ. ವೈದ್ಯರು ಸ್ಥಳದಲ್ಲಿ ಲಭ್ಯವಿದ್ದರೆ ಮಗು ಬದುಕುಳಿಯುತ್ತಿತ್ತು. ಇದಕ್ಕೆ ವೈದ್ಯರ ನಿರ್ಲಕ್ಷ್ಯ ಕಾರಣವಾಗಿದೆ ಎಂದು ಪೋಷಕರು ಆರೋಪಿಸಿದರು.ನಗರದ ಬಡಾವಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

# ನಿಖಿಲ್‌ಗೆ ಅಭಿಮನ್ಯು ಪಾತ್ರ ಬೇಡ ಅರ್ಜುನನ ಪಾತ್ರ ನಿರ್ವಹಿಸಲಿ

• ಉದಯವಾಹಿನಿ, ಹಾಸನ

ಕುರುಕ್ಷೇತ್ರ ಚಿತ್ರದಲ್ಲಿ ನನ್ನ ಮಗ ನಿಖಿಲ್‌ಕುಮಾರಸ್ವಾಮಿ ಅಭಿಮನ್ಯುವಿನ ಪಾತ್ರ ಮಾಡಿದ್ದ. ಮಂಡ್ಯ ಮತ್ತು ರಾಮನಗರದ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರ ಕುತಂತ್ರದಿಂದ ಸೋಲನುಭವಿಸಿದ. ಆದರೆ, ಈ ಬಾರಿ ಉಪ ಚುನಾವಣೆಯಲ್ಲಿ ಚನ್ನಪಟ್ಟಣದ ಜನತೆ ನಿಖೀಲ್‌ಗೆ ಅಭಿಮನ್ಯುವಿನ ಪಾತ್ರ ಬೇಡ ಎಂದು ಅರ್ಜುನನ ಪಾತ್ರ ನೀಡಿದ್ದಾರೆ. ನಮ್ಮ ವಿರೋಧಿಗಳು ಎಷ್ಟೇ ಕುತಂತ್ರದ ರಾಜಕಾರಣ ಮಾಡಿದರೂ ಚನ್ನಪಟ್ಟಣದ ಜನತೆ ಮತ್ತು ಎನ್‌ಡಿಎ ಕಾರ್ಯಕರ್ತರು ನಿಖೀಲ್‌ಗೆ ಗೆಲುವು ನೀಡುತ್ತಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ವಿರೋಧಿಗಳಿಗೆ ಟಾಂಗ್ ನೀಡಿದರು. ಹಾಸನಾಂಬೆ ದರ್ಶನ ಪಡೆದ ಅನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚನ್ನಪಟ್ಟಣ ಉಪ ಚುನಾವಣೆ ಫಲಿತಾಂಶ ರಾಜ್ಯ ರಾಜಕಾರಣದ ಮುಂದಿನ ದಿಕ್ಸೂಚಿಯಾಗಲಿದೆ. ವಿರೋಧಿಗಳ ಹೇಳಿಕೆ ಗಮನಿಸಿದ್ದೇನೆ, ಅವರ ಹೇಳಿಕೆಗೆ ಚನ್ನಪಟ್ಟಣದ ಜನತೆಯೇ ಉತ್ತರ ನೀಡುತ್ತಾರೆ ಎಂದು ಹೇಳಿದರು. ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಇರಲಿಲ್ಲವೋ ಏನೋ, ಬಿಜೆಪಿಯಲ್ಲಿದ್ದವರನ್ನು ಕನಕಪುರ ಸಹೋದರರು ಕರೆದೊಯ್ದು ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ ಎಂದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ: ಅಂಗವಿಕಲರಿಂದ ಪ್ರತಿಭಟನೆ

• ಉದಯವಾಹಿನಿ, ಉಡುಪಿ

ಅಂಗವಿಕಲರಿಗೆ ಸರ್ಕಾರ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಯಿತು. ದಿವ್ಯಾಂಗರ ರಕ್ಷಣಾ ಸಮಿತಿಯ ವಿಜಯ್ ಕೊಡವೂರು ಮಾತನಾಡಿ, ರಾಜ್ಯದಲ್ಲಿ ಅಂಗವಿಕಲ ಹಕ್ಕುಗಳ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲೆಯ ಎಂಡೋಸಲ್ಫಾನ್ ಪೀಡಿತರ ಪುನರ್ವಸತಿ ಕೇಂದ್ರವನ್ನು ಕುಂದಾಪುರದ ನಾಡಾದಲ್ಲಿ ಗುರುತಿಸಲಾದ ಸ್ಥಳದಲ್ಲಿ ನಿರ್ಮಿಸಲು ಮುಂದಿನ ಬಜೆಟ್ ನಲ್ಲಿ ಅನುದಾನ ಮಂಜೂರು ಮಾಡಬೇಕು ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಸಂತೋಷದ ಚೈತನ್ಯದಾಯಕ ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ. ದೀರ್ಘಕಾಲದ ನಂತರ ನಿಮ್ಮ ಸ್ನೇಹಿತರಿಗೆ ಸಂಧಿಸುವ ವಿಚಾರ ನಿಮ್ಮ ಮನಸ್ಸಿನಲ್ಲೆಡೆ ತುಂಬಿರುತ್ತದೆ.

**ವೃಷಭ** ನಿಮ್ಮ ನಿರೀಕ್ಷೆಗಳನ್ನು ಪೂರ್ಣಗೊಳಿಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ.

**ಮಿಥುನ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು.

**ಕರ್ಕಾಟಕ** ನಿಮ್ಮ ಅತಿಥಿಗಳ ಜೊತೆ ಒರಟಾಗಿ ನಡೆದುಕೊಳ್ಳಬೇಡಿ. ನಿಮ್ಮ ವರ್ತನೆ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವೇ ಅಸಮಾಧಾನ ತರದೇ ಸಂಬಂಧಗಳಲ್ಲೂ ಶೂನ್ಯತೆಯನ್ನು ತರಬಹುದು.

**ಸಿಂಹ** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವ ದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ.

**ಕನ್ಯಾ** ನಿಮ್ಮ ಚೈತನ್ಯವನ್ನು ಹೆಚ್ಚಿಸಲು ನಿಮ್ಮ ಮನಸ್ಸಿನಲ್ಲಿ ಒಂದು ಪ್ರಕಾಶಮಾನವಾದ ಸುಂದರವಾದ ಮತ್ತು ಅದ್ಭುತವಾದ ಚಿತ್ರವನ್ನು ಕಲ್ಪಿಸಿಕೊಳ್ಳಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

**ತುಲಾ** ನೀವು ಯಾವುದೇ ದುಬಾರಿ ಸಾಹಸಕ್ಕೆ ಕೈಹಾಕುವ ಮೊದಲು ವಿವೇಚನೆ ಬಳಸಿ. ನೀವು ಪ್ರಾಮುಖ್ಯತೆ ನೀಡುವ ಸಮಬಂಧಗಳಿಗೆ ಸಾಮ್ಯವನ್ನು ನೀಡುವುದು ಸಹ ನೀವು ಕಲಿಯಬೇಕು.

**ವೃಶ್ಚಿಕ** ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ. ನಿಮ್ಮ ಪ್ರೇಮದ ಸಂಗಾತಿ ನಿಮ್ಮನ್ನು ಹೊಗಳಬಹುದು. ಅವರನ್ನು ಏಕಾಂಗಿಯಾಗಿ ಈ ಪ್ರಪಂಚದಲ್ಲಿ ಬಿಡಬೇಡಿ.

**ಧನಸ್ಸು** ಇಂದು ನೀವು ಎಲ್ಲಾ ಕೆಲಸಗಳನ್ನು ಹೊರತುಪಡಿಸಿ, ಬಾಲ್ಯದಲ್ಲಿ ನೀವು ಮಾಡಲು ಇಷ್ಟಪಟ್ಟ ಕೆಲಸಗಳನ್ನು ಮಾಡಲು ಇಷ್ಟಪಡುತ್ತೀರಿ. ನಿಮ್ಮ ಯೋಜನೆಗಳು ಒಬ್ಬ ಅನಿರೀಕ್ಷಿತ ಅತಿಥಿಯ ಕಾರಣ ಹಾಳಾಗಬಹುದು.

**ಮಕರ** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ. ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ.

**ಕುಂಭ** ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ಮೀನ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

# ಕಾರ್ಕಳದಲ್ಲಿ ಕರಿಮಣಿ ಮಾಲೀಕ ನೀನಲ್ಲ ಸಾವಿನ ಕಥೆ

● ಸೋಶಿಯಲ್ ಮೀಡಿಯಾದಲ್ಲಿ ಪ್ರೀತಿಯಾಗಿದ್ದ ಯುವಕನಿಗಾಗಿ ಮಹಿಳೆಯೊಬ್ಬಳು ಗಂಡನ ಜೀವವನ್ನೇ ತೆಗೆದ ಘಟನೆ

• ಉದಯವಾಹಿನಿ, ಉಡುಪಿ

ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ಅಜೆಕಾರಿನಲ್ಲಿ ನಡೆದ ಆ ಒಂದು ಕೊಲೆ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದೆ. ಸೋಶಿಯಲ್ ಮೀಡಿಯಾದಲ್ಲಿ ಪರಿಚಯವಾಗಿ ಪ್ರೀತಿಯಾಗಿದ್ದ ಯುವಕನಿಗಾಗಿ ಮಹಿಳೆಯೊಬ್ಬಳು ಗಂಡನ ಜೀವವನ್ನೇ ತೆಗೆದ ಘಟನೆ ದಿನಕ್ಕೊಂದು ರೋಚಕ ತಿರುವು ಪಡೆದುಕೊಳ್ಳುತ್ತಿದೆ.

ಚಿಕಿತ್ಸೆ ಮುಗಿಸಿ ಮನೆಗೆ ಕರೆದುಕೊಂಡು ಬಂದು ಈಗಷ್ಟೇ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದ್ದ ವ್ಯಕ್ತಿಯನ್ನು ಪತ್ನಿಯೇ ಮಲಗಿದಲ್ಲೇ ಹೆಣವಾಗಿಸಿದ ಕಥೆ ತಲ್ಲಣ ಹೆಚ್ಚಿಸಿದೆ. ಈ ಪ್ರಕರಣದ ಸಂಪೂರ್ಣ ವಿವರ ಇಲ್ಲಿದೆ.

ಬಾಲಕೃಷ್ಣ ಪೂಜಾರಿ ಕೊಲೆಯಾದ ಪತಿಯಾಗಿದ್ದು, ದಿಲೀಪ್ ಹೆಗ್ಡೆ ಹಾಗೂ ಬಾಲಕೃಷ್ಣ ಪೂಜಾರಿ ಪತ್ನಿ ಪ್ರತಿಮಾ ಕೊಲೆಯ ಆರೋಪಿಗಳಾಗಿದ್ದಾರೆ.

ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ಅಜಕಾರಿನ ಬಾಲಕೃಷ್ಣ ಪೂಜಾರಿ, ಕೋವಿಡ್‌ಗೂ ಮುನ್ನ ಮುಂಬೈನಲ್ಲಿ ಬೇರೆಯವರ ಹೋಟೆಲ್‌ನಲ್ಲಿ ಮೆನೇಜರ್ ಆಗಿ ದುಡಿಯುತ್ತಿದ್ದರು. ಕೋವಿಡ್ ನಂತರ ಊರಿಗೆ ಬಂದು ನಿಟ್ಟೆ ಕಾಲೇಜ್‌ನಲ್ಲಿ ಕ್ಯಾಂಟೀನ್ ತೆರೆದು ನಡೆಸುತ್ತಿದ್ದರು. ಜೊತೆಗೆ ಹೆಂಡತಿ ಪ್ರತಿಮಾಗೆ ಅಜೆಕಾರು ಪೇಟೆಯಲ್ಲಿ ಬ್ಯೂಟಿ ಪಾರ್ಲರ್ ಹಾಕಿಸಿಕೊಟ್ಟಿದ್ದರು.

ಅಜೆಕಾರಿಗೆ ವಾಪಸ್ ಬಂದ ನಂತರ ಹಿರಿಯರ ಮನೆಗೆ ಬದಲಾಗಿ, ಹೊಸದಾಗಿ ಮನೆ ಕಟ್ಟಿಸಿದ್ದರು. ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಹೊಸ ಮನೆಯ ಗೃಹಪ್ರವೇಶ ಆಗಿತ್ತು. ಪ್ರತಿಮಾ ಬ್ಯೂಟಿಷನಾಗಿದ್ದ ಕಾರಣ ಚೆನ್ನಾಗಿ ಡ್ರೆಸ್ ಮಾಡಿಕೊಂಡು ರೀಲ್ಸ್ ಮಾಡುತ್ತಿದ್ದಳು.

ಈಕೆಗೆ ಸೋಶಿಯಲ್ ಮೀಡಿಯಾದಲ್ಲಿ ದಿಲೀಪ್ ಹೆಗ್ಡೆ ಪರಿಚಯವಾಗಿತ್ತು. ಈತ ಕಾರ್ಕಳ ಪೇಟೆಯಲ್ಲಿರುವ ಬಾಲಾಜಿ ಎಂಬ ಲಾಡ್ಜ್ ಕಮ್ ರೆಸ್ಟೋರೆಂಟ್ ಮಾಲೀಕರ ಮಗ ಎನ್ನಲಾಗಿದೆ.

ಇನ್ಸ್ಟಾಗ್ರಾಮ್‌ನಲ್ಲಿ ಇಬ್ಬರ ಪರಿಚಯವಾಗಿದ್ದು, ತನಗಿಂತ ಎಂಟು ವರ್ಷ ಹಿರಿಯವಳಾದ ಪ್ರತಿಮಾಳನ್ನು ದಿಲೀಪ್ ಪ್ರೀತಿಸುತ್ತಿದ್ದನಂತೆ. ಇಬ್ಬರು ಒಟ್ಟಿಗೆ ಓಡಾಡುವುದನ್ನು ಊರ ಜನ ಗಮನಿಸಿ ಪ್ರತಿಮಾ ಕುಟುಂಬಸ್ಥರಿಗೂ ಹಾಗೂ ಪತಿಗೂ ವಿಚಾರ ತಿಳಿಸಿದ್ದರಂತೆ. ಒಂದೆರಡು ಬಾರಿ ಪೊಲೀಸ್ ಠಾಣೆಗೂ ಈ ವಿಚಾರ ಹೋಗಿತ್ತು. ಆದರೆ ಬಾಲಕೃಷ್ಣ ಹೆಂಡತಿಯನ್ನು ಬಿಟ್ಟುಕೊಡದೇ ಮತ್ತೆ ಮನೆಗೆ ಕರೆತಂದಿದ್ದರು.

ಬಳಿಕ ಸಂಪೂರ್ಣ ಆರೋಗ್ಯ ಹದಗೆಟ್ಟು ಬಾಲಕೃಷ್ಣ ಆಸ್ಪತ್ರೆ ಸೇರುತ್ತಾರೆ. ಮೊದಲು ಕಾರ್ಕಳದ ಕೆಎಂಸಿ ಕ್ಯಾಂಪ್‌ನಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ಹೀಗೆ ನಾಲ್ಕೈದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊನೆಯಲ್ಲಿ ಕುಟುಂಬಸ್ಥರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ.

ತಕ್ಕಮಟ್ಟಿಗೆ ಆರೋಗ್ಯ ಸುಧಾರಿಸಿಕೊಂಡು ವಾಪಸ್ ಅಜೆಕಾರಿಗೆ ಅವರನ್ನು ಕೆಲವು ದಿನಗಳ ಹಿಂದಷ್ಟೇ ಕರೆತರಲಾಗಿತ್ತು.

**ಪದೇ ಪದೇ ವಿಷಪ್ರಾಶನ**

ತಮ್ಮ ಪ್ರೀತಿಗೆ ಅಡ್ಡಗಾಲಾಗಿರುವ ಬಾಲಕೃಷ್ಣ ಪೂಜಾರಿಯನ್ನು ಮುಗಿಸಲು ದಿಲೀಪ್ ಹಾಗೂ ಪ್ರತಿಮಾ ಪ್ಲ್ಯಾನ್ ಮಾಡಿದ್ದಾರೆ ಎನ್ನಲಾಗಿದೆ. ಮೊದಲು ಆಹಾರದಲ್ಲಿ ಸ್ವಲ್ಪ ಸ್ವಲ್ಪವೇ ವಿಷವುಣಿಸಿ, ಆರೋಗ್ಯ ಕೆಡುವಂತೆ ಮಾಡುತ್ತಾರೆ. ಪದೇ ಪದೇ ವಿಷಪ್ರಾಶನದಿಂದ ಬಾಲಕೃಷ್ಣ ಕಿಡ್ನಿ ಲಿವರ್ ಹಾಳಾಗಿರುತ್ತದೆ. ನರಗಳಲ್ಲಿ ಪದೇ ಪದೇ ಸಮಸ್ಯೆ ಕಂಡು ಬರುತ್ತದೆ.


ಉದಯವಾಹಿನಿ ಚಿತ್ರ

ಪತಿ ಚೇತರಿಸಿಕೊಳ್ಳುತ್ತಿದ್ದಂತೆ ಮತ್ತೆ ಚುರುಕಾದ ಪ್ರತಿಮಾ, ದಿಲೀಪ್ ಹೆಗ್ಡೆಯನ್ನು ನಡುರಾತ್ರಿ ಫೋನ್ ಮಾಡಿ ಕರೆಸಿಕೊಂಡು ದಿಂಬಿನ ಮೂಲಕ ಬಾಲಕೃಷ್ಣ ಪೂಜಾರಿ ಅವರ ಉಸಿರು ನಿಲ್ಲಿಸಿದ್ದಾರೆ ಎನ್ನಲಾಗಿದೆ. ಇತ್ತ ಪತಿ ಸಾಯುತ್ತಿದ್ದಂತೆ ಪಕ್ಕದಲ್ಲಿ ಇರುವ ಸಂಬಂಧಿಕರ ಮನೆಗೆ ಕರೆ ಮಾಡಿ ಸ್ವತಃ ಪ್ರತಿಮಾಳೇ ವಿಚಾರ ತಿಳಿಸಿದ್ದಾಳೆ.

ದಿನಕ್ಕೊಂದು ರೋಚಕ ತಿರುವು

## ಬಿಸಿ ಊಟಕ್ಕಾಗಿ ಮಕ್ಕಳು ಕಿಲೋಮಿಟರ್ ಗಟ್ಟಲೆ ನಡಿಯಬೇಕು

• ಉದಯವಾಹಿನಿ, ವಡಗೇರಾ

ತಾಲ್ಲೂಕಿನ ಬೆಂಡೆಬೆಂಬಳಿ ಗ್ರಾಮದ ಡಾ. ಬಿ. ಆರ್ . ಅಂಬೇಡ್ಕರ್ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳು ಬಿಸಿ ಊಟಕ್ಕಾಗಿ ದಿನನಿತ್ಯ ಕಿಲೋಮಿಟರ್ ಗಟ್ಟಲೆ ಕೈಯಲ್ಲಿ ತಟ್ಟ ಹಿಡಿದುಕೊಂಡು ನಡೆಯಬೇಕು ಇದಕ್ಕೆ ಪ್ರಮುಖ ಕಾರಣ ಅಧಿಕಾರಿಗಳ ನಿರ್ಲಕ್ಷ್ಯವಾಗಿದೆ. ಎಂದು ಸಾರ್ವಜನಿಕರು ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ದಲಿತರ ಬಡಾವಣೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಶಾಲೆಯು ಒಂದರಿಂದ – ಐದನೇ ತರಗತಿಯವರೆಗೆ ಇದ್ದು ಮಕ್ಕಳ ಸಂಖ್ಯೆ ಆರವತ್ತು ಇದೆ ದಿನನಿತ್ಯ ಮಕ್ಕಳು ಕಿಲೋಮಿಟರ್ ಗಟ್ಟಲೆ ನಡೆದುಕೊಂಡು ಗ್ರಾಮದ ಹೊರಗಿನ ನೂತನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ತೇರಳಿ ಅಲ್ಲಿ ಊಟ ಮುಗಿದ ನಂತರ ಮತ್ತೆ ನಡೆದುಕೊಂಡೆ ಶಾಲೆಗೆ ಬರಬೇಕು ಇದರಿಂದ ಸಮಯದ ಜೊತೆಗೆ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ ಮತ್ತು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಏನಾದರೂ ಅನಾಹುತ ಆದರೆ ಯಾರು ಜವಾಬ್ದಾರಿ ಎಂಬುವುದು ಪಾಲಕರ ಪ್ರಶ್ನೆ ಈ ಕಾರಣದಿಂದ ಕೆಲವು ಮಕ್ಕಳನ್ನು ಪಾಲಕರು ಶಾಲೆ ಬಿಡಿಸಿದ್ದಾರೆ. ಇಲ್ಲಿಯೇ ಬಿಸಿ ಊಟ ಆರಂಭಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಪಾಲಕರು ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ದೂರಿದ್ದಾರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಈ ಶಾಲೆಗೆ ಭೇಟಿ ನೀಡಿ ಇಲ್ಲಿಯೇ ಬಿಸಿ ಊಟ ಆರಂಭಿಸಲು ಕ್ರಮ ಕೈಗೊಳ್ಳುವಂತೆ ಉದಯ ವಾಹಿನಿ ಆಶೆಯವಾಗಿದೆ.


ಉದಯವಾಹಿನಿ ಚಿತ್ರ

ಸಾರ್ವಜನಿಕರು ಅಧಿಕಾರಿಗಳಿಗೆ ಹಿಡಿಶಾಪ

## ಗ್ರಾಮ ಆಡಳಿತಾಧಿಕಾರಿ ಪರೀಕ್ಷೆ ಯಶಸ್ವಿ: ಕಟ್ಟುನಿಟ್ಟಿನ ತಪಾಸಣೆ

• ಉದಯವಾಹಿನಿ, ಚಿಂಚೋಳಿ

ಪಟ್ಟಣದಲ್ಲಿ ನಾಲ್ಕು ಕೇಂದ್ರಗಳಲ್ಲಿ ಗ್ರಾಮ ಆಡಳಿತಾಧಿಕಾರಿ ಪರೀಕ್ಷೆ ಯಶಸ್ವಿಯಾಗಿ ನಡೆದವು ಒಟ್ಟಾರೆ 1292 ವಿದ್ಯಾರ್ಥಿಗಳಲ್ಲಿ 1166 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೆ 126 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಮಲ್ಲಿಕಾರ್ಜುನ ಪಾಲಾಮೋರ್ ತಿಳಿಸಿದ್ದಾರೆ.

ಪಟ್ಟಣದಲ್ಲಿ ಯಶಸ್ಸಿಯಾಗಿ ನಡೆದ ಪರೀಕ್ಷಾ ಕೇಂದ್ರಗಳು ಸರಕಾರಿ ಪದವಿ ಪೂರ್ವ ಕಾಲೇಜು,ಸಿ.ಬಿ.ಪಾಟೀಲ ಕಾಲೇಜು, ಸರಕಾರಿ ಪ್ರಥಮ ದರ್ಜೆ ಕಾಲೇಜು,ವೀರೇಂದ್ರ ಪಾಟೀಲ ಕಾಲೇಜುಗಳಲ್ಲಿ ಪರೀಕ್ಷೆ ನಡೆದವು.

ದೂರದ ಪಟ್ಟಣ ಗ್ರಾಮಗಳಿಂದ ಬೆಳಿಗ್ಗೆಯಿಂದಲೇ ವಿದ್ಯಾರ್ಥಿಗಳ ಜೋತೆ ಪಾಲಕರು ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದರು,ಡಿವೈಎಸ್ಪಿ ಸಂಗಮನಾಥ ಹಿರೇಮಠ ಆದೇಶದಂತೆ ಸಿಪಿಐ ಕಪಿಲದೇವ ನೇತೃತ್ವದಲ್ಲಿ ಪಿಎಸ್ಐ ಗಂಗಮ್ಮಾ ಸಮ್ಮುಖದಲ್ಲಿ ಪೋಲಿಸ್ ಇಲಾಖೆಯವರು ಬಿಗಿಬಂದೋಬಸ್ತ್ ಜೋತೆಗೆ ಕಟ್ಟುನಿಟ್ಟಾದ ತಪಾಸಣೆ ನಡೆಸಿದರು.

ಕಿವಿಯಲ್ಲಿ ಬ್ಲೂಟೂತ್ ಡಿವೈಸ್ ಪತ್ತೆ ಹಚ್ಚಲು ಇ.ಎನ್.ಟಿ ಡಾಕ್ಟರ್ ಹಾಜರಾಗಿ ವಿದ್ಯಾರ್ಥಿಗಳಿಗೆ ಪರಿಶೀಲಿಸಿದರು,ಪರೀಕ್ಷಾ ಕೇಂದ್ರದಲ್ಲಿ ಪೂರ್ಣ ತೋಳಿನ ಶರ್ಟ್ ಧರಿಸಿ ಬಂದ ವಿದ್ಯಾರ್ಥಿಗಳಿಗೆ ಅನುಮತಿ ಇಲ್ಲದ ಕಾರಣ ಗೇಟಿನಲ್ಲೇ ವಿದ್ಯಾರ್ಥಿಗಳು ಶರ್ಟ್ ಅನ್ನು ಕತ್ತರಿಸಿಕೊಂಡು ಪರೀಕ್ಷೆ ಕೋಣೆಗೆ ತೆರಳಿದರು. ವಿದ್ಯಾರ್ಥಿನಿಯರು ಕಿವಿಯೋಲೆ,ಮೂಗೋಲೆ ಧರಿಸಿದ ಬಂದ ಮಹಿಳಾ ಅಭ್ಯರ್ಥಿಗಳು ಗೇಟಿನ ಹೊರಗಡೆ ಅವುಗಳನ್ನು ತೆಗೆದು ಕೇಂದ್ರ ಪ್ರವೇಶಿಸುವುದು ಕಂಡು ಬಂತು ಪರೀಕ್ಷೆ ಯಶಶ್ವಿಯಾಗಿ ನಡೆದವು.

ಪರೀಕ್ಷಾ ಕೇಂದ್ರಕ್ಕೆ ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್,ಕ್ಷೇತ್ರ ಶಿಕ್ಷಣಾಧಿಕಾರಿ ಲಕ್ಷ್ಮಯ್ಯ ಭೇಟಿ ನೀಡಿ ಪರಿಶೀಲಿಸಿದರು, ನಾಲ್ಕನೇ ಶನಿವಾರ ಇರುವುದರಿಂದ ಸರ್ಕಾರಿ ಕಚೇರಿಗಳು ಬಂದ್ ಇರುವ ಪ್ರಯುಕ್ತ ಬಹುತೇಕ ಹೋಟಲ್ ಗಳು ಬಂದ್ ಇದ್ದವು ವಿದ್ಯಾರ್ಥಿಗಳ ಪಾಲಕರು ಊಟ ತಿಂಡಿಗಾಗಿ ಪರದಾಡಿದ್ದು ಕಂಡುಬಂದರೆ ಮತ್ತೊಂದೆಡೆ ಕಣ್ಣಿಗೆ ಕಾಣುವ ಕೆಲವೊಂದು ಹೋಟಲ್ ಅಂಗಡಿಗಳು ಫುಲ್ ಕಾಣುತ್ತಿದ್ದವು.


ಉದಯವಾಹಿನಿ ಚಿತ್ರ

## ರಸ್ತೆ ದುರಸ್ಥಿಗೆ ಅಧಿಕಾರಿಗಳ ಕುಂಟು ನೆಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮುಧೋಳ

ಗ್ರಾಮದಲ್ಲಿನ ಬಸ್ ನಿಲ್ದಾಣದಿಂದ ಗ್ರಾಮ ಪಂಚಾಯಿತಿ ಕಚೇರಿವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟಿರುವ ಪರಿಣಾಮ ಗ್ರಾಮಸ್ಥರು ನಿತ್ಯ ಹದಗೆಟ್ಟ ರಸ್ತೆಯಲ್ಲಿ ಸರ್ಕಸ್ ಮಾಡುತ್ತ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತಾಲ್ಲೂಕಿನ ಗಡಿಗ್ರಾಮ ಹಲಗಲಿಯಲ್ಲಿನ ಮುಖ್ಯ ರಸ್ತೆ ಕಿತ್ತುಹೋಗಿ ದಶಕಗಳು ಸಮೀಪಿಸುತ್ತ ಬಂದಿದ್ದರೂ ಸ್ಥಳೀಯ ಆಡಳಿತಾಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ರಸ್ತೆ ದುರಸ್ತೆ ಕಾಣದೆ ಗ್ರಾಮಸ್ಥರಿಗೆ ನಿತ್ಯ ನರಕದರ್ಶನವಾಗುತ್ತಿದೆ. ಗ್ರಾಮದ ಆಡಳಿತ ಶಕ್ತಿ ಕೇಂದ್ರವಾಗಿರುವ ಗ್ರಾಮ ಪಂಚಾಯಿತಿಗೆ ಬಸ್ ನಿಲ್ದಾಣದಿಂದ ಸಂಪರ್ಕ ಕಲ್ಪಿಸುವ ರಸ್ತೆ ಕಿತ್ತುಹೋಗಿದೆ. ಆದರೆ ದಿನನಿತ್ಯ ಇದೇ ರಸ್ತೆಯಲ್ಲಿ ಓಡಾಡುವ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಹಾಗೂ ಅಧಿಕಾರಿ ವರ್ಗ ಮಾತ್ರ ರಸ್ತೆ ದುರಸ್ತಿಗೆ ಮುಂದಾಗದಿರುವುದು ಗ್ರಾಮಸ್ಥರ ಅಸಮಾಧಾನಕ್ಕೆ ಕಾರಣವಾಗಿದೆ.

**ಮಳೆಯಾದರೆ ಕೆಸರುಮಯ:** ಒಂದು ನೂರು ಮೀಟರ್ ಉದ್ದದ ರಸ್ತೆ ಕೆಮ್ಮಣ್ಣಿನಿಂದ ಕೂಡಿದ್ದು, ತುಂತುರು ಮಳೆಯಾದರೂ ಸಹ ರಸ್ತೆಯೆಲ್ಲ ಕೆಸರಿನ ಗದ್ದೆಯಂತಾಗುತ್ತದೆ. ಗ್ರಾಮದಿಂದ ಬಸ್ ನಿಲ್ದಾಣಕ್ಕೆ ಆಗಮಿಸುವ ಸಾರ್ವಜನಿಕರು, ಶಾಲೆ ಕಾಲೇಜು ವಿದ್ಯಾರ್ಥಿಗಳು, ಜಮೀನು ಕೆಲಸಕ್ಕೆ ತೆರಳುವ ಕೃಷಿ ಕೂಲಿ ಕಾರ್ಮಿಕರು ಹಾಗೂ ರೈತರು ಇದೇ ಮಾರ್ಗದಲ್ಲಿ ಓಡಾಡಬೇಕು ಅಪ್ಪಿತಪ್ಪಿ ಆಯತಪ್ಪಿ ಬಿದ್ದರೆ ಮೈಯಲ್ಲ ಕೆಸರುಮಯವಾಗುವುದು ಖಚಿತ. ಶಾಲಾ ವಿದ್ಯಾರ್ಥಿಗಳು ರಸ್ತೆ ಮೇಲೆ ಜಾಗರೂಕತೆಯಿಂದ ಓಡಾಡಬೇಕಿದೆ. ಗ್ರಾಮದ ಪ್ರಮುಖ ರಸ್ತೆ ಹದಗೆಟ್ಟಿರುವುದರಿಂದ ಜನರ ಓಡಾಟಕ್ಕೆ ತುಂಬಾ ತೊಂದರೆಯುಂಟಾಗುತ್ತಿದ್ದು, ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ಹಿರೇಗುಂಟನೂರು: ವಿಶ್ವ ಪಾರ್ಶ್ವವಾಯು ದಿನಾಚರಣೆ

• ಉದಯವಾಹಿನಿ, ಚಿತ್ರದುರ್ಗ

ಈಗ ಛಳಿಗಾಲ ಪ್ರಾರಂಭವಾಗುತ್ತಿದ್ದು ಈ ವೇಳೆಯಲ್ಲಿ ಅನೇಕ ಜನರು ಪಾಶ್ವವಾಯುವಿಗೆ ತುತ್ತಾಗುತ್ತಾರೆ ಅದಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷದ ಅಕ್ಟೋಬರ್ 29ರಂದು ವಿಶ್ವ ಪಾಶ್ವವಾಯು ದಿನಾಚರಣೆ ಹಮ್ಮಿಕೊಳ್ಳಲಾಗುತ್ತದೆ. ಪಾರ್ಶ್ವವಾಯುಯಿಂದ ಸಾವನ್ನಪ್ಪುವರ ಸಂಖ್ಯೆ ಭಾರತ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಸಾಗಿದೆ ಮೊದಲೆಲ್ಲ 50 ವರ್ಷ ಮೇಲ್ಪಟ್ಟ ವ್ಯಕ್ತಿಗಳಲ್ಲಿ ಪಾರ್ಶ್ವವಾಯು ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತಿತ್ತು ಇದೀಗ ಯುವ ಜನಾಂಗದಲ್ಲಿಯೂ ಪಾರ್ಶ್ವವಾಯು ರೋಗ ಕಂಡು ಬರುತ್ತಿರುವುದು ನಿಜಕ್ಕೂ ಸದೃಢ ಭಾರತ ಕಲ್ಪನೆಗೆ ಮಾರಕವಾಗಿ ಪರಿಣಮಿಸಿದೆ ಇದಕ್ಕೆ ಇತ್ತೀಚಿನ ಅತೀ ಒತ್ತಡದ ಜೀವನ ಕಾರಣ. ಮನುಷ್ಯನನ್ನು ಹಾಸಿಗೆ ಹಿಡಿಸುವ ಈ ಮಾರಕ ಪಾಶ್ವವಾಯು ರೋಗ ಬರದಂತೆ ತಡೆಯಲು ಪ್ರತಿದಿನದ ಯೋಗಾಭ್ಯಾಸ ಸೂಕ್ತ ಪರಿಹಾರವಾಗಿದೆ ಎಂದು ಯೋಗಗುರು ರವಿ ಅಂಬೇಕರ್ ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ವ ಪಾಶ್ವವಾಯು ದಿನಾಚರಣೆ ಅಂಗವಾಗಿ ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ 8ವರ ಸಹಯೋಗದೊಂದಿಗೆ ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಸೋಮವಾರ ಹಿರೇಗುಂಟನೂರು ಹಾಗೂ ಹಳಿಯೂರು ಗ್ರಾಮಗಳಲ್ಲಿ ಸಾರ್ವಜನಿಕರಿಗಾಗಿ ಹಮ್ಮಿಕೊಳ್ಳಲಾಗಿದ್ದ ಪಾಶ್ವವಾಯು ತಡೆಯಲು ಪ್ರತಿದಿನ ಮಾಡಬೇಕಾಗ ಯೋಗಭ್ಯಾಸ ಹಾಗೂ ಪ್ರಾಣಾಯಾಮಗಳ ತರಬೇತಿ ಕಾರ್ಯಕ್ರಮದಲ್ಲಿ ಯೋಗ ತರಬೇತಿ ನೀಡಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಂಗನವಾಡಿ ಕೇಂದ್ರದ ಶಿಕ್ಷಕಿಯರಾದ ಹಿರೇಗುಂಟನೂರು ಲಕ್ಷ್ಮಿದೇವಿ, ಪಲ್ಲವಿ, ಹಳಿಯೂರು ಶಶಿಕಲಾ, ಹಳಿಯೂರು ಶಾಲಾ ಮುಖ್ಯ ಶಿಕ್ಷಕ ಮುಸ್ತಫಾ, ಶೇಖರಪ್ಪ, ಸ್ತ್ರೀ ಸಂಘದ ಸದಸ್ಯರಾದ ಮಮತ ನಿರ್ಮಲ ಭೂಮಿಕ ಅಂಗನವಾಡಿ ಸಹಾಯಕಿ ಮಂಜಮ್ಮ ಹಾಗೂ ಗ್ರಾಮಸ್ಥರು ಯೋಗ ತರಬೇತಿ ಪಡೆದರು.


ಉದಯವಾಹಿನಿ ಚಿತ್ರ

ಪ್ರತೀ ವರ್ಷ ಅಕ್ಟೋಬರ್ 29ರಂದು ವಿಶ್ವ ಪಾರ್ಶ್ವವಾಯು (ಸ್ಟ್ರೋಕ್) ದಿನಾಚರಣೆ ಎಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ದಿನವನ್ನು ಆಚರಿಸುವ ಮೂಲ ಉದ್ದೇಶ ಜನರಲ್ಲಿ ಜಾಗೃತಿ, ಅರಿವು ಮೂಡಿಸುವುದು. ನಮ್ಮ ಪ್ರಪಂಚದಾದ್ಯಂತ, ನಾವು ಗಮನಿಸಿದ ಹಾಗೆ ಪ್ರತೀ ನಾಲ್ವರಲ್ಲಿ ಒಬ್ಬರಿಗೆ ಈ ಸಮಸ್ಯೆ ಅವರ ಜೀವಮಾನದಲ್ಲಿ ಎದುರಾಗುತ್ತಿರುವ ಬಹು ದೊಡ್ಡ ಸಮಸ್ಯೆ. ಯೋಗ, ಧ್ಯಾನ, ವ್ಯಾಯಾಮ ಅಗತ್ಯ. ಜತೆಗೆ ಕೊಬ್ಬಿನಾಂಶ ಕಡಿಮೆ ಮಾಡಿಕೊಳ್ಳಬೇಕು. ಮಧುಮೇಹ ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಬೇಕು. ನಿತ್ಯ ನಿಯಮಿತವಾಗಿ ವಾಕಿಂಗ್ ಮಾಡುವುದು ಮತ್ತು ಸಮರ್ಪಕವಾಗಿ ಒತ್ತಡ ನಿರ್ವಹಿಸುವುದು ಅಗತ್ಯ. ದುಶ್ಚಟಗಳಿಂದ ದೂರ ಇರಬೇಕು. ಜತೆಗೆ ಮೀನು, ರಾಗಿ ಮುದ್ದೆ, ಚಪಾತಿ, ಹಣ್ಣು, ತರಕಾರಿ, ಪೋಷಕಾಂಶ ಭರಿತ ಆಹಾರವನ್ನು ವೈದ್ಯರ ಸಲಹೆ ಪಡೆದು ಸೇವಿಸಬೇಕು -ರವಿ ಅಂಬೇಕರ್, ಯೋಗಗುರು

## ರಸ್ತೆ ಕಾಂಕ್ರೀಟ್ ಕಾಮಗಾರಿ ಆರಂಭ

• ಉದಯವಾಹಿನಿ, ಮಲ್ಲಿಕಟ್ಟೆ

ಬಂಟ್ಸ್ ಹಾಸ್ಟೆಲ್ ಕಡೆಯಿಂದ ಮಲ್ಲಿಕಟ್ಟೆಗೆ ಸಾಗುವ ರಸ್ತೆಯ ಸಿಟಿ ಆಸ್ಪತ್ರೆ ಜಂಕ್ಷನ್‌ನಲ್ಲಿ ಒಳಚರಂಡಿ ಕಾಮಗಾರಿಗಾಗಿ ಅಗೆದು ಹಾಕಿದ್ದ ರಸ್ತೆಗೆ ಮತ್ತೆ ಕಾಂಕ್ರೀಟ್ ಹಾಕುವ ಕಾಮಗಾರಿ ಆರಂಭವಾಗಿದೆ.


ಉದಯವಾಹಿನಿ ಚಿತ್ರ

ಕಾಮಗಾರಿ ಮುಗಿದು ವರ್ಷ ಕಳೆದರೂ ರಸ್ತೆಯನ್ನು ಸಮರ್ಪಕ ವಾಗಿ ದುರಸ್ತಿ ಮಾಡದೆ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುವ ಕುರಿತಂತೆ ಅ.23ರಂದು 'ಒಳಚರಂಡಿಗೆ ಅಗೆದ ರಸ್ತೆ ಇನ್ನೂ ದುರಸ್ತಿ ಆಗಿಲ್ಲ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಲಾಗಿತ್ತು. ವರದಿಯಿಂದ ಎಚ್ಚೆತ್ತ ಸ್ಥಳೀಯ ಕಾರ್ಪೋರೇಟರ್, ಮನಪಾ ಅಧಿಕಾರಿಗಳು ಕಾಮಗಾರಿ ಕೈಗೆತ್ತಿಕೊಂಡಿದ್ದಾರೆ.

ಕಾಮಗಾರಿ ವೇಳೆ ಬಂಟ್ಸ್ ಹಾಸ್ಟೆಲ್ – ಮಲ್ಲಿಕಟ್ಟೆ ರಸ್ತೆಯನ್ನು ಎರಡೂ ಪಥದಲ್ಲಿ ಅಡ್ಡಲಾಗಿ ಅಗೆದು ಹಾಕಲಾಗಿತ್ತು. ಇದೀಗ ಕಾಮಗಾರಿ ಪೂರ್ಣಗೊಂಡು ಸುಮಾರು ಒಂದು ವರ್ಷ ಆಗುತ್ತಾ ಬಂದರೂ ರಸ್ತೆಯನ್ನು ದುರಸ್ತಿ ಮಾಡಿರಲಿಲ್ಲ. ಮಳೆಗಾಲಕ್ಕೆ ಮುನ್ನ ಒಂದು ಬಾರಿ ಡಾಮರು ತೇಪೆ ಹಾಕಲಾಯಿತಾದರೂ ಮುಂಗಾರು ಮಳೆಯ ಅಬ್ಬರಕ್ಕೆ ಕೆಲವೇ ದಿನಗಳಲ್ಲಿ ಎದ್ದು ಹೋಗಿದೆ. ಬಳಿಕ ದೊಡ್ಡ ಗುಂಡಿಗಳು ಉಂಟಾಗಿತ್ತು. ಅನಂತರ ಗುಂಡಿಗಳಿಗೆ ಜಲ್ಲಿ ಹುಡಿ ಸಿಮೆಂಟ್ ಮಿಶ್ರಣ ತಂದು ಸುರಿಯಲಾಯಿತು. ಆದರೆ ಇದು ಕೂಡ ನೀರಿನೊಂದಿಗೆ ಕೊಚ್ಚಿ ಹೋಗಿತ್ತು. ಕೊನೆಗೂ ರಸ್ತೆಯ ದುರಸ್ತಿ ಕಾಮಗಾರಿ ಆರಂಭವಾಗಿರುವುದಕ್ಕೆ ವಾಹನ ಸವಾರರು, ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದ್ದಾರೆ.

## ಹೆಚ್ಚಾಯ್ತು ಕಾಟ: ಕಾಡಾನೆಗಳ ಸೆರೆಗೆ ಮುಂದಾದ ಅರಣ್ಯ ಇಲಾಖೆ

• ಉದಯವಾಹಿನಿ, ಶಿವಮೊಗ್ಗ

ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ. ಫಸಲಿಗೆ ಬಂದ ಬೆಳೆಗಳನ್ನು ಕಾಡಾನೆಗಳು ಹಾಳು ಮಾಡುತ್ತಿವೆ. ಇದೀಗ ಅರಣ್ಯ ಇಲಾಖೆಯು ಕಾಡಾನೆಗಳ ಸೆರೆಗೆ ಮುಂದಾಗಿದೆ. ಸಕ್ರೈಬೈಲು ಆನೆ ಬಿಡಾರದಿಂದ ಕಾಡಾನೆ ಸೆರೆಗೆ ಆನೆಗಳು ಬಂದಿವೆ. ಎರಡು ಆನೆಗಳ ಮೂಲಕ ಅರಣ್ಯ ಇಲಾಖೆ ಕಾಡಾನೆ ಸೆರೆಗೆ ಮುಂದಾಗಿದೆ. ಶಿವಮೊಗ್ಗ ಪುರದಾಳು, ಸಿರಿಗೇರೆ ಭಾಗದಲ್ಲಿ ಕಾಡಾನೆಗಳು ಬೆಳೆ ಹಾನಿ ಮಾಡಿದ್ದವು.

ಕಾಡಾನೆ ಹಾವಳಿ ಖಂಡಿಸಿ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದರು. ಸ್ಥಳೀಯರ ಆಕ್ರೋಶದ ಹಿನ್ನಲೆ ಕಾಡಾನೆ ಸೆರೆಗೆ ಅರಣ್ಯ ಇಲಾಖೆ ಮುಂದಾಗಿದೆ. ಶೆಟ್ಟಿಹಳ್ಳಿ ಅಭಯಾರಣ್ಯದಲ್ಲಿ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿವೆ.

## ದೀಪ ಬೆಳಗಿಸಿ: ಪಟಾಕಿ ಬೇಡ

• ಉದಯವಾಹಿನಿ, ಮುದ್ದೇಬಿಹಾಳ

ಸೌರಮಂಡಲದಲ್ಲಿ ಲಕ್ಷಾಂತರ ಗ್ರಹಗಳು, ನಕ್ಷತ್ರಗಳಿದ್ದರೂ ಮನುಷ್ಯ ವಾಸವಿರುವ ಭೂಮಿ ಇದೊಂದೇ, ಇದನ್ನು ನಾವೇ ನಮ್ಮ ಕೈಯಾರೆ ಸ್ವಯಂಕೃತ ತಪ್ಪುಗಳಿಂದ ಹಾಳು ಮಾಡುವುದು ಬೇಡ ಎಂದು ಸಂತ ಕನಕದಾಸ ಶಾಲೆಯ ಕಾರ್ಯದರ್ಶಿ ಬಿ.ಎಸ್. ಮೇಟಿ ಹೇಳಿದರು. ಅವರು ಪಟ್ಟಣದ ಸಂತ ಕನಕದಾಸ ಶಾಲೆಯಲ್ಲಿ ಶನಿವಾರ ಹಸಿರು ತೋರಣ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಪಟಾಕಿ ಬೇಡ, ದೀಪ ಬೆಳಗೋಣ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಹಸಿರು ತೋರಣ ಬಳಗದ ಸದಸ್ಯರು ಪರಿಸರ ಸಂರಕ್ಷಣೆ ಕುರಿತು ನಿರಂತರವಾಗಿ ಜನರಿಗೆ ಜಾಗೃತಿ ಮೂಡಿಸುತ್ತಿದ್ದಾರೆ ಎಂದ ಅವರು, ಪಟಾಕಿ ಹೊಡೆಯುವುದಿಲ್ಲ ಅದರ ಬದಲಿಗೆ ದೀಪಗಳನ್ನು ಹಚ್ಚುತ್ತೇವೆ ಎಂದು ಮಕ್ಕಳಿಗೆ ಪ್ರತಿಜ್ಞೆ ವಿಧಿ ಬೋಧಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ವೀರೇಶ ಇಟಗಿ, ದೊಡ್ಡ ಶಬ್ದ ಮಾಡುವ ಪಟಾಕಿಗಳಿಂದ ಮನುಷ್ಯನಿಗೆ, ಪ್ರಾಣಿ, ಪಕ್ಷಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಪಟಾಕಿಗಳಿಂದ ಹೊರಹೊಮ್ಮುವ ವಿಷಾನಿಲಗಳು ಶ್ವಾಸಕೋಶದ ರೋಗಗಳು ಮತ್ತು ಕ್ಯಾನ್ಸರನಂತಹ ಗಂಭೀರ ಖಾಯಿಲೆಗಳು ಬರುತ್ತವೆ. ಜೊತೆಗೆ ಮಕ್ಕಳು ಪಟಾಕಿ ಹೊಡೆಯುವ ಸಮಯದಲ್ಲಿ ಕೈ, ಕಣ್ಣು ಸೇರಿದಂತೆ ಜೀವ ಕಳೆದುಕೊಂಡ ಘಟನೆಗಳನ್ನು ನೋಡುತ್ತಿದ್ದೇವೆ. ಇದು ತಪ್ಪಬೇಕೆಂದರೆ ಪಟಾಕಿ ಹೊಡೆಯುವ ಬಗ್ಗೆ, ಅದರ ಅಪಾಯಗಳ ಬಗ್ಗೆ ಅರಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಕುರುಬರ ಸಂಘದ ನಿರ್ದೇಶಕ ನಾಗಪ್ಪ ರೂಢಗಿ, ಹಸಿರು ತೋರಣ ಗೆಳೆಯರ ಬಳಗದ ಮಾಜಿ ಅಧ್ಯಕ್ಷರಾದ ನಾಗಭೂಷಣ ನಾವದಗಿ, ಅಶೋಕ ರೇವಡಿ, ರಾಜಶೇಖರ ಕಲ್ಯಾಣಮಠ, ರವಿ ಗೂಳಿ, ಕಾರ್ಯದರ್ಶಿ ಬಿ.ಎಚ್.ಬಳಬಟ್ಟಿ, ಉಪಾಧ್ಯಕ್ಷ ಬಸವರಾಜ ಬಿಜ್ಜೂರ, ವೀರಶೈವ ಮಹಾಸಭಾ ಅಧ್ಯಕ್ಷ ವೆಂಕನಗೌಡ ಪಾಟೀಲ, ಸದಸ್ಯರಾದ ಸುರೇಶ ಕಲಾಲ, ಸೋಮಶೇಖರ ಚೀರಲದಿನ್ನಿ, ಪ್ರೌಢಶಾಲೆಯ ಮುಖ್ಯ ಗುರು ಬಿ.ಎಸ್.ಫಣೇದಕಟ್ಟಿ, ಶಿಕ್ಷಕರಾದ ಆರ್.ಜಿ.ಮೇಣಸಗಿ, ಎಸ್.ಎನ್.ಸಜ್ಜನ, ಆರ್.ವೈ.ಪಾಟೀಲ, ಆರ್.ಎಸ್.ವಾಲಿಕಾರ, ಲಕ್ಷ್ಮೀ ಗುಬಚಿ, ಲತಾ ಮೇಟಿ, ಬಸಮ್ಮ ಬರದೇನಾಳ, ಜಿ.ಎಂ.ಹುಲಗಣ್ಣಿ, ಮತ್ತಿತರರು ಇದ್ದರು. ಮಾಣಿಕ್ಯಮ್ಮ ತಡಸದ ಪ್ರಾರ್ಥಿಸಿದರು. ಮುಖ್ಯ ಗುರುಗಳಾದ ಎಂ.ಎನ್.ಯರಝರಿ ಸ್ವಾಗತಿಸಿದರು. ಎಂ.ಸಿ.ಕಬಾಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೋಪಾಲ ಹೂಗಾರ ನಿರೂಪಿಸಿ, ವಂದಿಸಿದರು.


ಉದಯವಾಹಿನಿ ಚಿತ್ರ

ಪಟಾಕಿ ಸಿಡಿಸುವುದು ಎಂದರೆ ಶ್ರಮಪಟ್ಟು ದುಡಿದ ಲಕ್ಷಾಂತರ ಹಣಕ್ಕೆ ಬೆಂಕಿ ಹಚ್ಚುವುದಕ್ಕೆ ಸಮ. ಈ ಭೂಮಿಯ ಮೇಲೆ ಬದುಕುವ ಹಕ್ಕು ನಮಗಿರುವಷ್ಟೇ ಪ್ರಾಣಿ, ಪಕ್ಷಿಗಳಿಗೂ ಇದೆ. ನಮ್ಮ ಆಶೆ ಆಕಾಂಕ್ಷೆಗಳನ್ನು ನಿಯಂತ್ರಿಸುವ ಕೆಲಸ ನಡೆಯಬೇಕು

-ಮಹಾಬಲೇಶ್ವರ ಗಡೇದ,
ಹಸಿರು ತೋರಣ ಬಳಗದ ಸಂಚಾಲಕ

# ಮಾದಿಗ ಸಮಾಜದ ಒಗ್ಗಟ್ಟು ನೋಡಿ, ಬೆಂಕಿ ಹಚ್ಚುವ ಕೆಲಸ ಬಿಡಲಿ

### ಮಾದಿಗ ಸಮಾಜಕ್ಕೆ ದಲಿತ ಮುಖಂಡ ವಿಠ್ಠಲ ದೊಡ್ಮನಿಯಿಂದ ನಾಟಕೀಯ ಹೋರಾಟ: ಆಕಾಶ ಕೊಳ್ಳೂರ

• ಉದಯವಾಹಿನಿ, ಚಿಂಚೋಳಿ

ಮಾದಿಗ ಸಮಾಜಕ್ಕೆ ದಲಿತ ಮುಖಂಡ ವಿಠ್ಠಲ ದೊಡ್ಮನಿರವರು ನಾಟಕೀಯ ಹೋರಾಟ ಮಾಡುತ್ತಿದ್ದಾರೆ ಎಂದು ಹೇಳುವ ಮೂಲಕ ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದು ಅವರು ಬಿಡಲಿ ಅವರ ವಯಸ್ಸಾಗಿ ಬುದ್ಧಿ ಭ್ರಮೆಯಾಗಿದೆ ಎಂದು ಮಾದಿಗ ಸಮಾಜದ ಮುಖಂಡ ಆಕಾಶ ಕೊಳ್ಳೂರ ಮತ್ತು ಮಲ್ಲು ಕೊಡಂಬಲ್ ವಿಠ್ಠಲ ದೊಡ್ಮನಿಗೆ ತಿರುಗೇಟು ನೀಡಿದ್ದಾರೆ.


ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು ಎಡಗೈ ಸಮಾಜಕ್ಕೆ ಮತ್ತು ಬಲಗೈ ಸಮಾಜಕ್ಕೆ ಬೆಂಕಿ ಹಚ್ಚುವ ಕೆಲಸ ದಲಿತ ಮುಖಂಡ ವಿಠ್ಠಲ ದೊಡ್ಮನಿ ಮಾಡುತ್ತಿದ್ದಾರೆ.

ಇಂತಹ ನೀಚತನದ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ,ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದು ಅವರ ಹೇಳಿಕೆಯಿಂದ ಸಮಾಜದಲ್ಲಿ ಮುಂದೆ ಏನಾದರೂ ಘಟನೆಗಳು ನಡೆದರೆ ನೇರಹೋಣೆ ಅವರೆ ಇರುತ್ತಾರೆ,ದಲಿತರಲ್ಲಿ ಬರುವ ಎಲ್ಲಾ ಜಾತಿ ಜನಾಂಗದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಲು ಹಾವನೂರ ಆಯೋಗ ವರದಿ,ರಾಮಚಂದ್ರ ಕಮೀಷನ್ ಆಯೋಗ,ಧರ್ಮಸಿಂಗ್ ನೇತೃತ್ವದ ಸರ್ವೆ ಮಾಡಿದ ವರದಿ ತಯ್ಯಾರಿಸಲಾಗಿದೆ.

ಈವೆಲ್ಲವೂ ವರದಿಯನ್ನು ಸರಿಯಾಗಿ ತಿಳಿದುಕೊಳ್ಳದೇ ವಿಠ್ಠಲ ದೊಡ್ಡಮನಿ ವಿರೋಧ ಮಾಡುತ್ತಿದ್ದಾರೆ,ಅವರ ಹೇಳಿಕೆಯನ್ನುವಮಾದಿಗ ಸಮಾಜ ಖಂಡಿಸುತ್ತದೆ.

ಈಗಾಗಲೇ ಮಾದಿಗ ಸಮಾಜ ಆರ್ಥಿಕವಾಗಿ, ಸಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿದೆ ಒಳಮೀಸಲಾತಿ ಜಾರಿಗೆ ಮಾಡಿದರೆ ಮಾದಿಗ ಸಮಾಜಕ್ಕೆ ಕೂಡ ನ್ಯಾಯ ದೊರಕಿದಂತೆ ಆಗುತ್ತದೆ ಎಂದರು.

ಈ ಸಂದರ್ಭದಲ್ಲಿ ಪ್ರದೀಪ ಮೇತ್ರಿ, ಅನಿರೋಧ ಕಟ್ಟಿಮನಿ, ವಿಜಯಕುಮಾರ, ಪ್ರವೀಣ ಓಂಕಾರ, ಅನೇಕರಿದ್ದರು.


ಉದಯವಾಹಿನಿ ಚಿತ್ರ

ಹಿರಿಯ ಮುಖಂಡರ ಸಭೆ

ಈಗಾಗಲೇ ಅಕ್ಟೋಬರ್ 28ರಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಮಾದಿಗ ಸಮಾಜದ ಹಿರಿಯ ಮುಖಂಡರಿಗೆ ಸಭೆ ಮಾಡಲು ಅಹ್ವಾನ ನೀಡಿದ್ದು ಒಳಮೀಸಲಾತಿಗೆ ಮುಖ್ಯಮಂತ್ರಿಯವರು ಒಪ್ಪಿಕೊಳ್ಳಬಹುದು ಎಂಬುವುದು ನಂಬಿಕೆಯಿದೆ,ಈಗಾಗಲೇ ನ್ಯಾಯಾಲಯ ಆದೇಶ ನೀಡಿದ ಆಯಾ ರಾಜ್ಯ ಸರ್ಕಾರಗಳು ಒಳಮೀಸಲಾತಿ ಜಾರಿಗೆ ಮಾಡಲು ಅರ್ಹರು ಎಂದು ಹೇಳಿದೆ ಅದರ ಅನುಗುಣವಾಗಿ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿ ಮಾಡಬೇಕು -ಆಕಾಶ ಕೊಳ್ಳೂರ

**ಮಾದಿಗ ಸಮಾಜಕ್ಕೆ ಅಪಮಾನ**

ಮಾದಿಗ ಸಮಾಜ ಸತತ 30-35 ವರ್ಷಗಳಿಂದ ಒಳ ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದಾರೆ, ದಲಿತರು 101 ಜಾತಿಗಳು ಇವೆ,ಕೆಲ ದಲಿತ ಸಮುದಾಯಗಳು ಮಿಸಲಾತಿ ಪಡೆಯುತ್ತಿದ್ದಾರೆ, ಅದರಲ್ಲಿ ಸಣ್ಣಜಾತಿ ಅವರು ಒಳ ಮೀಸಲಾತಿಯಿಂದ ವಂಚಿತರಾಗಿದ್ದಾರೆ ವಿಠ್ಠಲ ದೊಡ್ಡಮನಿ ಅವರು ಮಾದಿಗ ಸಮಾಜಕ್ಕೆ ಹಾಗೂ ಜಾತಿಗಣತಿ ಹೆಚ್ಚುಕಮ್ಮಿಯಾಗಿದೆ ಎಂದು ಹೇಳಿಕೆ ನೀಡಿರುವುದು ಮಾದಿಗ ಸಮಾಜಕ್ಕೆ ಅಪಮಾನ ಮಾಡಿದ್ದಾರೆ.

## ಕಣೆ ನೊಣ ಬಾಧೆ ನಿರ್ವಹಣೆ ಕುರಿತು ರೈತರಿಗೆ ಮಾಹಿತಿ

● ರೈತರ ಜಮೀನುಗಳಿಗೆ ಸಹಾಯಕ ಕೃಷಿ ನಿರ್ದೇಶಕರು ಭೇಟಿ

• ಉದಯವಾಹಿನಿ, ಸಿಂಧನೂರು

ಇಂದು ಸಿಂಧನೂರು ತಾಲ್ಲೂಕಿನ ಗೊರಬಾಳ ಹೋಬಳಿಯಲ್ಲಿ ಬರುವ ಹಂಚಿನಾಳ ಕ್ಯಾಂಪ್ (ಶಾಂತಿ ನಗರ) ಜಿ ಸತ್ಯ ನಾರಾಯಣ ಹೊಲದಲ್ಲಿ ಭತ್ತದ ಬೆಳೆಯಲ್ಲಿ ಕಣೆ ನೊಣ ಬಾಧೆ ನಿರ್ವಹಣೆ ಕುರಿತು ರೈತರ ಜಮೀನುಗಳಿಗೆ ಸಹಾಯಕ ಕೃಷಿ ನಿರ್ದೇಶಕರು ಭೇಟಿ ನೀಡಿ ಭತ್ತದ ಬೆಳೆಯಲ್ಲಿ ಕಣೆ ನೊಣ ಬಾಧಯ ನಿರ್ವಹಣೆ ಕುರಿತು ರೈತರಿಗೆ ಮಾಹಿತಿ ನೀಡಿದರು.

ನಂತರ ಮಾತನಾಡಿದ ಕೃಷಿ ನಿರ್ದೇಶಕರು ನೆಜೀರ್ ಹಮ್ಮದ ಅವರು ಕಣೆ ನೊಣವು ಮುಂಗಾರು ಹಂಗಾಮಿನಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಬರುವಂತಹ ಕೀಟವಾಗಿದ್ದು.

ಆದರೆ ಇತ್ತೀಚಿನ 2018 ರಲ್ಲಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಹವಾಮಾನದ ವೈಪರೀತ್ಯದಿಂದ ಸಿಂಧನೂರಿನ ವಿವಿಧ ಭಾಗದಲ್ಲಿ ತಡವಾಗಿ ನಾಟಿ ಮಾಡಿದ ಭತ್ತದಲ್ಲಿ ಈ ಕೀಟದ ಬಾಧೆ ಹೆಚ್ಚಾಗಿ ಶೇ10-15 ಕಂಡು ಬರುತ್ತದೆ ಎಂದು ಹೇಳಿದರು.

ಕೀಟದ ಬಾಧೆಯನ್ನು ನಿವಾರಣೆ ಮಾದಲ ಸಿಸಿ ಮಡಿಯಲ್ಲಿ ಬೀಜೋಪಚಾರ ಮಾಡಲು ಸಂದೇಶವನ್ನು ನೀಡಲಾಗಿದೆ. ಈ ಬೆಳವಣಿಗೆಯ ಹಂತದಲ್ಲಿ ಈ ಬಾಧೆ ಕಂಡು ಬಂದಿದ್ದರಿಂದ ಬೆಳೆಯಲ್ಲಿ ಹರಳು ರೂಪದ ಕೀಟನಾಶಕಗಳಾದ ಕಾರ್ಭೋಫ್ಯೂರಾನ್ 3ಜಿ ಅಥವಾ ಫಿಪ್ರೊನಲ್ 03ಜಿ ಆರ್‌ಗಳಲ್ಲಿ ಯಾವುದಾದರೊಂದು ಎಕರೆಗೆ 10 ಕೆಜಿಯಂತೆ ಜಮೀನಲ್ಲಿ ಬರೆಸುವುದು. ಹಾಗೂ ಕಾರ್ಬೋ ಸಲ್ಫಾನ 25 ಇ ಸಿ /ಡಿಎಸ್ ಪ್ರತಿ ಲೀಟರ್ ನೀರಿಗೆ 2.0 ಮಿ.ಲೀ ಅಥವಾ ಫಿಪ್ರೋನಲ್ 5 ಇ ಸಿ ಪ್ರತಿ ಲೀಟರ್ ನೀರಿಗೆ 1.5 ಮಿಲೀ ಕೀಟನಾಶಕವನ್ನು ಸರಿಪಡಿಸಿ. ಬೆಳೆಯನ್ನು ರಕ್ಷಿಸಿಕೊಳ್ಳಲು ಅಲ್ಲಿದ್ದ ಎಲ್ಲಾ ರೈತನಿಗೆ ಮಾಹಿತಿಯನ್ನು ನೀಡಲಾಯಿತು. ಈ ವೇಳೆ ಗೊರೆಬಾಳ ರೈತ ಸಂಪರ್ಕ ಕೇಂದ್ರ ದ ಕೃಷಿ ಅಧಿಕಾರಿ ಬಸರಡ್ಡಿ ಆತ್ಮ ಯೋಜನೆಯ ಗುರು ಸಿದ್ದಲಿಂಗಯ್ಯ ಮತ್ತು ರೈತ ಸಂಪರ್ಕ ಸಿಬ್ಬಂದಿ ಸೇರಿದಂತೆ ಹಂಚಿನಾಳ ಕ್ಯಾಂಪಿನ ರೈತರು ಇದ್ದರು.


ಉದಯವಾಹಿನಿ ಚಿತ್ರ

ಮುಂಗಾರು ಹಂಗಾಮಿನಲ್ಲಿ ಬರುವಂತಹ ಕೀಟ

# ಸೂರ್ಯಗೆ ಮೃಣಾಲ್ ನಾಯಕಿ



ತೆಲುಗಿನಲ್ಲಿ ಮೃಣಾಲ್ ಠಾಕೂರ್ ನಟಿಸಿದ 3 ಸಿನಿಮಾಗಳು ಬ್ಯಾಕ್ ಟು ಬ್ಯಾಕ್ ಹಿಟ್ ಆಗಿವೆ. ಹಾಗಾಗಿ ಅವರೀಗ ತಮಿಳಿನತ್ತ ಮುಖ ಮಾಡಿದ್ದಾರೆ. ತಮಿಳಿನ ಸ್ಟಾರ್ ನಟ ಸೂರ್ಯ ನಟಿಸಲಿರುವ ಹೊಸ ಚಿತ್ರಕ್ಕೆ ನಾಯಕಿಯಾಗಿ 'ಸೀತಾರಾಮಂ' ನಟಿ ಮೃಣಾಲ್ ಆಯ್ಕೆಯಾಗಿದ್ದಾರೆ ಎನ್ನಲಾದ ಸುದ್ದಿಯೊಂದು ಹರಿದಾಡುತ್ತಿದೆ.

ಸೂರ್ಯ ಅವರ ಮುಂದಿನ ಸಿನಿಮಾ ಫ್ಯಾಂಟಸಿ ಥ್ರಿಲ್ಲರ್ ಶೈಲಿಯಲ್ಲಿ ಮೂಡಿ ಬರುತ್ತಿದೆ. ಈ ಚಿತ್ರವನ್ನು ಆರ್‌ಜೆ ಬಾಲಾಜಿ ಅವರು ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾಗೆ ಮೃಣಾಲ್ ಆಯ್ಕೆ ಆಗಿದ್ದಾರೆ ಎನ್ನಲಾಗಿದೆ. ಇನ್ನೂ ಚಿತ್ರತಂಡದ ಕಡೆಯಿಂದ ಅಧಿಕೃತ ಘೋಷಣೆ ಆಗಬೇಕಿದೆ. ಈ ಹಿಂದೆ ಮೃಣಾಲ್‌ಗೆ 'ಕಂಗುವ' ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತ್ತು. ಆದರೆ ಒಪ್ಪಿಕೊಂಡಿರುವ ಸಿನಿಮಾಗಳಿದ್ದ ಹಿನ್ನೆಲೆ ಡೇಟ್ಸ್ ಹೊಂದಾಣಿಕೆ ಆಗದ ಕಾರಣ ಈ ಚಿತ್ರವನ್ನು ಮೃಣಾಲ್ ಮಿಸ್ ಮಾಡಿಕೊಂಡಿದ್ದರು. ಆ ನಂತರ 'ಕಂಗುವ' ಚಿತ್ರದ ಆಫರ್ ದಿಶಾ ಪಟಾನಿ ಪಾಲಾಯಿತು.

ಸದ್ಯ ಪೂಜಾ ಮೇರಿ ಜಾನ್, ಹೇ ಜವಾನಿ ತೋ ಇಷ್ಕ ಹೋನಾ ಹಿ, ಸನ್ ಆಫ್ ಸರ್ದಾರ್ 2, ತುಮ್ ಓಹ್ ಹೋ ಚಿತ್ರಗಳಲ್ಲಿ ಮೃಣಾಲ್ ನಟಿಸುತ್ತಿದ್ದಾರೆ.

ತಮಿಳಿನತ್ತ ಸೀತಾರಾಮಂ ನಟಿ



# ಸಸ್ಪೆನ್ಸ್ ಥ್ರಿಲ್ಲರ್ ನಾ ನಿನ್ನ ಬಿಡಲಾರೆ ಬಿಡುಗಡೆ ದಿನಾಂಕ ಫಿಕ್ಸ್!

ದಶಕಗಳ ಹಿಂದೆ ಅನಂತ್ ನಾಗ್-ಲಕ್ಷ್ಮೀ ಕಾಂಬಿನೇಷನ್‌ನಲ್ಲಿ ಮೂಡಿ ಬಂದ ಚಿತ್ರ ನಾನಿನ್ನ ಬಿಡಲಾರೆ ಕನ್ನಡ ಸಿನಿರಸಿಕರ ಪಾಲಿಗೆ 'ಎವರ್ ಗ್ರೀನ್' ಸಿನಿಮಾ ಕೂಡಾ. ಇದೀಗ ಅದೇ ಟೈಟಲ್ ನೊಂದಿಗೆ ಹೊಸ ಚಿತ್ರತಂಡವೊಂದು ಪ್ರೇಕ್ಷಕರೆದುರು ಬರುತ್ತಿದೆ. ಈ ಕಾಲಕ್ಕೆ ತಕ್ಕ ಸಸ್ಪೆನ್ಸ್ ಥ್ರಿಲ್ಲರ್ ಕಂಟೆಂಟ್ ಒಳಗೊಂಡು ಹೊಸ ತಂಡ ಹೊಸ ಆಯಾಮದಲ್ಲಿ ಕನ್ನಡ ಪ್ರೇಕ್ಷಕರಿಗೆ ಮನರಂಜನೆ ಒದಗಿಸಲು ಅಣಿಯಾಗುತ್ತಿದೆ. ಟೀಸರ್ ನಿಂದಲೇ ಗಮನ ಸೆಳೆಯುತ್ತಿರುವ ನಾನಿನ್ನ ಬಿಡಲಾರೆ ನವೆಂಬರ್ 29ಕ್ಕೆ ಪ್ರೇಕ್ಷಕರೆದುರಿಗೆ ಬರ್ತಿದೆ. ಲೈಲಾಕ್ ಎಂಟರ್ಟೈನ್ಮೆಂಟ್ ನ ಹೇಮಂತ್ ಈ ಚಿತ್ರವನ್ನು ರಾಜ್ಯದಾದ್ಯಂತ ವಿತರಿಸಲಿದ್ದಾರೆ. ರಿಲೀಸ್ ಡೇಟ್ ಅನೌನ್ಸ್ ಮಾಡುವ ಮೂಲಕ ಟೈಟಲ್, ಪೋಸ್ಟರ್, ಟೀಸರ್‌ನಿಂದಲೇ ಕನ್ನಡ ಸಿನಿಪ್ರಿಯರಲ್ಲಿ ಕೂತೂಹಲ ಮೂಡಿಸಿರುವ ನಾನಿನ್ನ ಬಿಡಲಾರೆ ತಂಡ ಪ್ರಚಾರ ಕಾರ್ಯ ಶುರು ಮಾಡಿಕೊಂಡಿದೆ. ಸದ್ಯದಲ್ಲೇ ಎರಡು ಹಾಡು ಹಾಗೂ ಥಿಯೇಟರಿಕಲ್ ಟ್ರೇಲರ್ ರಿಲೀಸ್ ಮಾಡೋ ಪ್ಲ್ಯಾನ್ ನಡೆಯುತ್ತಿದೆ.

ಅಂಬಾಲಿ ಭಾರತಿ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿದ್ದು ಪಂಚಿ, ಸೀರುಂಡೆ ರಘು, ಕೆ.ಸ್.ಶ್ರೀಧರ್, ಮಹಂತೇಶ್, ಶ್ರೀನಿ ವಾಸ್ ಪ್ರಭು, ಹರಿಣಿ, ಲಕ್ಷ್ಮೀ ಸಿದ್ದಯ್ಯ, ಮಂಜುಳಾರೆಡ್ಡಿ ಮುಖ್ಯಭೂಮಿಕೆಯಲ್ಲಿದ್ದಾರೆ. ಕಮಲ ಉಮಾ ಭಾರತಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಅಂಬಾಲಿ ಭಾರತಿ ನಾಯಕಿಯಾಗಿ ನಟಿಸಿ, ನಿರ್ಮಿಸಿರುವ ನಾ ನಿನ್ನ ಬಿಡಲಾರೆ ಚಿತ್ರವನ್ನು ನವೀನ್ ಜಿ.ಎಸ್. ನಿರ್ದೇಶಿಸಿದ್ದಾರೆ. ವೀರೇಶ್ ಎಸ್.ಛಾಯಾಗ್ರಹಣ, ಎಮ್.ಎಸ್.ತ್ಯಾಗರಾಜು ಸಂಗೀತವಿರುವ ಚಿತ್ರಕ್ಕೆ ದೀಪಕ್ ಜಿ.ಎಸ್. ಸಂಕಲನವಿದೆ.

ಮುಖ್ಯ ಭೂಮಿಕೆಯಲ್ಲಿ ಅಂಬಾಲಿ ಭಾರತಿ



# ದಾಖಲೆ ಬೆಲೆಗೆ 45 ಆಡಿಯೋ ರೈಟ್



ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ 45 ಸಿನಿಮಾ ಈಗಾಗಲೇ ಒಂದಷ್ಟು ಕಾರಣಕ್ಕೆ ಸುದ್ದಿಯಲ್ಲಿದೆ. 45 ಚಿತ್ರದ ಆಡಿಯೋ ರೈಟ್ಸ್ ಅನ್ನು ಪ್ರತಿಷ್ಠಿತ ಆನಂದ್ ಆಡಿಯೋ ಸಂಸ್ಥೆ ಪಡೆದುಕೊಂಡಿದೆ. ಚಿತ್ರದ ನಿರ್ದೇಶಕರೂ ಆಗಿರುವ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರೇ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಭಾರಿ ಮೊತ್ತಕ್ಕೆ ಆಡಿಯೋ ರೈಟ್ಸ್ ಮಾರಾಟವಾಗಿದ್ದು ಸದ್ಯದಲ್ಲೇ ಒಂದೊಂದೆ ಹಾಡುಗಳು ಬಿಡುಗಡೆಯಾಗಲಿದೆ. ಸೂರಜ್ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಶ್ರೀಮತಿ ಉಮಾ ರಮೇಶ್ ರೆಡ್ಡಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗಿರುವ ಈ ಸಿನಿಮಾದಲ್ಲಿ ಶಿವರಾಜ್‌ಕುಮಾರ್, ಉಪೇಂದ್ರ ಮತ್ತು ರಾಜ್ ಬಿ ಶೆಟ್ಟಿ ಮುಖ್ಯಭೂಮಿಕೆಯಲ್ಲಿದ್ದಾರೆ. ಈ ಸಿನಿಮಾದ ಕಥೆಯನ್ನು ಅನಿಮೇಷನ್ ಮೂಲಕವೇ ನಟರ ಮುಂದೆ ತೆರೆದಿಟ್ಟಿದ್ದಾರೆ.

# ಸಿದ್ಧಾರ್ಥ್ ಮಲ್ಹೋತ್ರಾಗೆ ಜಾನ್ವಿ ಕಪೂರ್ ನಾಯಕಿ

ಬಾಲಿವುಡ್ ನಟಿ ಜಾನ್ವಿ ಕಪೂರ್ ಸಿನಿಮಾ ಕೆರಿಯರ್‌ನಲ್ಲಿ ಬಿಗ್ ಸಕ್ಸಸ್ ಸಿಗದೆ ಇದ್ರೂ, ಉತ್ತಮ ಅವಕಾಶಗಳು ಅರಸಿ ಬರುತ್ತಿವೆ. ಇದೀಗ ಸಿದ್ಧಾರ್ಥ್ ಮಲ್ಹೋತ್ರಾಗೆ ಜೋಡಿಯಾಗಿ ನಟಿಸಲು ಜಾನ್ವಿಗೆ ಚಾನ್ಸ್ ಸಿಕ್ಕಿದೆ. ಲವ್ ಕಮ್ ಕಾಮಿಡಿ ಸಿನಿಮಾದಲ್ಲಿ ಸಿದ್ಧಾರ್ಥ್‌ಗೆ ಜಾನ್ವಿ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರಕ್ಕೆ 'ಪರಮ ಸುಂದರಿ' ಎಂಬ ಕ್ಯಾಚಿ ಟೈಟಲ್ ಅನ್ನು ಇಡಲಾಗಿದೆ. ಚಿತ್ರದಲ್ಲಿ ದೆಹಲಿಯ ಉದ್ಯಮಿ ಸಿದ್ಧಾರ್ಥ್ ಜೊತೆ ಕೇರಳದ ಹುಡುಗಿ ಜಾನ್ವಿಗೆ ಹೇಗೆ ಲವ್ ಆಗುತ್ತೆ, ಮುಂದೆ ಎನೆಲ್ಲಾ ತಿರುವು ಸಿಗಲಿದೆ ಅನ್ನೋದೆ ಚಿತ್ರದ ತಿರುಳಾಗಿದೆ.

ಈ ಚಿತ್ರವನ್ನು ತುಷಾರ್ ಎಂಬುವವರು ನಿರ್ದೇಶನ ಮಾಡಲಿದ್ದಾರೆ. ಡಿಸೆಂಬರ್‌ನಿಂದ 'ಪರಮ ಸುಂದರಿ' ಶೂಟಿಂಗ್ ಶುರುವಾಗಲಿದೆ. ಮೊದಲ ಬಾರಿಗೆ ಜಾನ್ವಿ ಮತ್ತು ಸಿದ್ಧಾರ್ಥ್ ಜೊತೆಯಾಗಿ ನಟಿಸುತ್ತಿರುವ ಕಾರಣ, ಚಿತ್ರದ ಕುರಿತು ಅಭಿಮಾನಿಗಳಿಗೆ ಭಾರೀ ನಿರೀಕ್ಷೆಯಿದೆ.



ಪರಮ ಸುಂದರಿ ಕ್ಯಾಚಿ ಟೈಟಲ್

# ಯಶ್‌ಗೆ ಅಪಮಾನ ಲಕ್ಷ್ಮೀಕಾಂತ ರೆಡ್ಡಿ ಸ್ಪಷ್ಟನೆ

ತೆಲುಗಿನಲ್ಲಿ ನಾನೇ ವಿತರಕ



ನಟ ಅಲ್ಲು ಅರ್ಜುನ್ ಅಭಿನಯದ ಪುಷ್ಪ-2 ಚಿತ್ರದ ವಿಚಾರವಾಗಿ ಕನ್ನಡ ಕೆಜಿಎಫ್ ಚಿತ್ರ ಅಥವಾ ನಟ ಯಶ್ ಗೆ ಅಪಮಾನವಾಗುವ ರೀತಿಯಲ್ಲಿ ತಾನು ಮಾತನಾಡಿಲ್ಲ ಎಂದು ಚಿತ್ರ ವಿತರಕ ಲಕ್ಷ್ಮೀಕಾಂತ ರೆಡ್ಡಿ ಹೇಳಿದ್ದಾರೆ.

'ನಟರಾಜ' ಸಿನಿಮಾ ಮಂದಿರಗಳ ಮಾಲೀಕ, ಚಿತ್ರ ವಿತರಕ ಲಕ್ಷ್ಮೀಕಾಂತ ರೆಡ್ಡಿ, 'ತೆಲುಗಿನ ಪುಷ್ಪ2' ಚಿತ್ರದ ವಿತರಕನಾಗಿ ಅದರ ಯಶಸ್ಸು ಬಯಸಿದ್ದೇನೆಯೇ ಹೊರತು, ನಟ ಯಶ್ ಅವರನ್ನಾಗಿಲಿ, ಅವರ ಕೆಜಿಎಫ್ ಸರಣಿಯ ಚಿತ್ರಗಳನ್ನಾಗಲಿ ಅಪಮಾನಿಸಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. 'ನಟ ಅಲ್ಲು ಅರ್ಜುನ್ ನಟನೆಯ ಚಿತ್ರ 'ಪುಷ್ಪ2' ಸಿನಿಮಾದ ಅಖಿಲ ಕರ್ನಾಟಕ ವಿತರಣೆಯನ್ನು ನಾನೇ ಪಡೆದುಕೊಂಡಿದ್ದೇನೆ. ಇತ್ತೀಚೆಗೆ ಚಿತ್ರತಂಡ ಹೈದರಾಬಾದ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಗೆ ನಾನೂ ಹೋಗಿದ್ದೆ. ಚಿತ್ರ ಕೆಜಿಎಫ್2 ಸಿನಿಮಾದ ದಾಖಲೆಯನ್ನೂ ಮೀರಿ ಯಶಸ್ಸು ಗಳಿಸಲಿ ಎಂದು ಅಲ್ಲಿ ಆಶಿಸಿದ್ದೆ.

ಇದರಲ್ಲಿ ತಪ್ಪು ಹುಡುಕಿರುವ ಕೆಲ ಮಂದಿ ಸಾಮಾಜಿಕ ಮಾಧ್ಯಮದಲ್ಲಿ ವಿವಾದ ಸೃಷ್ಟಿ ಮಾಡುತ್ತಿದ್ದಾರೆ. ಸಿನಿಮಾವೊಂದು ದಾಖಲೆಗಳನ್ನೂ ಮೀರಲಿ ಎಂದು ನಿರ್ಮಾಪಕರು, ವಿತರಕರು ಆಶಿಸುವುದು ಸಾಮಾನ್ಯ. ಇಲ್ಲಿ ಯಶ್ ಅವರನ್ನಾಗಲಿ, ಅವರ ಸಿನಿಮಾಗಳನ್ನಾಗಲಿ ಅಪಮಾನಿಸುವುದು ಉದ್ದೇಶವಲ್ಲ' ಎಂದು ಅವರು ಹೇಳಿದರು.

ಅಂತೆಯೇ ನಟ ಯಶ್ ಅವರ ಹಲವು ಸಿನಿಮಾಗಳನ್ನು ತೆಲುಗಿನಲ್ಲಿ ನಾನೇ ವಿತರಣೆ ಮಾಡಿದ್ದೇನೆ. ಕನ್ನಡದ ಹಲವು ಸಿನಿಮಾಗಳನ್ನೂ ವಿತರಿಸಿದ್ದೇನೆ. 'ನಟರಾಜ' ಸಿನಿಮಾ ಮಂದಿರಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಿದ್ದೇನೆ. ಕನ್ನಡವನ್ನಾಗಲಿ, ಕನ್ನಡದ ಸಿನಿಮಾಗಳನ್ನಾಗಲಿ ನಾನು ಕಡೆಗಣಿಸಿಲ್ಲ ಎಂದರು.

# ಭಾರತ- ಆಫ್ರಿಕಾ ನಡುವಿನ ಟಿ20 ಸರಣಿ ಯಾವಾಗ ಆರಂಭ ಯಾವ ಚಾನೆಲ್‌ನಲ್ಲಿ ನೇರಪ್ರಸಾರ

## ಉಭಯ ತಂಡಗಳ ನಡುವೆ ನ. 22 ರಿಂದ ಐದು ಪಂದ್ಯಗಳ ಟೆಸ್ಟ್ ಸರಣಿ ಆರಂಭ ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ಟೀಂ ಇಂಡಿಯಾ, ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿ

ಪ್ರಸ್ತುತ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯನ್ನು ಆಡುತ್ತಿರುವ ಟೀಂ ಇಂಡಿಯಾ ಆ ಬಳಿಕ ಆಸ್ಟ್ರೇಲಿಯಾ ಪ್ರವಾಸಕ್ಕೆ ತಯಾರಿ ಆರಂಭಿಸಲಿದೆ. ಉಭಯ ತಂಡಗಳ ನಡುವೆ ನವೆಂಬರ್ 22 ರಿಂದ ಐದು ಪಂದ್ಯಗಳ ಟೆಸ್ಟ್ ಸರಣಿ ಆರಂಭವಾಗಲಿದೆ. ಆದರೆ ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ಟೀಂ ಇಂಡಿಯಾ, ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯನ್ನು ಆಡಬೇಕಾಗಿದ್ದು, ಈ ಸರಣಿಗಾಗಿ ಭಾರತ ಟಿ20 ತಂಡ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿದೆ. ಉಭಯ ತಂಡಗಳ ನಡುವೆ ನಾಲ್ಕು ಪಂದ್ಯಗಳ ಟಿ20 ಸರಣಿ ನಡೆಯಲ್ಲಿದ್ದು, ಸರಣಿಯ ಮೊದಲ ಪಂದ್ಯ ನವೆಂಬರ್ 8 ರಂದು ನಡೆದರೆ ಕೊನೆಯ ಪಂದ್ಯ ನವೆಂಬರ್ 15 ರಂದು ನಡೆಯಲಿದೆ. ಈ ನಾಲ್ಕು ಪಂದ್ಯಗಳು ಆಫ್ರಿಕಾದ ನಾಲ್ಕು ನಗರಗಳಲ್ಲಿ ಡರ್ಬನ್, ಗೆಕೆಬರ್ಹಾ, ಸೆಂಚುರಿಯನ್ ಮತ್ತು ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯಲಿವೆ. ಈ ಸರಣಿಯ ಬಗ್ಗೆಗಿನ ಪೂರ್ಣ ವಿವರ ಹೀಗಿದೆ.





**ಟಿ20 ಸರಣಿಯ ಸಂಪೂರ್ಣ ವೇಳಾಪಟ್ಟಿ**

| | | |
|---|---|---|
| ಮೊದಲನೇ ಟಿ20 | ನ. 8 | ಡರ್ಬನ್, ರಾ. 9:30 |
| ಎರಡನೇ ಟಿ20 | ನ. 10 | ಗಿಕ್ಬರ್ಹಾ, ರಾತ್ರಿ 9:30 |
| ಮೂರನೇ ಟಿ20 | ನ. 13 | ಸ್ಪೋರ್ಟ್ ಪಾರ್ಕ್, ರಾತ್ರಿ 9:30 |
| ನಾಲ್ಕನೇ ಟಿ20 | ನ. 15 | ಜೋಹಾನ್ಸ್‌ಬರ್ಗ್, ರಾತ್ರಿ 9:30 |

ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ 4 ಪಂದ್ಯಗಳ ಟಿ20 ಸರಣಿ ನವೆಂಬರ್ 8 ರಿಂದ ಆರಂಭವಾಗಲಿದೆ. ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ 4 ಪಂದ್ಯಗಳ ಟಿ20 ಸರಣಿ ಡರ್ಬನ್, ಗೆಕೆಬರ್ಹಾ, ಸೆಂಚುರಿಯನ್ ಮತ್ತು ಜೋಹಾನ್ಸ್ ಬರ್ಗ್ ನಗರಗಳಲ್ಲಿ ನಡೆಯಲಿದೆ. ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ ಟಿ20 ಸರಣಿಯ ಪಂದ್ಯಗಳು ಭಾರತೀಯ ಕಾಲಮಾನ ರಾತ್ರಿ 9:30 ಕ್ಕೆ ಆರಂಭವಾಗಲಿವೆ. ಟಾಸ್ ರಾತ್ರಿ 9 ಗಂಟೆಗೆ ನಡೆಯಲಿದೆ. ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ 4 ಪಂದ್ಯಗಳ ಟಿ20 ಸರಣಿಯನ್ನು ಭಾರತದಲ್ಲಿ ಸ್ಪೋರ್ಟ್ಸ್ 18 ಮತ್ತು ಸ್ಪೋರ್ಟ್ಸ್ 18 ಚಾನೆಲ್‌ಗಳಲ್ಲಿ ವೀಕ್ಷಿಸಬಹುದು. ಇದಲ್ಲದೇ, ನೀವು ಈ ಪಂದ್ಯವನ್ನು ಡಿಡಿ ಸ್ಪೋರ್ಟ್ಸ್‌ನಲ್ಲಿಯೂ ವೀಕ್ಷಿಸಬಹುದು. ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ 4 ಪಂದ್ಯಗಳ ಟಿ20 ಸರಣಿಯನ್ನು ಆನ್‌ಲೈನ್‌ನಲ್ಲಿ ಜಿಯೋ ಆಪ್‌ನಲ್ಲಿ ವೀಕ್ಷಿಸಬಹುದು.

**ಟಿ20 ಸರಣಿಗೆ ಭಾರತ ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ರಿಂಕು ಸಿಂಗ್, ತಿಲಕ್ ವರ್ಮಾ, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ರಮಣದೀಪ್ ಸಿಂಗ್, ವರುಣ್ ಚಕ್ರವರ್ತಿ, ರವಿ ಬಿಷ್ಣೋಯ್, ಅರ್ಷದೀಪ್ ಸಿಂಗ್, ವೈಶಾಖ್ ವಿಜಯಕುಮಾರ್, ಅವೇಶ್ ಖಾನ್ ಮತ್ತು ಯಶ್ ದಯಾಳ್.

# ಆಸೀಸ್ ಪ್ರವಾಸಕ್ಕೂ ಮುನ್ನ ರಾಣಾ ಅಬ್ಬರ

ಕೆಲವೇ ಕೆಲವು ತಿಂಗಳ ಹಿಂದೆ ಭಾರತದ ಯುವ ಕ್ರಿಕೆಟಿಗ ಹರ್ಷಿತ್ ರಾಣಾ ಎಂದರೆ ಎಲ್ಲಾರಿಗೂ ಥಟ್ಟನೇ ನೆನಪಾಗುತ್ತಿದ್ದಿದ್ದು, ಐಪಿಎಲ್ ವೇಳೆ ತನ್ನ ಆಕ್ರಮಣಕಾರಿ ಆಚರಣೆಯಿಂದ, ಶಿಕ್ಷೆಗೆ ಗುರಿಯಾಗಿದ್ದ ಕೆಕೆಆರ್ ತಂಡದ ಬೌಲರ್. ಆದರೀಗ ತನ್ನ ಅದ್ಭುತ ಪ್ರದರ್ಶನದ ಮೂಲಕ ಟೀಂ ಇಂಡಿಯಾವನ್ನು ಸೇರಿಕೊಂಡಿರುವ ಹರ್ಷಿತ್ ರಾಣಾ ಕಾಂಗರೂಗಳ ನಾಡಲ್ಲಿ ತನ್ನ ಕೈಚಳಕ ತೋರಲು ಸಜ್ಜಾಗಿದ್ದಾರೆ. ವಾಸ್ತವವಾಗಿ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿ ಮುಗಿದ ಬಳಿಕ ಟೀಂ ಇಂಡಿಯಾ ಐದು ಪಂದ್ಯಗಳ ಟೆಸ್ಟ್ ಸರಣಿಗಾಗಿ ಆಸ್ಟ್ರೇಲಿಯಾ ಪ್ರವಾಸ ಮಾಡಲಿದೆ. ಈ ಪ್ರವಾಸಕ್ಕಾಗಿ ಈಗಾಗಲೇ ಬಿಸಿಸಿಐ ತಂಡವನ್ನು ಸಹ ಪ್ರಕಟಿಸಿದೆ. ಆ ಪ್ರವಾಸಕ್ಕೆ ಇದೇ ಮೊದಲ ಬಾರಿಗೆ ಹರ್ಷಿತ್ ರಾಣಾರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಕೂಡಲೇ ಮಿಂಚಿನ ಪ್ರದರ್ಶನ ನೀಡಿರುವ ಹರ್ಷಿತ್ ರಾಣಾ, ಪ್ರಸ್ತುತ ನಡೆಯುತ್ತಿರುವ ರಣಜಿ ಟ್ರೋಫಿಯಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಬೌಲಿಂಗ್ ಬಳಿಕ ಬ್ಯಾಟಿಂಗ್‌ನಲ್ಲೂ ತಮ್ಮ ಸಾಮರ್ಥ್ಯ ತೋರಿದ ಹರ್ಷಿತ್ ರಾಣಾ 78 ಎಸೆತಗಳಲ್ಲಿ ನಾಲ್ಕು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳ ಸಹಿತ 59 ರನ್‌ಗಳ ಇನ್ನಿಂಗ್ಸ್ ಆಡಿದರು.



**5 ವಿಕೆಟ್ 59 ರನ್**

**ಹರ್ಷಿತ್ ರಾಣಾ ಪ್ರಸ್ತುತ ಭಾರತದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ದೇಶೀ ಟೂರ್ನಿಯಲ್ಲಿ ದೆಹಲಿ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅದರಂತೆ ದೆಹಲಿ ಹಾಗೂ ಅಸ್ಸಾಂ ನಡುವೆ ರಣಜಿ ಪಂದ್ಯ ನಡೆಯುತ್ತಿದ್ದು, ಆ ಪಂದ್ಯದಲ್ಲಿ ಮೊದಲು ಬೌಲಿಂಗ್‌ನಲ್ಲಿ ಮ್ಯಾಜಿಕ್ ಮಾಡಿದ ರಾಣಾ, 19.3 ಓವರ್‌ಗಳಲ್ಲಿ 80 ರನ್ ನೀಡಿ 5 ವಿಕೆಟ್ ಪಡೆದರು. ರಾಣಾ ಮಾರಕ ದಾಳಿಗೆ ಬೆದರಿದ ಅಸ್ಸಾಂ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 330 ರನ್ ಗಳಿಸಲಷ್ಟೇ ಶಕ್ತವಾಯಿತು.**

## ಸಚಿನ್ 40 ನೇ ವಯಸ್ಸಿನಲ್ಲಿ ರಣಜಿ ಆಡಬಹುದಾದರೆ

# ಕೊಹ್ಲಿ- ರೋಹಿತ್‌ಗೆ ಏಕೆ ಸಾಧ್ಯವಿಲ್ಲ

ನ್ಯೂಜಿಲೆಂಡ್ ವಿರುದ್ಧದ ಮೊದಲ ಎರಡು ಟೆಸ್ಟ್ ಪಂದ್ಯಗಳನ್ನು ಸೋತಿರುವ ಟೀಂ ಇಂಡಿಯಾ 12 ವರ್ಷಗಳ ಬಳಿಕ ತವರಿನಲ್ಲಿ ಟೆಸ್ಟ್ ಸರಣಿಯನ್ನು ಕಳೆದುಕೊಂಡಿದೆ. ತಂಡದ ಈ ಕಳಪೆ ಸಾಧನೆಗೆ ಬ್ಯಾಟಿಂಗ್ ವೈಫಲ್ಯವೇ ಪ್ರಮುಖ ಕಾರಣ ಎಂಬುದು ಎಲ್ಲಾರಿಗೂ ತಿಳಿದಿರುವ ಸಂಗತಿ. ಅದರಲ್ಲೂ ಅನುಭವಿಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಕಳಪೆ ಬ್ಯಾಟಿಂಗ್ ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು. ಆಡಿರುವ ಎರಡು

ಅಭಿಮಾನಿಗಳ ನೇರ ಪ್ರಶ್ನೆ



ಟೆಸ್ಟ್‌ಗಳಲ್ಲಿ ಈ ಇಬ್ಬರು ಆಟಗಾರರು ಒಂದೊಂದು ಇನ್ನಿಂಗ್ಸ್‌ನಲ್ಲಿ ಶೂನ್ಯಕ್ಕೆ ಔಟಾದರೆ, ಉಳಿದ ಇನ್ನಿಂಗ್ಸ್‌ಗಳಲ್ಲಿ ರನ್ ಕಲೆಹಾಕಿದ್ದು ಕೂಡ ಅಲ್ಪಸ್ವಲ್ಪ. ಅನುಭವಿಗಳಾಗಿ ತಂಡವನ್ನು ಮುನ್ನಡೆಸಬೇಕಿದ್ದ ಈ ಇಬ್ಬರು ಬೇಗನೇ ಪೆವಿಲಿಯನ್ ಸೇರಿಕೊಂಡಿದ್ದು, ಇತರ ಆಟಗಾರರ ಪ್ರದರ್ಶನದ ಮೇಲೆ ಪರಿಣಾಮ ಬೀರಿತು. ಹೀಗಾಗಿ ಈ ಇಬ್ಬರ ವಿರುದ್ಧ ಸೋಶಿಯಲ್ ಮೀಡಿಯಾದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದ್ದು, ರೋಹಿತ್ ಹಾಗೂ ಕೊಹ್ಲಿ ಫಾರ್ಮ್ ಕಂಡುಕೊಳ್ಳಲು ದೇಶೀ ಕ್ರಿಕೆಟ್ ಆಡಲಿ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

**ಕೊಹ್ಲಿ-ರೋಹಿತ್ ರಣಜಿ ಆಡಲಿ**

ಬೆಂಗಳೂರು ಮತ್ತು ಪುಣೆ ಎರಡೂ ಟೆಸ್ಟ್ ಪಂದ್ಯಗಳಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಂದ ಹೆಚ್ಚಿನ ನಿರೀಕ್ಷೆಗಳನ್ನು ಇಡಲಾಗಿತ್ತು. ಆದರೆ, ಇಬ್ಬರೂ ಸ್ಟಾರ್ ಬ್ಯಾಟ್ಸ್‌ಮನ್‌ಗಳು ಅಭಿಮಾನಿಗಳಿಗೆ ಸಾಕಷ್ಟು ನಿರಾಸೆ ಮೂಡಿಸಿದರು. ಪುಣೆ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ರೋಹಿತ್ ಖಾತೆ ತೆರೆಯದೆ ಔಟಾದರೆ, ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕೊಹ್ಲಿ ಸ್ಥಿತಿಯೂ ಇದಕ್ಕಿಂತ ಹೊರತಾಗಿರಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ ಒಂದು ರನ್ ಗಳಿಸಿದ್ದ ಕೊಹ್ಲಿ ಎರಡನೇ ಇನ್ನಿಂಗ್ಸ್‌ನಲ್ಲಿ 17 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಸತತ ಎರಡು ಪಂದ್ಯಗಳಲ್ಲಿ ಈ ಇಬ್ಬರ ಕಳಪೆ ಆಟವನ್ನು ನೋಡಿದ ಅಭಿಮಾನಿಗಳು ಕೊಹ್ಲಿ-ರೋಹಿತ್ ವಿರುದ್ಧ ಗುಡುಗಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಆಡದಿರುವ ಬಗ್ಗೆ ಅಭಿಮಾನಿಗಳು ಈ ಇಬ್ಬರು ಲೆಜೆಂಡರಿ ಬ್ಯಾಟ್ಸ್‌ಮನ್‌ಗಳಿಗೆ ನೇರ ಪ್ರಶ್ನೆಗಳನ್ನು ಕೇಳಿದ್ದಾರೆ. 'ಕ್ರಿಕೆಟ್ ದೇವರು' ಸಚಿನ್ ತೆಂಡೂಲ್ಕರ್ 40ರ ಹರೆಯದಲ್ಲಿ ರಣಜಿ ಟ್ರೋಫಿಯಲ್ಲಿ ಆಡುತ್ತಾರೆ ಎಂದಾದರೆ ರೋಹಿತ್-ಕೊಹ್ಲಿ ಏಕೆ ಆಡಬಾರದು ಎಂದು ಅಭಿಮಾನಿಗಳು ಸೋಶಿಯಲ್ ಮೀಡಿಯಾದಲ್ಲಿ ಧ್ವನಿ ಎತ್ತಿದ್ದಾರೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ದೇಶೀಯ ಕ್ರಿಕೆಟ್ ಆಡಿ ವರ್ಷಗಳೇ ಕಳೆದಿವೆ. ಕೊಹ್ಲಿ ತಮ್ಮ ಕೊನೆಯ ರಣಜಿ ಪಂದ್ಯವನ್ನು 2012 ರಲ್ಲಿ ಆಡಿದ್ದರು.

# ಪಾಕ್ ತಂಡಕ್ಕೆ ನೂತನ ಮುಖ್ಯ ಕೋಚ್ ನೇಮಕ



ಗ್ಯಾರಿ ಕರ್ಸ್ಟನ್ ಕಿಕ್ ಔಟ್

ಇತ್ತೀಚೆಗಷ್ಟೇ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯನ್ನು 2-1 ಅಂತರದಿಂದ ಗೆದ್ದುಕೊಂಡಿದ್ದ ಪಾಕಿಸ್ತಾನ ಕ್ರಿಕೆಟ್ ತಂಡ ಇದೀಗ ಕೆಲವೇ ದಿನಗಳಲ್ಲಿ ಆಸ್ಟ್ರೇಲಿಯಾ ಪ್ರವಾಸವನ್ನು ಕೈಗೊಳ್ಳಲಿದೆ. ಈ ಪ್ರವಾಸಕ್ಕಾಗಿ ಈಗಾಗಲೇ ತಂಡವನ್ನು ಸಹ ಪ್ರಕಟಿಸಲಾಗಿದೆ. ಆದರೆ ಈ ನಡುವೆ ಪಾಕ್ ಮಂಡಳಿ ಮತ್ತೊಂದು ವಿವಾದಾತ್ಮಕ ನಿರ್ಧಾರವನ್ನು ತೆಗೆದುಕೊಂಡಿದ್ದು, ತಂಡದ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದ ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಗ್ಯಾರಿ ಕರ್ಸ್ಟನ್ ಅವರನ್ನು ತಮ್ಮ ಹುದ್ದೆಯಿಂದ ತೆಗೆದುಹಾಕಿದೆ. ಇದೀಗ ಅವರ ಜಾಗಕ್ಕೆ ಆಸ್ಟ್ರೇಲಿಯಾದ ಮಾಜಿ ವೇಗದ ಬೌಲರ್ ಜೇಸನ್ ಗಿಲ್ಲೆಸ್ಪಿ ಅವರನ್ನು ಪಾಕಿಸ್ತಾನದ ಏಕದಿನ ಹಾಗೂ ಟಿ20 ತಂಡಕ್ಕೆ ನೂತನ ಮುಖ್ಯ ಕೋಚ್ ಆಗಿ ನೇಮಿಸಿದೆ.

**ಮಾಹಿತಿ ನೀಡಿದ ಮಂಡಳಿ:** ಗ್ಯಾರಿ ಕರ್ಸ್ಟನ್ ರಾಜೀನಾಮೆ ನೀಡಿದ ಕೆಲವೇ ಕ್ಷಣಗಳಲ್ಲಿ ಅದನ್ನು ಅಂಗೀಕರ ಮಾಡಿದ ಪಾಕ್ ಮಂಡಳಿ, ಆ ಕ್ಷಣವೇ ತಂಡಕ್ಕೆ ನೂತನ ಮುಖ್ಯ ಕೋಚ್ ಆಗಿ ಗಿಲ್ಲೆಸ್ಪಿ ಅವರನ್ನು ನೇಮಿಸಿದೆ. ಪಾಕ್ ಮಂಡಳಿಯ ಈ ಹಠಾತ್ ನಿರ್ಧಾರದಿಂದ ಸಾಕಷ್ಟು ಪ್ರಶ್ನೆಗಳು ಹುಟ್ಟಿಕೊಂಡಿದ್ದು, ಮಂಡಳಿಯೇ ಗ್ಯಾರಿ ಅವರಿಂದ ಒತ್ತಾಯ ಪೂರ್ವಕವಾಗಿ ರಾಜೀನಾಮೆ ಪಡೆದಿದೆ ಎಂದು ಪಾಕ್ ಮಾಧ್ಯಮಗಳು ವರದಿ ಮಾಡುತ್ತಿವೆ.

ಇನ್ನು ಮುಖ್ಯ ಕೋಚ್ ಆಯ್ಕೆತ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ, 'ಮುಂದಿನ ತಿಂಗಳು ನಡೆಯಲಿರುವ ಸೀಮಿತ ಓವರ್‌ಗಳ ಆಸ್ಟ್ರೇಲಿಯಾ ಪ್ರವಾಸದಲ್ಲಿ ಜೇಸನ್ ಗಿಲ್ಲೆಸ್ಪಿ ಪಾಕಿಸ್ತಾನ ಪುರುಷರ ಕ್ರಿಕೆಟ್ ತಂಡದ ಕೋಚ್ ಆಗಿರುತ್ತಾರೆ. ಈ ಹಿಂದೆ ಕೋಚ್ ಆಗಿದ್ದ ಗ್ಯಾರಿ ಕರ್ಸ್ಟನ್ ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದು ಅದನ್ನು ಅಂಗೀಕರಿಸಲಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತಿಳಿಸಿದೆ.

ಏಪ್ರಿಲ್ 2024 ರಲ್ಲಿ ಪಾಕ್ ತಂಡದ ಮುಖ್ಯ ಕೋಚ್ ಆಗಿದ್ದ ಕರ್ಸ್ಟನ್ ಅವರ ಅಧಿಕಾರಾವಧಿಯು ಕೇವಲ ಆರು ತಿಂಗಳಲ್ಲಿ ಅಂತ್ಯಗೊಂಡಿದೆ. ಅವರ ಅಧಿಕಾರಾವಧಿಯಲ್ಲಿ, ಅಮೆರಿಕದಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನವು ನಿರಾಶಾದಾಯಕ ಪ್ರದರ್ಶನ ನೀಡಿತ್ತು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966